# ಜನಶಕ್ತಿ


ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 9

ಮಾರ್ಚ್ 02, 2008

ಕನ್ನಡ ವಾರಪತ್ರಿಕೆ

ರೂ. 5/-

## ರಾಷ್ಟ್ರಪತಿ ಆಡಳಿತ ಮತ್ತು ಪ್ರಜಾಪ್ರಭುತ್ವದ ಸ್ವರೂಪ


ಶಿಕ್ಷಣ ಗುಣಮಟ್ಟದ ಹೆಸರಿನಲ್ಲಿ

## ದಲಿತ ವಿದ್ಯಾರ್ಥಿ ಸ್ಕಾಲರ್ ಶಿಪ್‌ಗೇ ಕುತ್ತು

## ಪಾಕಿಸ್ತಾನ



## ಸರ್ವಾಧಿಕಾರಕ್ಕೆ ಜನತೆಯ ತಿರಸ್ಕಾರ



## ಲಾಲ್‌ಸಲಾಂ ಕಾಮ್ರೇಡ್ ಫಿಡೆಲ್

ಕ್ರಿಕೆಟ್ :





## ಆಟಗಾರರು ಹರಾಜು!

ಎಂಭತ್ತಾಲ್ಕರ ಇಳಿ ವಯಸ್ಸಿನಲ್ಲಿ ಗ್ರಾಮಾಂತರ ಪ್ರದೇಶ ಅಡ್ಡೂರಿನಲ್ಲಿ ಹಚ್ಚ ಹಸುರಾಗಿದ್ದ ತೋಟದ ಮಧ್ಯೆ ಹಳೆಯ ಹಂಚಿನ ಮನೆಯಲ್ಲಿ ಏಕಾಂಗಿಯಾಗಿ ಬದುಕುತ್ತಿರುವ ಸ್ವಾತಂತ್ರ್ಯ ಹೋರಾಟಗಾರರೂ, ಅವಿಭಜಿತ ಕಮ್ಯೂನಿಸ್ಟ್ ಪಕ್ಷದ ಪ್ರಾರಂಭಿಕ ದಿನಗಳಲ್ಲಿ ಮಂಗಳೂರು ದಾವಣಗೆರೆ ಭದ್ರಾವತಿಗಳಲ್ಲಿ ಪಕ್ಷದ ಕಾರ್ಯಕರ್ತರಾಗಿ ದುಡಿದ ಅಡ್ಡೂರು ಶಿವಶಂಕರರಾಯರನ್ನು ದಿನಾಂಕ 10.2.08 ರಂದು ಜನಶಕ್ತಿ ಪತ್ರಿಕೆಗಾಗಿ ಕೃಷ್ಣಪ್ಪ ಕೊಂಚಾಡಿ, ಸುನೀಲ್ ಕುಮಾರ್ ಬಜಾಲ್ ಹಾಗೂ ದಯಾನಂದ ಶೆಟ್ಟಿಯವರು ಸಂದರ್ಶಿಸಿದರು.


# ಸಮಾಜವಾದಿ ಕನಸುಗಳು ನನಸಾಗಲೇಬೇಕು

## ಶಿವಶಂಕರರಾಯರೊಂದಿಗೆ ಮಾತುಕತೆ

ಕಮ್ಯುನಿಸ್ಟ್ ಪಕ್ಷ ವಿಭಜನೆಯ ನಂತರ ಸಿಪಿಐ ಪಕ್ಷದೊಂದಿಗೆ ಗುರುತಿಸಿಕೊಂಡಿದ್ದ ಶಿವಶಂಕರರಾಯರು ಪಕ್ಷದ ಸಾಹಿತ್ಯ ಮತ್ತು ಪತ್ರಿಕೆಗಳನ್ನು ಮಾರುತ್ತಿದ್ದರು. ಕ್ರಮೇಣ ಮಂಗಳೂರಿನಿಂದ ಅಡ್ಡೂರಿಗೆ ಹಿಂತಿರುಗಿ ಗುಡ್ಡ ಕಡಿದು ಬಂಜರು ಭೂಮಿಯನ್ನು ಕಂಗೊಳಿಸುವ ಹಚ್ಚ ಹಸುರಿನ ಕೃಷಿ ತೋಟವನ್ನಾಗಿ ಮಾರ್ಪಡಿಸಿದುದಲ್ಲದೆ ಕೃಷಿಗೆ ತಾನು ನಂಬಿದ ವೈಜ್ಞಾನಿಕ ವಿಧಾನವನ್ನು ಅಳವಡಿಸಿ ಪ್ರಗತಿಪರ ರೈತರೆನಿಸಿಕೊಂಡು ಹಲವಾರು ಪ್ರಶಸ್ತಿಗಳನ್ನು ಪಡೆದು ಕೃಷಿ ತಜ್ಞರೆಂದೂ ಗುರುತಿಸಿಕೊಂಡಿದ್ದಾರೆ.

### ಪ್ರಗತಿಪರರೊಂದಿಗೆ

ಕಳೆದ ನಾಲ್ಕೈದು ವರುಷಗಳಿಂದ ಡಿ.ವೈ.ಎಫ್.ಐ ಮತ್ತು ಇತರ ಪ್ರಗತಿಪರ ಸಂಘಟನೆಗಳ ಸಭಾ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವ ಇವರು ಸಿಪಿಐ(ಎಂ) ನ ಕೇಂದ್ರಸಮಿತಿ ಮುಖ ಪತ್ರಿಕೆ ಪೀಪಲ್ಸ್ ಡೆಮಾಕ್ರಸಿಯ ಚಂದಾದಾರರಾಗಿ ಪತ್ರಿಕೆಯನ್ನು ಓದುತ್ತಿರುವುದಲ್ಲದೆ ಕೆಲವು ಪ್ರಮುಖ ಲೇಖನಗಳನ್ನು ಝೆರಾಕ್ಸ್ ಮಾಡಿ ಇತರರಿಗೆ ಕಳುಹಿಸಿಕೊಟ್ಟು ಓದಲು ಪ್ರೇರೇಪಿಸುತ್ತಿದ್ದಾರೆ. ಅದೇ ರೀತಿ ಸಿಪಿಐನ ಮುಖಪತ್ರಿಕೆ 'ನ್ಯೂ ಏಜ್'ನ್ನೂ ಕೂಡ ತರಿಸುತ್ತಿದ್ದಾರೆ. ಹಲವಾರು ದಿನಪತ್ರಿಕೆಗಳು ಮತ್ತು ಹಲವಾರು ಮಾರ್ಕ್ಸ್‌ವಾದಿ ಸಾಹಿತ್ಯ ಕೃತಿಗಳನ್ನು ತನ್ನ ಸುತ್ತ ಹರಡಿಕೊಂಡಿದ್ದ ರಾಯರು ಸದಾ ಓದುವುದರಲ್ಲಿಯೂ ಕ್ರಿಯಾಶೀಲರಾಗಿದ್ದಾರೆ. ವಯೋ ಸಹಜವಾದ ದೈಹಿಕ ಬಳಲಿಕೆ, ಶ್ರವಣಶಕ್ತಿಯು ಕುಂದುವಿಕೆ ಮತ್ತು ದೃಷ್ಟಿಗೆ ಸಂಬಂಧಿಸಿದ ದೋಷಗಳಿದ್ದರೂ ನಮ್ಮನ್ನು ಕಂಡ ತಕ್ಷಣವೇ ಅಗಾಧ ಸಂತೋಷದಿಂದ ಬರಮಾಡಿಕೊಂಡು "ನಿಮ್ಮೊಂದಿಗೆ ಬಹಳ ವಿಷಯ ಚರ್ಚಿಸಲು ಇದೆ" ಎಂದು ಹೇಳಿಕೊಳ್ಳುವ ಮೂಲಕ ಅಕ್ಟೋಬರ್ ಕ್ರಾಂತಿ, ಅನಂತರದ ರಷ್ಯಾದ ಬೆಳವಣಿಗೆ, ಭಾರತದಲ್ಲಿ ಸಮಾಜವಾದಿ ಚಳುವಳಿ ಕಮ್ಯೂನಿಸ್ಟ್ ಆಂದೋಲನದ ಬಗ್ಗೆ ಕೋಮುವಾದದ ಬಗ್ಗೆ ಮತ್ತು ಪ್ರಸ್ತುತ ಪಶ್ಚಿಮ ಬಂಗಾಳದ ಬೆಳವಣಿಗೆಗಳ ಬಗ್ಗೆ ಸುಮಾರು ಒಂದೂವರೆ ತಾಸುಗಳ ಕಾಲ ತಮ್ಮ ಅಭಿಪ್ರಾಯವನ್ನು ಬಿಂಬಿಸಿದರು. ಎಲ್ಲೂ ಕೂಡಾ ಸಿನಿಕತನ, ಭ್ರಮನಿರಸನ, ಅಪನಂಬಿಕೆ ವ್ಯಕ್ತಪಡಿಸದೆ ಮಾರ್ಕ್ಸ್‌ವಾದದ ಬಗ್ಗೆ ಅಚಲ ವಿಶ್ವಾಸವನ್ನೇ



ವ್ಯಕ್ತಪಡಿಸಿದುದು ವಿಶೇಷವಾಗಿದೆ.

### ಜಾಗತೀಕರಣ ಕಣ್ನೋಟ

ಸೋವಿಯತ್ ಯೂನಿಯನ್ ಮತ್ತು ಇತರ ಸಮಾಜವಾದಿ ರಾಷ್ಟ್ರಗಳ ಪತನದ ಬಗ್ಗೆ ವಿಶ್ವಾಸಭರಿತ ಮಾತುಗಳನ್ನು ತಮ್ಮ ನೆನಪಿನ ಆಳದ ಘಟನೆಗಳೊಂದಿಗೆ ವಿವರಿಸುತ್ತಾ ಕಮ್ಯೂನಿಸ್ಟ್ ಚಳುವಳಿಯು ಎಂತಹ ಸವಾಲುಗಳಿಗೆ ಎಡೆಯೊಡ್ಡಬೇಕು ಎಂಬುದನ್ನು ಹೇಳಿದರು. ಅವರು ಹೇಳಿದ್ದೇನೆಂದರೆ ಲೆನಿನ್‌ನ ಕಾಲಘಟ್ಟದಲ್ಲೇ ಆ ವ್ಯವಸ್ಥೆಯನ್ನು ನಾಶ ಮಾಡಲು ಸಾಮ್ರಾಜ್ಯಶಾಹಿ ಬಂಡವಾಳಶಾಹಿ ಶಕ್ತಿಗಳ ಪ್ರಯತ್ನ ನಡೆಸುತ್ತಿತ್ತು. ಅದು ರಷ್ಯ ಚೀನಾದ ನಂತರ ಪ್ರಬಲ ಕಮ್ಯೂನಿಸ್ಟ್ ಪಕ್ಷ ಮತ್ತು ಸದಸ್ಯತ್ವವನ್ನು ಹೊಂದಿದ ಇಂಡೋನೇಷ್ಯಾದಲ್ಲಿ ಸರ್ವಾಧಿಕಾರಿ ಸುಹಾರ್ತೋ ಮೂಲಕ ಒಂದು ಮಿಲಿಯ ಕಮ್ಯೂನಿಸ್ಟರ ಹತ್ಯೆ ಮಾಡಿದೆ. ಇರಾಕ್‌ನಲ್ಲೂ ಇದು ನಡೆದಿದೆ. ಎರಡನೇ ಮಹಾಯುದ್ಧದಲ್ಲಿ ಲಕ್ಷಾಂತರ ಸಂಖ್ಯೆಯ ಕಮ್ಯೂನಿಸ್ಟರ ಬಲಿದಾನ ನಡೆದಿದೆ. ಇಂತಹ ತ್ಯಾಗ ವ್ಯರ್ಥವಾಗುವುದಿಲ್ಲ. ಸಮಾಜವಾದಿ ಸಮಾಜದ ಕನಸು ನನಸಾಗಲೇಬೇಕು. ಅದು ಚರಿತ್ರೆಯ ಅನಿವಾರ್ಯತೆ" ಎಂದು ಹೇಳಿದರು.

ಆದುದರಿಂದ ತಾತ್ಕಾಲಿಕ ಸೋಲು, ಹಿನ್ನಡೆ, ಅಪಪ್ರಚಾರಗಳಿಗೆ ಕಮ್ಯೂನಿಸ್ಟರು ಎದೆಗುಂದಬಾರದು. ಧೈರ್ಯದಿಂದ ಮಾರ್ಕ್ಸ್‌ವಾದದ ಅಧ್ಯಯನದಡಿಯಲ್ಲಿ ಮುಂದುವರಿಯಬೇಕು ಎಂದು ಹೇಳಿದರು. ಸೋವಿಯತ್ ಯೂನಿಯನ್‌ನ ಕುಸಿತದ ನಂತರ ಮತ್ತೆ ಕಳೆದ ದಶಕದಲ್ಲಿ ಲ್ಯಾಟಿನ್ ಅಮೇರಿಕಾದಲ್ಲಿ ಆದ ರಾಜಕೀಯ ಬದಲಾವಣೆ, ಚೀನಾ, ಕ್ಯೂಬಾ, ವಿಯೆಟ್ನಾಂ, ಕೊರಿಯಾ ದೇಶಗಳ ಸಾಧನೆಗಳಿಂದ ಸ್ಫೂರ್ತಿ ಪಡೆಯಬೇಕು" ಎಂದು ಹೇಳಿದರು. ಈ ಜಗತ್ತಿನಲ್ಲಿ "ಏನಾದರೂ ತ್ಯಾಗ ಬಲಿದಾನಗಳ ಉಜ್ವಲ ಇತಿಹಾಸವಿದ್ದರೆ ಅದು ಕಮ್ಯೂನಿಸ್ಟರದ್ದು ಮಾತ್ರ" ಎಂದು ಹೇಳಿದರು.

ಒಟ್ಟಿನಲ್ಲಿ ಅಡ್ಡೂರು ಶಿವಶಂಕರರಾಯರ ಮಾರ್ಕ್ಸ್‌ವಾದದ ಬಗೆಗಿನ ಅಭಿಮಾನ ಕಾಳಜಿ ಇಳಿವಯಸ್ಸಿನ ಅವಧಿಯಲ್ಲೂ ಕಡಿಮೆಗೊಂಡಿಲ್ಲ. ಇವರ ಬದುಕಿನ ಬಗ್ಗೆ ಇಣುಕು ನೋಟ ಬೀರುವ ಪುಸ್ತಕ "ಎಂಬತ್ತರ ಕೊಯಿಲಿನ ಕಾಳುಗಳು" ಎಂದು ಈಗಾಗಲೇ ಪ್ರಕಟವಾಗಿದೆ. ಪ್ರಾರಂಭದ ಕಮ್ಯೂನಿಸ್ಟ್ ಆಂದೋಲನ, ಭೂಗತ ಜೀವನದ ಬಗ್ಗೆ ಮಾಹಿತಿಗಳು ದೊರೆಯುತ್ತದೆ. ಅಡ್ಡೂರು ಶಿವಶಂಕರರಾಯರು ದೀರ್ಘಕಾಲ ಬಾಳಲಿ ಎಂದು ಜನಶಕ್ತಿ ಹಾರೈಸುತ್ತದೆ.

■ ಕೃಷ್ಣಪ್ಪ ಕೊಂಚಾಡಿ

## ಕೈಗಾರಿಕೀರಣ ಭೂಸುಧಾರಣೆಯ ಬಗ್ಗೆ

ಭೂಸುಧಾರಣೆಯ ಬಗ್ಗೆ ವಿಶ್ಲೇಷಿಸುತ್ತಾ, ಅದರ ಅವಶ್ಯಕತೆ ಮತ್ತು ಚಾರಿತ್ರಿಕ ಅನಿವಾರ್ಯತೆಯ ಬಗ್ಗೆ ಓರ್ವ ಪ್ರಗತಿಪರ ಕೃಷಿಕರಾಗಿಯೂ, ಕಮ್ಯೂನಿಸ್ಟರಾಗಿಯೂ ನೀಡಿದ ವಿವರಗಳು "ನಂದಿಗ್ರಾಮದ" ಬಗ್ಗೆ ಬಡಾಯಿ ಕೊಚ್ಚಿಕೊಂಡು ಅಪಪ್ರಚಾರ ಮಾಡುತ್ತಿರುವವರಿಗೆ ಒಂದು ಜ್ವಲಂತ ಉತ್ತರವಾಗಿದೆ. ಅವರು ಹೇಳಿದ್ದೇನೆಂದರೆ "ಪಶ್ಚಿಮ ಬಂಗಾಳದಲ್ಲಿರುವ ಎಡಪಂಥೀಯ ಸರಕಾರವನ್ನು ಬುಡಮೇಲು ಮಾಡಲು ಪ್ರಯತ್ನಿಸುತ್ತಿದ್ದಾರೆ. ಆ ಸರ್ಕಾರ 30 ವರ್ಷಗಳಿಂದ ಜನರ ಪ್ರೀತಿ ವಿಶ್ವಾಸ ಗಳಿಸಿ ಭೂಸುಧಾರಣೆ ಮಾಡಿ ಕೃಷಿಯಲ್ಲಿ ಅಗಾಧ ಬೆಳವಣಿಗೆ ಸಾಧಿಸಿದೆ. ಆದರೆ ನಿಜಾಂಶವೆಂದರೆ ಕೈಗಾರಿಕೆ ಇಲ್ಲದೆ ಅಥವಾ ಬೆಳೆಯದೇ ಹೋದರೆ ಆ ರಾಜ್ಯಕ್ಕೆ ಭವಿಷ್ಯವಿಲ್ಲ. ಕೈಗಾರಿಕಾ ಬೆಳವಣಿಗೆ ವಾಸ್ತವಿಕವಾಗಿ ಕೃಷಿಯನ್ನು ನಂಬಿರುವ ಜನರ ಆರ್ಥಿಕಾಭಿವೃದ್ಧಿಗೆ ಅನಿವಾರ್ಯ. ಅವರು ಹೇಳದೆಯೂ ಓರ್ವ ರೈತನಾಗಿ ನಾನು ಧೈರ್ಯದಿಂದ ಹೇಳುವುದೇನೆಂದರೆ ಒಂದು ಕುಟುಂಬಕ್ಕೆ ಹೆಚ್ಚೆಂದರೆ ಒಂದೂವರೆ ಎಕರೆ ಸಾಗುವಳಿ ಮಾಡಬಹುದು. ಈ ಒಂದೂವರೆ ಎಕರೆ ಸಾಗುವಳಿಯಿಂದ ಒಂದು ಕುಟುಂಬದ ಜೀವನ ಸಾಗಿಸಲು ಸಾಧ್ಯವೇ ಇಲ್ಲ. ಆಗ ಅನಿವಾರ್ಯತೆ ಎಂದರೆ ಕೃಷಿಯೇತರ ಜೀವನೋಪಾಯಕ್ಕೆ ತೊಡಗಬೇಕು. ವಿದ್ಯಾಭ್ಯಾಸವಿದ್ದರೆ ಸೇವಾ ರಂಗ, ಇಲ್ಲದಿದ್ದರೆ ಕೈಗಾರಿಕಾರಂಗ. ಇನ್ನೊಂದು ಅವರು ತಮ್ಮ ಪರಿಸರದ ಉದಾಹರಣೆ ನೀಡಿದರು.

"ಭೂಸುಧಾರಣೆಯಿಂದ 4 ಎಕರೆ ಕೃಷಿಭೂಮಿ ಒಂದು ಒಕ್ಕಲಿಗೆ ದೊರೆಯಿತು. ಅದು ಈಗ ಮಕ್ಕಳ ಮಧ್ಯೆ ಹಂಚಿಕೆಯಾಗಿ ಪ್ರತಿಯೊಬ್ಬರ ಪಾಲಿನ ಜಾಗದಲ್ಲಿ ಕೃಷಿ ಖರ್ಚಿನ ಬಾಬ್ತು ಆಗಿದೆ. ಇದೇ ಪರಿಸ್ಥಿತಿ ಪಶ್ಚಿಮ ಬಂಗಾಳದಲ್ಲೂ ಬಂದಿರುತ್ತದೆ. ಕುಟುಂಬ ವಿಘಟನೆ ಅನಿವಾರ್ಯ. ಜಾಗವೂ ವಿಘಟನೆಯಾಗುತ್ತದೆ. ವಾಸ್ತವತೆ ಹೀಗಿರುವಾಗ ಜನರ ಜೀವನ ನಿರ್ವಹಣೆ ಕೃಷಿಯಿಂದ ತೊಂದರೆಗೆ ಒಳಗಾದಾಗ ಆ ಜನರು ಪರ್ಯಾಯ ಜೀವನಕ್ಕೆ ಕೈಗಾರಿಕೆ ಅನಿವಾರ್ಯವಲ್ಲವೇ? ಎಂದು ಪ್ರಶ್ನಿಸಿದರು. ಆದುದರಿಂದ ಕೈಗಾರಿಕೀಕರಣ ಅನಿವಾರ್ಯ. ಅದಕ್ಕಾಗಿ ಬುದ್ಧದೇವ್ ಭಟ್ಟಾಚಾರ್ಜಿಯವರನ್ನು ನಾವು ಬೆಂಬಲಿಸುತ್ತೇನೆ ಎಂದು ಹೇಳಿದರು. ಯಾವ ರೀತಿ ಕಳೆದ 3 ದಶಕಗಳಿಂದ ಬಂಗಾಳದ ಎಡಪಂಥೀಯ ಸರಕಾರಕ್ಕೆ ಕೈಗಾರಿಕೀಕರಣಕ್ಕೆ ಸಂಬಂಧಿಸಿ ಕೇಂದ್ರ ಸರಕಾರ ಸತಾಯಿಸಿದ ಪರಿಯನ್ನು ವಿವರಿಸಿದರು. ಈಗ ಎಡಪಕ್ಷಗಳ ಮೇಲೆ ಯೋಜನಾಬದ್ಧ ಧಾಳಿ ನಡೆಯುತ್ತಿದೆ. ಚರಿತ್ರೆಯ ಬಗ್ಗೆ ಹೇಳುತ್ತಾ ರಷ್ಯಾದಲ್ಲಿ ಕ್ರಾಂತಿಯಾದ ನಂತರ ಆವತ್ತಿನ ಜಾಗತಿಕ ಬಂಡವಾಳಶಾಹಿಗಳು ಆ ದಾಹಕ್ಕೆ ಕೈಗಾರಿಕಾ ಸಹಾಯ ತಂತ್ರಜ್ಞಾನ ನೀಡಲು ಸಿದ್ಧರಿಲ್ಲದಾಗ ಸ್ವತಃ ಲೆನಿನ್‌ರವರು ಮ್ಯಾಗ್ಸಿಂ ಗೋರ್ಕಿಯವರ ಮೂಲಕ ಪತ್ರ ಬರೆಯಿಸಿ ಜನತೆಗೆ ಸಹಕರಿಸಿದ್ದನ್ನು ವಿವರಿಸಿದರು. ಮಾತ್ರವಲ್ಲದೆ ಆ ಕ್ರಾಂತಿಯ ಕುಡಿಯನ್ನು ಮೊಳಕೆಯಲ್ಲೇ ಚಿವುಟಿ ಹಾಕಲು ಒಂದಾದ 14 ರಾಷ್ಟ್ರಗಳ ದುಷ್ಟ ಕೂಟದ ಬಗ್ಗೆಯೂ ನಮ್ಮ ಗಮನ ಸೆಳೆದರು.

## ಸಂಪಾದಕೀಯ

# ವಿಕೃತಗೊಳಿಸುವ ಪ್ರಯತ್ನಗಳು

ಪುರಸಭೆ, ಮಹಾನಗರ ಪಾಲಿಕೆ ಮುಂತಾದ ಚುನಾಯಿತ ಸ್ಥಳೀಯ ಸಂಸ್ಥೆಗಳಿಗೆ ಅಧ್ಯಕ್ಷರು, ಉಪಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆದದ್ದು, ಸ್ವಾಗತಾರ್ಹ. ಯಾಕೆಂದರೆ ಚುನಾವಣೆಗಳು ನಡೆದ ಆರೆಂಟು ತಿಂಗಳು ಕಳೆದರೂ ಇಲ್ಲಿಯವರೆಗೂ ಪದಾಧಿಕಾರಿಗಳ ಆಯ್ಕೆಯಾಗಿರಲಿಲ್ಲ. ಮೀಸಲಾತಿ ನಿಗದಿಯಲ್ಲಿಯೂ ಹಲವಾರು ಸಂಕುಚಿತ ರಾಜಕೀಯ ಹಿತಾಸಕ್ತಿಗಳು ಕೆಲಸ ಮಾಡಿದವು. ಇದು ಆಯಾ ಪ್ರದೇಶಗಳ ಜನತೆಯ ಪ್ರಶ್ನೆಗಳನ್ನು ಬಗೆಹರಿಸಿ, ಪ್ರಗತಿಗೆ ಬಳಸಬಹುದಾದ ಒಂದು ಅವಕಾಶ, ಅವಧಿಯನ್ನು ಈ ವಿಳಂಬ ನಿರರ್ಥಕಗೊಳಿಸಿತ್ತು. ಆ ಮಟ್ಟಿಗೆ ಚುನಾಯಿತ ಪ್ರತಿನಿಧಿಗಳು ಮತ್ತು ಈ ಸಂಸ್ಥೆಗಳು ಜನರ ನಿರೀಕ್ಷೆಗೆ ತಕ್ಕಂತೆ ಕಾರ್ಯ ನಿರ್ವಹಿಸುವಂತಾಗಬೇಕು.


ಆದರೆ ಇದೇ ಹೊತ್ತಿನಲ್ಲಿ ಇಂತಹ ಅಧ್ಯಕ್ಷ ಉಪಾಧ್ಯಕ್ಷರು, ಮೇಯರ್, ಉಪಮೇಯರ್‌ಗಳ ಆಯ್ಕೆಯಲ್ಲಿ ನಡೆದ ವಿದ್ಯಾಮಾನಗಳು ಆತಂಕಕ್ಕೆ ಈಡುಮಾಡುವಂತಾಗಿವೆ. ಹಲವಾರು ಕಡೆ ಚುನಾಯಿತ ಪ್ರತಿನಿಧಗಳ ಅಪಹರಣ, ಆಮಿಷ, ಬೆದರಿಕೆ ಮುಂತಾದ ಆ ಕ್ರಮಗಳು ನಡೆದ ವರದಿಯಾಗಿವೆ ಪಕ್ಷಾಂತರಗಳು ನಡೆದಿವೆ. ರಾಜಕೀಯ ಅನೈತಿಕ ಮೈತ್ರಿಗಳೂ ಏರ್ಪಟ್ಟಿವೆ. ಶಿವಮೊಗ್ಗದಲ್ಲಿ ತತ್ವ ನಿಷ್ಠೆ, ಜನನಿಷ್ಠೆ ಎಂದೆಲ್ಲಾ ಬೊಗಳೆ ಹೊಡೆದ ಬಿಜೆಪಿಯೊಳಗೆ ಎರಡು ಗುಂಪುಗಳು ಅಧಿಕಾರಕ್ಕಾಗಿ ಬಹಿರಂಗ ಬಡಿದಾಟಕ್ಕೆ ಇಳಿದವು. ಇಂತಹ ಒಳ ಜಗಳ ಕಾಂಗ್ರೆಸ್‌ನಲ್ಲಿಯೂ ಕಂಡಿದೆ. ಕೆ.ಜಿ.ಎಫ್.ನಲ್ಲಿ ಜೆಡಿ(ಎಸ್) ಪಕ್ಷವು ಬಿಜೆಪಿಯೊಂದಿಗೆ ಸೇರಿ ಅಧಿಕಾರ ಗಿಟ್ಟಿಸಿದೆ. ರಾಜ್ಯದ ಹಲವಾರು ಕಡೆ ಬಿಜೆಪಿ ವಿರುದ್ಧ ಜೆಡಿ(ಎಸ್) ಸಂಘರ್ಷಿಸಿದರೂ ಕೆ.ಜಿ.ಎಫ್.ನ ವಿದ್ಯಮಾನವು ಅಧಿಕಾರದಾಹವು ತರಬಹುದಾದ ಅಪಾಯವನ್ನು ಧ್ವನಿಸಿದೆ. ಹಾಗೆಯೇ ಬಹುತೇಕ ಅವರ ಪಕ್ಷದ ಸದಸ್ಯರನ್ನು ಒಳಗೊಂಡು ಇತರರಿಗೆ ಹಣ ಆಮಿಷ ನೀಡಬೇಕಾದ ಸ್ಥಿತಿ ಏರ್ಪಟ್ಟಿರುವುದು ಸಾಮಾನ್ಯವಾಗಿ ಕಂಡು ಬರುವ ದೃಶ್ಯ. ಇವು ಜನರ ನಿಜವಾದ ಅಭಿವ್ಯಕ್ತಿಯನ್ನು ವಿಕೃತಗೊಳಿಸುವ ಪ್ರಯತ್ನಗಳು ಪ್ರಜಾತಂತ್ರಕ್ಕೆ ಮಾರಕವಾದ ಪ್ರತೀತಿಗಳು.

ಇಂದು ನಗರೀಕರಣ ಹೆಚ್ಚುತ್ತಿರುವ ಇಲ್ಲಿನ ಭೂಮಿ ಅಭಿವೃದ್ಧಿ ವಹಿವಾಟುಗಳು ವ್ಯಾಪಾರೀಕರಣಗೊಂಡಿವೆ. ಹಣಗಳಿಕೆಗೆ ಈ ರಾಜಕೀಯ ಅಧಿಕಾರವು ಸುಲಭದ ಮಾರ್ಗವೆಂದೆನಿಸಿ ಬಿಟ್ಟಿದೆ. ಮೇಲಾಗಿ ಅಭಿವೃದ್ಧಿ ಯೋಜನೆಗಳಿಗೆಂದು ಅಪಾರ ಪ್ರಮಾಣದ ಹಣ ತೊಡಗಿಸುವಿಕೆಯು ಅಧಿಕಾರ ಪಡೆಯುವ ಪೈಪೋಟಿಯನ್ನು ಹೆಚ್ಚಿಸಿದೆ. ಹೀಗಾಗಿ ಜನರ ಹಿತ ಎಂದೋ ಮರೆಯಾಗಿ ಮಾಫಿಯಾಗಳ ಹಿತಗಳೇ ಪರಮೋಚ್ಚವಾಗುವ ಸನ್ನಿವೇಶಗಳನ್ನು ಹೆಚ್ಚಿಸಿವೆ.

ಇಂದು ರಾಜ್ಯದ ಜನತೆ ಅಪಾರ ಸಮಸ್ಯೆಗಳಿಂದ ಜೀವನ ನಿರ್ವಹಣೆಯ ಕಷ್ಟಗಳಿಂದ ಬಳಲುತ್ತಿದ್ದಾರೆ. ಸ್ಥಳೀಯ ಸಂಸ್ಥೆಗಳಿಗೆ ಸಂಪನ್ಮೂಲಗಳಿಲ್ಲ, ಆದರೆ ಅದೇ ಹೊತ್ತಿನಲ್ಲಿ ಅಭಿವೃದ್ಧಿಗೆಂದು ವಿದೇಶಿ ಹಣಕಾಸು ಸಂಸ್ಥೆಗಳ ಸಾಲಕ್ಕೆ ಕೈಯೊಡ್ಡಲಾಗುತ್ತಿದೆ. ಪರಿಣಾಮ ಈ ಸಂಸ್ಥೆಗಳು ವಿಧಿಸುವ ಷರತ್ತು, ಹೇರುವ ಬಡ್ಡಿ, ತೆರಿಗೆ ಇತ್ಯಾದಿಗಳನ್ನು ತರಲು ಆ ಹೊರೆಯನ್ನು ಜನರ ಮೇಲೆ ಹೊರಿಸುವ ಕೃತ್ಯಕ್ಕೆ ಈ ಸಂಸ್ಥೆಗಳು ಇಳಿಯುತ್ತವೆ. ಇಂತಹದ್ದಕ್ಕೆ ಪ್ರತಿರೋಧ ಒಡ್ಡಿ, ಹೋರಾಟದ ಮೂಲಕ ಹೆಚ್ಚಿನ ಸಂಪನ್ಮೂಲ ಕ್ರೋಢೀಕರಿಸಬೇಕು. ರಾಜ್ಯ ಸರ್ಕಾರದಿಂದ ನಿಧಿ ಪಡೆಯುವುದು ಅತ್ಯಗತ್ಯ. ಆದರೆ ಅಧಿಕಾರದ ಚುಕ್ಕಾಣಿ ವಹಿಸಿಕೊಂಡ ರಾಜಕೀಯ ಪಕ್ಷಗಳ ನೀತಿ-ನಿರ್ವಹಣೆಗಳು ಇದಕ್ಕೆ ಪೂರಕವಿಲ್ಲ.

ಇಲ್ಲವಾದಲ್ಲಿ ಈ ದಿಕ್ಕಿಗೆ ಬರುವಂತೆ ಜನರ ಒತ್ತಡವೂ ಅತ್ಯಗತ್ಯ.


# ರೇಬಿಸ್ ರೋಗ ಮತ್ತು ಸದಾನಂದ ಗೌಡರ ಪರಿವಾರ




ಚುನಾವಣೆಗಳು ಮತ್ತು ಅಧಿಕಾರದ ಗದ್ದುಗೆ ತಮ್ಮಿಂದ ದೂರವಾಗುತ್ತಿದೆ ಎಂಬ ಹತಾಶೆಯಲ್ಲಿರುವ ಸಂಘ ಪರಿವಾರವು ತನ್ನ ಧಾಳಿಗಳನ್ನು ಹೆಚ್ಚಿಸುವುದರಿಂದ ಏನನ್ನೋ ಒಂದಿಷ್ಟು ಪಡೆಯಬಹುದು ಎಂದೇ ಭಾವಿಸಿದಂತೆ. 'ಶಂಕಿತ ಉಗ್ರರ' ಅಪರಾಧಿಗಳು ಸಾಬೀತಾಗುವ ಮೊದಲೇ, ತೀರಾ ತನಿಖೆಯು ಪ್ರಾಥಮಿಕ ಹಂತದಲ್ಲಿರುವಾಗಲೇ ಅದನ್ನು ಬೆಳೆಸಲು, ಬಳಸಲು ಮಾಧ್ಯಮಗಳಲ್ಲಿ ಹಾಗೂ ಆಡಳಿತದಲ್ಲಿಯೂ ಅಡಗಿ ಕುಳಿತಿರುವ ಕರಸೇವಕರು 'ನಿಷ್ಠೆಯಿಂದ' ಶ್ರಮಿಸುತ್ತಿದ್ದಾರೆ. ಈ ಪೆಡಂಬೂತಗಳನ್ನು ನಮ್ಮ ನೆರೆಹೊರೆಯ ಶಬ್ಬೀರ್, ಮಹ್ಮದ್, ಯುಸೂಫ್‌ಗಳ ಹೆಸರು ಕಂಡಲ್ಲಿಯೇ ಹುಡುಕುವ 'ಶಂಕಿತ' ಬೇಹುಗಾರಿಕೆಯ ಕಣ್ಣುಗಳನ್ನು ಸೃಷ್ಟಿಸಿಬಿಟ್ಟಿವೆ. ಜನ ಸತ್ಯಾಸತ್ಯತೆ ಅರಿಯಲು ಕುತೂಹಲಿಗಳಾಗಿರುವಾಗಲೇ ಕಾರ್ಯಕ್ರಮ ನಿಗದಿಗೊಳಿಸಿದಂತೆ ಬಜರಂಗದಳ, ಶ್ರೀರಾಮಸೇನೆ ಇತ್ಯಾದಿಗಳು ಕಾರ್ಯಕ್ರಮಗಳನ್ನು ನಡೆಸಿವೆ ಮತ್ತು ಜನರನ್ನೇ ಇಲ್ಲಿಂದ ನಿಷೇಧಿಸುವಂತೆ ಆಗ್ರಹಗಳನ್ನು ಮಾಡುತ್ತಿವೆ.

**ಕೊಲ್ಲುವವರಿಗೆ ಕಾವಲು**

ಇದೆಲ್ಲಾ ಸಾಲದು ಎಂಬಂತೆ ದ.ಕನ್ನಡದ ಬಿ.ಸಿರೋಡ್‌ನಲ್ಲಿ ಬಜರಂಗದಳದ ಮಾಜಿ ಸಚಿವ ನಾಗರಾಜಶೆಟ್ಟಿ ನೇತೃತ್ವದಲ್ಲಿ ಸತತವಾಗಿ ಕೋಮು ಧಾಳಿಗಳು ನಡೆಯುತ್ತಿವೆ. ಈ ವಾರದಲ್ಲಿ ಒಬ್ಬ ಮುಸ್ಲಿಂ ಆಟೋ ಡ್ರೈವರ್‌ನ ಕೊಲೆಯೂ ಅಲ್ಲಿ ನಡೆದಿದೆ. ಕೊಲೆಗಾರರು ಬಜರಂಗದಳದವರೇ ಎಂದು ಗುರುತಿಸಲಾಗಿದೆ. ಹಾಗೆಯೇ ಉಡುಪಿಯ ಉಚ್ಚಿಲದಲ್ಲಿ ಮುಸ್ಲಿಂರೊಬ್ಬರ ಹೊಟೆಲ್ ಮೇಲೆ ಬ್ಯಾನರ್ ಕಟ್ಟಿ ಪ್ರಚೋದನಾತ್ಮಕವಾಗಿ ವರ್ತಿಸಿ, ಬ್ಯಾನರ್ ಹರಿದರೆಂದು ಮುಸ್ಲಿಂರ ಮೇಲೆ ಧಾಳಿ ನಡೆಸಿದ್ದಾರೆ. ಗಮನಿಸಬೇಕಾದ ಸಂಗತಿಯೆಂದರೆ ಗಲಾಟೆ ತಡೆಯುವ ಕರ್ತವ್ಯದಲ್ಲಿದ್ದ ಪೊಲೀಸ್ ಪೇದೆಯನ್ನು ಮನಸೋ ಇಚ್ಛೆ ಥಳಿಸಿದ್ದಾರೆ. ಇದರ ನೇತೃತ್ವ ವಹಿಸಿ ಗಲಭೆಗೆ ಪ್ರಚೋದಿಸಿದ ಬಿಜೆಪಿಯ ಮಾಜಿ ಶಾಸಕ ಲಾಲಾ ಮೆಂಡನ್. ಈ ಮೆಂಡನ್ ನಿರ್ದೇಶಿತ ಧಾಳಿಯ ಬಗ್ಗೆ ಪೇದೆಯೇ ದೂರು ನೀಡಿದರೂ ಮೆಂಡನ್ ಹೆಸರು ತೆಗೆಯಲು ಎಸ್.ಪಿ.ಯೇ ಪೇದೆ ಮೇಲೆ ಒತ್ತಡ ಹೇರಿದ್ದಾರೆ. ಅಂದರೆ ಇನ್ನು ಸಾಮಾನ್ಯರ ಪಾಡೇನು ಎಂಬ ಅಲ್ಲಿ ಆತಂಕ ಮಡುಗಟ್ಟಿದೆ.



**ಉಗ್ರರ ಸೃಷ್ಟಿ**

ಇದೇ ಪುಂಡ ಪಡೆ ಹುಬ್ಬಳ್ಳಿ, ಬಾಗಲಕೋಟೆ, ಗದಗ್‌ಗಳಲ್ಲಿ ರಾಜಾರೋಷವಾಗಿ 'ತ್ರಿಶೂಲ' ಹಂಚುತ್ತಿದೆ. ಇದು ನೀಡಿರುವುದು ಪೂಜೆಗಲ್ಲ, ಕೊಲ್ಲಲು ಎಂಬುದು ತಿಳಿಯದಷ್ಟು ಪೊಲೀಸರು ಅಮಾಯಕರೇನಲ್ಲ. ಆದರೆ ಅಲ್ಲಿ 'ಉಗ್ರ'ರ ವಿರುದ್ಧ ಆತ್ಮರಕ್ಷಣೆಯ ಹಂಚಿಕೆಯಾಗಿ ಕಂಡಿರಬಹುದು. ಇಂತಹ ಸಮರ್ಥನೆಗಳು ಇನ್ನೂ ಹೆಚ್ಚು 'ಶಂಕಿತ ಉಗ್ರರನ್ನು' ಸೃಷ್ಟಿಯಾಗಬಹುದು. ಇಂತಹ ಕ್ರಮಗಳು ಭಯೋತ್ಪಾದನೆಯನ್ನು ಮಟ್ಟಹಾಕುವವೇ? ಅಥವಾ ಬೆಳೆಸುವವೇ?

ನಾಗರಾಜಶೆಟ್ಟಿ, ಮೆಂಡನ್, ಬೋಪಯ್ಯನಂತಹ ನಾಯಕರು ಶಾಸಕರಾಗಿ ಸಂವಿಧಾನದ ಮೇಲೆ ಪ್ರಮಾಣ ಮಾಡಿದವರು. ಇಂತಹುದೇ ಕೆಲಸಗಳಲ್ಲಿ ಕಾಲ ಕಳೆದು ತಮ್ಮ ಕ್ಷೇತ್ರಗಳಲ್ಲಿ ತಾವು, ತಮ್ಮ ಪಕ್ಷ ಮಾಡಿರುವ ಘನ ಸಾಧನೆಗಳಿಂದ ಸೋಲುವ ಭೀತಿಯಿಂದಲೇ ಕೋಮುದ್ವೇಷದ ಕಿಚ್ಚುಹಚ್ಚಿ ಸ್ಥಾನ ದಕ್ಕಿಸಿಕೊಳ್ಳುವ ತಂತ್ರದ ಫಲ.

ಬಿಜೆಪಿ ಸಂಘಪರಿವಾರ ಹೀಗೆ ಹತಾಶೆಯಲ್ಲಿರುವುದು ತನ್ನ ಧೋರಣೆ ಬಗ್ಗೆ ಭಿನ್ನಾಭಿಪ್ರಾಯ ಇರುವವರ ಮೇಲೆಯೇ ಏರಿ ಹೋಗಿ ಕುಟ್ಟುವಂತಹ ಫ್ಯಾಸಿಸ್ಟ್ ಕ್ರಮಗಳು ಕಡಿಮೆಯಾಗಿಲ್ಲ.

**ಹುಚ್ಚು ಹಿಡಿದಿರುವುದು ಯಾರಿಗೆ?**

ಈ ಸಂಘಪರಿವಾರದ ಛೋಟಾ ಮೋಟಾ ನಾಯಕರು ಕರ್ನಾಟಕವನ್ನು ಜನಾಂಗೀಯ ಹತ್ಯಾಕಾಂಡದ ಗುಜರಾತ್ ಮಾಡುವುದಾಗಿ ಪದೇ ಪದೇ ಹೇಳುತ್ತಾ, ಬೆದರಿಸುತ್ತಾ ತಿರುಗುವುದನ್ನು ತೀವ್ರವಾಗಿ ಟೀಕಿಸಿದ ಜ್ಞಾನಪೀಠ ಪುರಸ್ಕೃತ ಡಾ. ಯು.ಆರ್.ಅನಂತಮೂರ್ತಿಯವರನ್ನು ಬಿಜೆಪಿ ಅಧ್ಯಕ್ಷ ಸದಾನಂದಗೌಡ 'ಹುಚ್ಚುನಾಯಿ' ಎಂದು ಕರೆಯುವಷ್ಟರ ಮಟ್ಟಿಗೆ ಹೋದದ್ದು ಅಸಹನೆಯ ದ್ವೇಷದ ಕುದಿಯ ಪ್ರಮಾಣವನ್ನು ತೋರಿಸುತ್ತದೆ. ಇದಕ್ಕೆ ಸಭ್ಯಸ್ಥ ಸೋಗಿನ ಸುರೇಶ್ ಕುಮಾರ್ ದನಿಗೂಡಿಸಿರುವುದು ಬಿಜೆಪಿ ರೇಬಿಸ್ (ಹುಚ್ಚುನಾಯಿ ಕಡಿತದ ರೋಗ) ಎಂಬುದಕ್ಕೆ ಬೇರೆ ಉದಾಹರಣೆಯೇ ಬೇಕಿಲ್ಲ. ಇದನ್ನು ಅನಂತಮೂರ್ತಿಯವರು ಗುರುತಿಸಿರುವುದರಲ್ಲಿ ತಪ್ಪೇನಿಲ್ಲ.

'ಬಿಜೆಪಿ ರೇಬಿಸ್, ಕಾಂಗ್ರೆಸ್ ಕ್ಯಾನ್ಸರ್' ಎಂದು ಕರೆದಿರುವುದು, ಹಲವು ವಿಷಯಗಳ ಬಗ್ಗೆ ಎಡಪಕ್ಷಗಳನ್ನು ಒಳಗೊಂಡು ಕೆಲವು ಭಿನ್ನಾಭಿಪ್ರಾಯ ಇರುವುದಾಗಿಯೂ, ಸ್ಪಷ್ಟನೆ ಬೇಕಿದೆ ಎಂಬುದಾಗಿಯೂ ಅನಂತಮೂರ್ತಿ ಹೇಳಿದ್ದು ಅವರ ರಾಜಕೀಯ, ಸೈದ್ಧಾಂತಿಕ ನಿಲುವು ಅಷ್ಟೇ. ಅದಕ್ಕೆ ತಾಳ್ಮೆಯ, ಸಮಚಿತ್ತದ ಉತ್ತರ ನೀಡಬೇಕೇ ಹೊರತು ಬೊಗಳಿಕೆ, ತೆಗಳಿಕೆಯಿಂದಲ್ಲ. ಹಾಗೆ ಅನಂತಮೂರ್ತಿಯವರ ಪ್ರಶ್ನೆ, ಅಭಿಪ್ರಾಯಗಳು ಕೇವಲ ಅವರದ್ದಷ್ಟೇ ಅಲ್ಲ, ನಾಡಿನ ಪ್ರಗತಿ, ಸಾಮರಸ್ಯ ಸಂಸ್ಕೃತಿ ಬಗ್ಗೆ ಅಪಾರ ಕಾಳಜಿ ಇರುವ ಯಾರಿಗೂ ಬಂದಿರುವಂತಹದ್ದೇ. ವೈಚಾರಿಕವಾಗಿ ಸ್ಪಷ್ಟನೆ ಉತ್ತರ ನೀಡಲಾಗದೆ ಇರುವಾಗ ವ್ಯಕ್ತಿಗತವಾಗಿ ಚಾರಿತ್ರ್ಯವಧೆಯಂತಹ ಧಾಳಿ ನಡೆಸುವುದು ಸಂಘಪರಿವಾರದ ಒಂದು ವಿಧಾನ. ಹೀಗೆ ಬಾಯಿ ಮುಚ್ಚಿಸಬಹುದೆಂದು ಭಾವಿಸಿದ್ದರೆ ಅದು ಅವರ ಭ್ರಮೆ.

**ಪೇಜಾವರರ ರಾಜಕಾರಣ.....**

ಅನಂತಮೂರ್ತಿಯವರನ್ನು ರಾಜಕೀಯ ಸಾಹಿತಿಯೆಂದೂ (ಚಿ.ಮೂ., ಬೈರಪ್ಪನಂತಹವರು ಶುದ್ಧ ಸಾಹಿತಿಗಳೆಂದೂ) ಕಮ್ಯೂನಿಸ್ಟ್ ಪಕ್ಷದಿಂದ ಸ್ಪರ್ಧಿಸಿ ಗೆದ್ದುಬರಲಿ ಎಂದು ಗೌಡ, ಸುರೇಶ್ ಕುಮಾರ್ ಸವಾಲು ಹಾಕಿರುವುದು ವಿಚಿತ್ರವೇ ಸರಿ. ಅನಂತಮೂರ್ತಿಯವರ 'ಸಂಸ್ಕಾರ', 'ಭಾರತಿಪುರ'ದಂತಹ ಸಾಹಿತ್ಯ ಬರೆದು ಇವರು ಮಾತನಾಡಲಿ ಎಂದು ಮರುಪ್ರಶ್ನೆ ಹಾಕಿದರೆ ಏನು ಮಾಡುತ್ತಾರೆ? ಬದಲಾವಣೆ ಬಯಸುವ ಎಡಪಂಥೀಯ ಒಲವಿನ ಗೆಳೆಯರೊಂದಿಗೆ, ಅಂತಹ ಆಶಯಗಳ ವೇದಿಕೆಗಳಲ್ಲಿ ವಿಚಾರ ಹಂಚಿಕೊಂಡ ಮಾತ್ರಕ್ಕೆ ವ್ಯಗ್ರವಾಗಿ ಟೀಕಿಸುವುದು 'ಚೆಡ್ಡಿವೀರರ' ನಿಜವಾದ ದೃಷ್ಟಿ ನೆಟ್ಟಿರುವುದೆಲ್ಲಿ ಎಂದು ತಿಳಿಸುತ್ತದೆ. ಗೌಡರ ತರ್ಕ ಹಿಡಿದರೆ ಪೇಜಾವರ ಸ್ವಾಮಿಗಳು, ಅದ್ಯಾವ ಸನ್ಯಾಸಿಗಳು ಎಂಬ ಪ್ರಶ್ನೆ ಹುಟ್ಟುತ್ತದೆ. ಇವರೊಂದಿಗೆ ಗುರುತಿಸಿಕೊಂಡ ಆದಿಚುಂಚನಗಿರಿ, ತುಮಕೂರು ಸಿದ್ಧಗಂಗಾ, ಬೇಲಿಮಠ, ರವಿಶಂಕರ್ ಇತ್ಯಾದಿ. ಸ್ವಾಮಿಗಳು ಮಠ, ಪೀಠ, ಖಾವಿ ತೊರೆದು ರಾಜಕಾರಣಕ್ಕೆ ಬರಲು ಹೇಳಬಹುದಲ್ಲ. ಪೇಜಾವರ, ರವಿಶಂಕರ್‌ರಂತಹವರ ಕೆಲಸಗಳು, ಅವರ ತೊಡಗುವಿಕೆ ಯಾವ ರಾಜಕಾರಣಕ್ಕಿಂತ ಕಡಿಮೆಯಿದೆ.

**ವರ್ಣ ದ್ವೇಷಿಗಳ ಅವಿವೇಕ!**

ಇದೇ ಸಂಘ ಪರಿವಾರ ಹಿಂದೆ ರಾಷ್ಟ್ರಕವಿ ಕುವೆಂಪುರವರ ಮೇಲೆ ಸತತ ಧಾಳಿ ನಡೆಸಿತ್ತು. ಈಗಲೂ ಕಾರ್ನಾಡ್‌ರಂಥಹವರನ್ನು ಒಳಗೊಂಡು ದೇಶದ ಬುದ್ಧಿ ಜೀವಿಗಳ ಮೇಲೆ ಧಾಳಿ ನಡೆಸಿದೆ. ಈಗಲೂ 'ಸಂಸ್ಕಾರ' ಕಾದಂಬರಿ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಪಠ್ಯವಾಗಿರುವುದನ್ನು ವಿರೋಧಿಸಿ ರದ್ದುಪಡಿಸಲು ಇದೇ ಚೆಡ್ಡಿಪಡೆ ಹೆಣೆದ ಷಡ್ಯಂತ್ರಗಳು ಫಲಿಸಲಿಲ್ಲ. ಇದು ಬಿಜೆಪಿಯೊಳಗಿನ ರೇಬಿಸ್ ವೈರಾಣು. ಈ ಸಂಘ ಪರಿವಾರಿಗಳ ನೆತ್ತಿಗೇರಲು ಒಂದು ಕಾರಣವಾಯಿತು. ಅನಂತಮೂರ್ತಿ ಸಾಹಿತ್ಯಕ್ಷೇತ್ರದ ಕಪ್ಪುಚುಕ್ಕೆ' ಎಂದೆಲ್ಲಾ ಮಾಜಿ ಶಾಸಕ ಸುರೇಶ್‌ಕುಮಾರ್ ಶುದ್ಧ ಅವಿವೇಕಿಯಂತೆ ಮಾತನಾಡಿದ್ದಾರೆ. 'ಕಪ್ಪು' ಬಣ್ಣ ಪ್ರತಿಭಟನೆಯ ಸಂಕೇತ. ಅದು ಗಟ್ಟಿತನ ಎಂಬುದು 'ವರ್ಣದ್ವೇಷ'ಗಳಿಗೆ ಅರ್ಥವಾಗುವುದಿಲ್ಲ.

**ಹುಮ್ಮಸ್ಸು ಇಮ್ಮಡಿಯಾಗಲಿ**

ಅನಂತಮೂರ್ತಿ ಯೆಂಬ 'ಈ ಕಪ್ಪು ಚುಕ್ಕೆ' ವಿಚಾರಗಳು ಚಂದ್ರನಂತೆ ಪೂರ್ಣ ಬೆಳೆಯುತ್ತಾ, ಅರಳುತ್ತಾ ಹೋಗಲಿ. ಸದಾನಂದಗೌಡ ರಂಥಹವರು ಅಧ್ಯಕ್ಷಗಿರಿ, ಸಂಸದ ಸ್ಥಾನ ಕಳೆದುಕೊಂಡರೆ ಅವರ ಸುತ್ತಲಿನ ನಾಯಿಗಳೂ ಮೂಸಿನೋಡಲಿಕ್ಕಿಲ್ಲ. ಆದರೆ ವ್ಯವಸ್ಥೆಯ ಕ್ರೌರ್ಯಗಳನ್ನು ಪ್ರಶ್ನಿಸುವ ಚಿಂತಕರನ್ನು, ಹೋರಾಟಗಾರರನ್ನು ಸಮಾಜ ಮರೆಯುವುದಿಲ್ಲ. ಹೀಗಾಗಿ ಅನಂತಮೂರ್ತಿಯವರು ಟೀಕೆಗಳಿಂದ ವಿಚಲಿತರಾಗಬೇಕಿಲ್ಲ. ಸರಿದಾರಿಯಲ್ಲಿರುವ ಅವರ ಹೋರಾಟದ ಹುಮ್ಮಸ್ಸು ಇಮ್ಮಡಿಯಾಗಲಿ.

### ಯಾರು ಹುಚ್ಚುನಾಯಿ?

ಅಮಾನುಷ ಕಡುಧೂರ್ತ ಒಳಕಣ್ಣು ಅಂಧ
ಸುಪ್ರಸಿದ್ಧ ಸಾಹಿತಿಗೆ ಹುಚ್ಚು ನಾಯಿ ಎಂದ
ಈತನಿಗೆ ಸತ್ಯವನು ಕೇಳಿದರೆ ಸಿಡುಕು
ಸುಳ್ಳಾಡಿ ಸಾಮ್ರಾಜ್ಯ ಕಟ್ಟಲಿಕೆ ತೊಡಕು

-ವಿಡಂಬಾರಿ

# ರಾಜಸ್ಥಾನ ಇಂದು

**ಡಾ. ಜಿ. ಭಾಸ್ಕರಮಯ್ಯ**

ಭಾಜಪಾದ ಪ್ರಮುಖ ಕಾರ್ಯಾಚರಣೆಗಳು ಇಂದು ನಡೆಯುತ್ತಿರುವುದು ರಾಜಸ್ಥಾನದ ಜೈಪುರದಲ್ಲಿ. ಅದು ಬ್ರಹ್ಮಾವರ್ತ ಆಯಾವರ್ತದ ಹೆಡ್ ಆಫೀಸು. ರಾಜಸ್ಥಾನದಲ್ಲಿ ಇಂದು ಸರಕಾರದ ಖರ್ಚಿನಲ್ಲಿ ದೇವಸ್ಥಾನಗಳಲ್ಲಿ ಪೂಜೆ ಅರ್ಚನೆ ನಡೆಸುವ ವ್ಯವಸ್ಥೆ ಮಾಡಲಾಗಿದೆ. ಇದಕ್ಕೆ ತದ್ವಿರುದ್ಧವಾಗಿ ಕ್ರೈಸ್ತರ ಧಾರ್ಮಿಕ ಆಚರಣೆಗಳಿಗೆ, ಸಮಾರಂಭಗಳಿಗೆ ಅಡ್ಡಿಯನ್ನುಂಟು ಮಾಡಲಾಗುತ್ತಿದೆ. ಆಡಳಿತಯಂತ್ರ ಇಂತಹ ಗೂಂಡಾಗಿರಿಗೆ ಪರೋಕ್ಷವಾಗಿ ಕುಮ್ಮಕ್ಕು ನೀಡುತ್ತಿದೆ. ಜತೆಜತೆಗೆ ರಾಜಸ್ಥಾನದಲ್ಲಿ 'ಮತಾಂತರ ನಿಷೇಧ' ಕಾನೂನನ್ನು ಜಾರಿ ಮಾಡಲಾಗಿದೆ. ತೊಗಾಡಿಯಾ ಬ್ರಾಂಡಿನ ತ್ರಿಶೂಲದೀಕ್ಷಾ ಕಾರ್ಯಕ್ರಮ ಅವ್ಯಾಹತವಾಗಿ ನಡೆಯುತ್ತಿದೆ. ವಿಹಿಂಪದಿಂದ ಮಗರಾ-ಮೇಖಡಾ ಕ್ಷೇತ್ರದಲ್ಲಿ ನೂರಾರು ಮಂದಿರಗಳ ನಿರ್ಮಾಣದ ಯೋಜನೆಗಳು ಕಾರ್ಯಾರಂಭ ಮಾಡಿದೆ. ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಮಕ್ಕಳ ಹಾಸ್ಟೆಲಿನಲ್ಲಿ "ಭೋಜನ ಮಂತ್ರದ ಹೆಸರಿನಲ್ಲಿ ಹಿಂದುತ್ವಕ್ಕೆ ಮಕ್ಕಳ ಮನಸ್ಸನ್ನು ಅನುಕೂಲಗೊಳಿಸಲು (canditi oning) ಪ್ರಯತ್ನಿಸಲಾಗುತ್ತಿದೆ. ಎಲ್ಲಾ ಹಾಸ್ಟೆಲ್ ವಾರ್ಡನ್‌ಗಳಿಗೆ ಆಟೋಟಗಳ ಹೆಸರಿನಲ್ಲಿ ಸಂಘದ ಶಾಖೆಯನ್ನು ತೆರೆಯಲು ಆದೇಶವನ್ನು ಹೊರಡಿಸಲಾಗಿದೆ. ಇವುಗಳನ್ನೆಲ್ಲಾ ಗುಪ್ತವಾಗಿ ರಾಜ್ಯ ಶಾಸನವ್ಯವಸ್ಥೆಯಿಂದಲೇ ಮಾಡಲಾಗುತ್ತಿದೆ.

ರಾಜಸ್ಥಾನದ ಜೈಪುರದಲ್ಲಿ ಎರಡು ಬೃಹತ್ ಸಮ್ಮೇಳನಗಳಾದುವು. ಎರಡರ ಉದ್ದೇಶವೂ ಒಂದೇ ಅದು "ಮೀಸಲಾತಿಗೆ ವಿರೋಧ". ಆ ಸಮ್ಮೇಳನಗಳಲ್ಲಿ ಬಾಜಪಾದ ವರಿಷ್ಠರೆಲ್ಲಾ ಭಾಗವಹಿಸಿದ್ದರು. ಅಖಿಲ ಭಾರತ ಬ್ರಾಹ್ಮಣ ಸಮ್ಮೇಳನ ನಡೆಯಿತು. ಅದು ಮೀಸಲಾತಿಯನ್ನು ಸಂಪೂರ್ಣವಾಗಿ ತೆಗೆದುಹಾಕಲು ಠರಾವು ಮಂಡಿಸಿತು. ಶಾಸಕ ಶರದ ಜೋಶಿ ಘೋಷಿಸಿದ : 'ಧರ್ಮ ಮತ್ತು ಜಾತಿ ಆಧಾರಿತ ರಾಜಕೀಯ ಮೀಸಲಾತಿಯಂತಹ ಕ್ಯಾನ್ಸರ್ ಗಡ್ಡೆಗೆ ಎಡೆಮಾಡಿಕೊಟ್ಟಿದೆ, ಈ ಕುರಿತು ಬ್ರಾಹ್ಮಣ ಸಭೆ ಲೋಕಸಭೆಗೆ ಘೆರಾವ್ ಹಾಕುವ ನಿರ್ಣಯ ಕೈಗೊಂಡಿತು. ಇದರ ಗುರಿ ಎಸ್.ಟಿ., ಎಸ್.ಸಿ, ಓ.ಬಿ.ಸಿ ಮೀಸಲಾತಿ ಕುರಿತಾಗಿಯಷ್ಟೇ ಅಲ್ಲ; ಮೀಸಲಾತಿ ಪಡೆದವರ ವಿರುದ್ಧ ಭಯಾನಕ ದ್ವೇಷವನ್ನು ಹರಡುವ ಅಭಿಯಾನವನ್ನೂ ಒಳಗೊಂಡಿದೆ. ಅಂತೆಯೇ ಮೀಸಲಾತಿಗೆ ಅರ್ಹವಾದ ವರ್ಗವನ್ನು ಸಾಮಾನ್ಯ ವರ್ಗಕ್ಕಿಂತ ಹಿಂದೆಯಿಟ್ಟು ಅನ್ಯಾಯ ಬಗೆಯಲಾಗಿದೆ. ರಾಜಸ್ಥಾನ ಆದಿವಾಸಿ ಕ್ಷೇತ್ರ ವಿಕಾಸ ವಿಭಾಗದ ಮಂತ್ರಿ ಕನಕಮಲ ಕಟೋರ ಮತಾಂತರಗೊಂಡ ಆದಿವಾಸಿಗಳನ್ನು ಎಸ್.ಟಿ. ಪಟ್ಟಿಯಿಂದ ತೆಗೆದುಹಾಕಲು ತನ್ನ ವಿಭಾಗಕ್ಕೆ ನಿರ್ದೇಶನ ನೀಡಿರುತ್ತಾನೆ. ಸಂವಿಧಾನದ ಪ್ರಕಾರ ಮೀಸಲಾತಿ ಹಕ್ಕನ್ನು ಪಡೆದ ಮೇಲೆ ಅದು ಮತಾಂತರದಿಂದ ರದ್ದುಗೊಳ್ಳುವುದಿಲ್ಲ. ಆಶ್ಚರ್ಯವೆಂದರೆ ಕನಕಮಲನದ್ದೇ ಒಂದು ಸಂವಿಧಾನ! ವಸೂಂಧರಾರಾಜೆ ಮುಖ್ಯಮಂತ್ರಿಯಾಗಿ ಅಧಿಕಾರಕ್ಕೆ ಬರುತ್ತಲೇ 'ಹಿಂದುಳಿದ ವರ್ಗಗಳ ಆಯೋಗ"ವನ್ನು ರದ್ದುಪಡಿಸಿಬಿಟ್ಟಳು.

> ರಾಜಸ್ಥಾನದ ಜೈಪುರದಲ್ಲಿ ಎರಡು ಬೃಹತ್ ಸಮ್ಮೇಳನಗಳಾದುವು. ಎರಡರ ಉದ್ದೇಶವೂ ಒಂದೇ ಅದು "ಮೀಸಲಾತಿಗೆ ವಿರೋಧ". ಆ ಸಮ್ಮೇಳನಗಳಲ್ಲಿ ಭಾಜಪಾದ ವರಿಷ್ಠರೆಲ್ಲಾ ಭಾಗವಹಿಸಿದ್ದರು. ಅಖಿಲ ಭಾರತ ಬ್ರಾಹ್ಮಣ ಸಮ್ಮೇಳನ ನಡೆಯಿತು. ಅದು ಮೀಸಲಾತಿಯನ್ನು ಸಂಪೂರ್ಣವಾಗಿ ತೆಗೆದುಹಾಕಲು ಠರಾವು ಮಂಡಿಸಿತು.

**ಕೆಲವು ಘಟನೆಗಳು**

1. ಸ್ವಚ್ಛೀಕರಣ ಕಾರ್ಯಾಚರಣೆ (operation clean ) ಹೆಸರಿನಲ್ಲಿ ಪಟ್ಟಣಗಳ ಸಾವಿರಾರು ಬಡವರ ಗುಡಿಸಲುಗಳನ್ನು ನೆಲಸಮಗೊಳಿಸಲಾಯಿತು.
2. ಜಯಪುರ ಜಿಲ್ಲೆಯ ಭಿನ್‌ವಾಲ್ ಗ್ರಾಮದ ದಲಿತವರನ ಮೆರವಣಿಗೆ ಅತ್ಯಂತ ರಕ್ಷಣೆಯಲ್ಲಿಯೇ ಹೊರಟಿತು. ರಜಪೂತ ಸಮಾಜದ ಮಹಿಳೆಯರು ವಧುವರರಿಗೆ ದೇವಸ್ಥಾನ ಪ್ರವೇಶಿಸಲು ಬಿಡಲಿಲ್ಲ. ಕಲ್ಲುಗಳನ್ನು ಹೊಡೆದರು.
3. ಸೈಂಥಲ್ ಹೋಬಳಿಯ ರಾಮಟೇಲ್ ಹನುಮಾನ್ ಮಂದಿರ ಪ್ರವೇಶಕ್ಕೆ ಪ್ರಯತ್ನಿಸಿದ ಪರಪಂಚ್ ಮಾಯದೇವಿ ವಾಹವಾರಳಿಗೆ ಅವಕಾಶ ಕೊಡಲಿಲ್ಲ. ಕೋಲಿ, ಚಮಾರ್ ಮೊದಲಾದ ಕೆಳಜಾತಿಯ ಜನರಿಗೆ ದೇವಾಲಯದಲ್ಲಿ ಪ್ರವೇಶವಿಲ್ಲವೆಂದು ಹೊರದಬ್ಬಲಾಯಿತು.
4. ಮನೋಹರ ಪುರದ ಆರಾಧನಾ ಕ್ಷೇತ್ರದಲ್ಲಿ ದಲಿತ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಲಾಯಿತು.
5. ಪಾಲಿಜಿಲ್ಲೆಯ ಬೇಡಕಲಾಂ ಹೋಬಳಿಗೆ ಸರಪಂಚ ಚುನಾವಣೆಗೆ ಭಾಗವಹಿಸಿದ ಸಾಹಸ ತೋರಿದ್ದಕ್ಕಾಗಿ ದಲಿತನನ್ನು ಮೋಹನ್ ಮೇಘಪಾಲ್‌ನಲ್ಲಿ ಹಾಡುಹಗಲೇ ಕೊಂದು ಹೆಣದ ಮೇಲೆ ಟ್ರಾಕ್ಟರ್ ಓಡಿಸಲಾಯಿತು.

ರಾಜಸ್ಥಾನದ ಉಚ್ಚ ನ್ಯಾಯಾಲಯದ ಪರಿಸರದಲ್ಲಿ ಮನುವಿನ ಪ್ರತಿಮೆ ಸ್ಥಾಪಿಸಲಾಗಿದೆ-ಎಂಬ ವಿಚಾರ ಎಷ್ಟು ಜನರಿಗೆ ಗೊತ್ತು?

> ರಾಜಸ್ಥಾನದ ಉಚ್ಚ ನ್ಯಾಯಾಲಯದ ಪರಿಸರದಲ್ಲಿ ಮನುವಿನ ಪ್ರತಿಮೆ ಸ್ಥಾಪಿಸಲಾಗಿದೆ-ಎಂಬ ವಿಚಾರ ಎಷ್ಟು ಜನರಿಗೆ ಗೊತ್ತು?

**ಈ ವಾರ**

## ಪ್ರೊ: ಚಂಪಾರ ಕಣ್ಣಿನ ತುಂಬಾ ಠಾಕ್ರೆ ಯಾಕೆ?

ಮೊನ್ನೆ ಮುಂಬಾಯಿಯಲ್ಲಿ, ಮಹಾರಾಷ್ಟ್ರ ನವ ನಿರ್ಮಾಣ ಸಮಿತಿಯ ಕಾರ್ಯಕರ್ತರು ನಡೆಸಿದ ದಾಳಿ, ದಾಂಧಲೆಗಳನ್ನು ರಾಜ್ಯದ ಜನರೂ ಖಂಡಿಸುತ್ತಿರುವಾಗಲೇ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾದ ಪ್ರೊ: ಚಂದ್ರಶೇಖರಪಾಟೀಲ್‌ರು ರಾಜ್‌ಠಾಕ್ರೆಯ ಕೃತ್ಯ ಬೆಂಬಲಿಸಿದ್ದು, ಒಂದು ವಿಚಿತ್ರವಾದ ಧ್ವನಿಯಾಗಿ ಕೇಳಿಸಿದೆ. ಶಿವಸೇನಾದ ಬಾಳಾ ಠಾಕ್ರೆ, ಅವರ ತುಂಡು ರಾಜ್‌ಠಾಕ್ರೆಗಳು ಮಹಾರಾಷ್ಟ್ರದ ಜನರನ್ನು ಉದ್ದಾರ ಮಾಡಿದ್ದು ಕಂಡೇ ಇದೆ.

ಪ್ರಾದೇಶಿಕ-ಸಂಕುಚಿತವಾದ, ಭಾಷಾಂಧ, ಛಿದ್ರಕಾರಿತನಗಳು ಎಷ್ಟೆಲ್ಲಾ ಹಾನಿ ಮಾಡುತ್ತವೆ ಎಂಬುದಕ್ಕೆ ಮಹಾರಾಷ್ಟ್ರವೂ ಒಂದು ಉದಾಹರಣೆ. ಠಾಕ್ರೆಯಂತಹವರು ಜನರನ್ನು ಎತ್ತಿಕಟ್ಟಿ ಅಧಿಕಾರ ಹಿಡಿದದ್ದು, ಮತ್ತು ಹುಲುಸಾಗಿ ಕೋಮುವಾದಿ ಫ್ಯಾಶಿಸ್ಟ್‌ರನ್ನು ಬಳಸಿದ್ದು ಜನ ತಿರಸ್ಕರಿಸಿದ್ದು, ಕಣ್ಣೆದುರಿಗಿದೆ. ಭಾರತ ದೇಶವನ್ನು ಬಲ್ಲವರು ಅದರಲ್ಲಿಯೂ ಪ್ರೊ. ಚಂದ್ರಶೇಖರ್‌ಪಾಟೀಲರಿಗೆ ಇವು ಅರ್ಥವಾಗಲಿಲ್ಲ ಎಂದರೆ ನಂಬಲು ಸಂಕೋಚವಾಗುತ್ತದೆ.

ಅಂದ ಹಾಗೆ ಪ್ರೊಫೆಸರ್‌ರವರು ಹುಟ್ಟು ಹಾಕಬೇಕೆಂದಿರುವ ಪಕ್ಷವೊಂದಕ್ಕೆ ಪ್ರಣಾಳಿಕೆಯಾಗಿ ರಾಜ್‌ಠಾಕ್ರೆಯಂತಹವನು ಆದರ್ಶವಾಗಿ, ಆತನ ಪಕ್ಷದ ಪ್ರಣಾಳಿಕೆಯನ್ನು ನಕಲು ಮಾಡುವಂತಹ ಅನಿವಾರ್ಯತೆ ಏನಿತ್ತು? ಅವರು ತಾವು ಭಾರತ ದೇಶವಾಸಿಗಳು, ಪ್ರಗತಿಪರರಾಗಿದ್ದವರು ಎಂಬುದನ್ನು ಮರೆತುಬಿಟ್ಟರೆ? ಹಾಗಾದಿರಲಿ, ನೆನಪು ಮರುಕಳಿಸಿ, ನೋಟ ನಿಚ್ಚಳವಾಗಲಿ. ○

# ಸಮುಸ್ಕೃತಿ, ಸಮುಸ್ಕಾರ ಅಂದ್ರೇನ್ಲಾ?

"ಏ ಎಣ್ಣೆ ತಮ್ಮಣ್ಣ, ಕೊಳಕು ಮನುಸ್ರು ಕಣಲಾ ನೀವೆಲ್ಲ",

"ಲೇ ಚೆಡ್ಡಿ ಚಿಕ್ಕ, ಯಾಕ್ಲೆ? ಎಂಗೈತೆ ಮೈಗೇ?"

"ಇರಾ ಇಸ್ಕ ಏಳಿದ್ರೆ ಮೈಮೇಲೆ ಬತ್ತಿಯಲ್ಲಪ್ಪ?"

"ಏನ್ಲಾ ಅದು ಇರಾ ಇಸ್ಕ?"

"ನಿನ್ನೆ ಕುಡುಕೊಂಡು ಬಂದು ನಿಮ್ಮ ಮನೇಲೇ ಸಾಮಾನೆಲ್ಲ ಮುರುದಾಕಿ ಆಳು ಮಾಡಿ ಗಲಾಟೆ ಮಾಡುದ್ಯಂತೆ?"

"ಅನ್ನಾಯ ಆಗೈತೆ ಕಣಲಾ ನಮಗೆ ಅನ್ನಾಯ ಆಗೈತೆ"

"ಏನ್ಲಾ ಅದು ಅಂತ ಅನ್ನಾಯ?"

"ಒಂದಾ? ಎಲ್ಡಾ? ಯಾವ್ದಾಂತ ಏಳ್ಲಿ? ಈರ ಕನ್ನಡಿಗರಾದ ನಮಗೆ ಎಲ್ಲಾ ಇಚಾರದಾಗೂ ಬೋ ಅನ್ನಾಯ ಆಗ್ತಾಯ್ತೆ. ಅದುನ್ನೋಡ್‌ಕಂಡು ಸುಮ್ಕಿರ್ರಕ್ಕಾಯ್ತದ?

"ಅದಿಕ್ಕೆ ಏಳಿದ್ದು, ಅಲ್ಲ ಕಣಲಾ ಅನ್ನಾಯ ಆಯ್ತು ಅಂತ ನಿಮ್ಮನೇ ಸಾಮಾನೇ ಆಳು ಮಾಡಾಕಿದ್ರೆ ನಷ್ಟ ಯಾರಿಗಲಾ?"

"ಇನ್ನೇನ್ಲಾ ಚೆಡ್ಡಿ ಚಿಕ್ಕ ನಿಮ್ಮಂಗೆ ಕಂಡೋರ್ ಮನೇನೆಲ್ಲ ಆಳ್ ಮಾಡ್ಬೇಕಿತ್ತ?"

"ಥೂ ನಿನ್ನ, ಸ್ವಲ್ಪನೂ ಸಮಸ್ಕೃತಿ ಸಮುಸ್ಕಾರ ಇಲ್ಲ ನಿನಗೇಳಕ್ಕೆ ಬಂದ್ನಲ್ಲ"

"ಏನ್ಲ ಅದು ಸಮುಸ್ಕೃತಿ, ಸಮುಸ್ಕಾರ ಅಂದ್ರೇನ್ಲಾ?"

"ನಿನ್ನಂತೋರಿಗೆ ಅದೆಲ್ಲ ಅರ್ತ ಆಗಕಿಲ್ಲ ಬುಡು"

"ಅರ್ತ ಆಗಕಿಲ್ಲ. ನೀನು ಮಹಾ ಪಂಡಿತ ಅಂತಲೇ ಕೇಳ್ತಿರದು. ಏಳಲ ಸುಮ್ಕೆ"

"ನೋಡು ಸಮುಸ್ಕೃತಿ ಅಂದ್ರೆ ಅವೆಲ್ಲ ಸಮುಸ್ಕೃತದಲ್ಲಿರ್ತವೆ ನಿಮ್ಮಂತವುಕ್ಕೆ ಅರ್ತ ಆಗಲ್ಲ. ಅದುಕ್ಕೆ ನಾವು ಏಳ್ದಂಗೆ ಕೇಳ್ಬೇಕು. ಈಗ ನೋಡು ದೇವಸ್ಥಾನಕ್ಕೆ ಓಗದು. ಅಡ್ಡ ಬಿದ್ದು ತೀರ್ತ ಪರಸಾದ ಇಸ್ಕಳದು ಇವೆಲ್ಲ ಒಂತರಾ ಸಮುಸ್ಕೃತಿ ಇದ್ದಂಗೆ".

"ಹ್ಹ.. ಹ್ಹ..ಹ್ಹ...., ಅಲ್ಲ ಕಣಲಾ.. ನಾನು ಯಾವಾಗ್ಲೂ ಬಾಟ್ಲು ತೀರ್ತ ತಕತನೇ ಇರ್ತೀನಿ. ಸೊರ್ಗದಲ್ಲೇ ತೇಲಾಡ್ತಿರ್ತೀನಿ.."

"ಥೂ ನಿನ್ನ ಅದಕ್ಕೆ ಏಳಿದ್ದು ನೀನು ಕೊಳಕು ಮನ್ಸ ಅಂತ. ಅಲ್ಲ ಕಣಲಾ.. ಆ ದರಿದ್ರನ ತೀರ್ತ ಅಂತೀಯಲ್ಲ?

"ಲೇ ಚೆಡ್ಡಿ ಚಿಕ್ಕ ಸುಮ್ಕಿರಲಾ ಕಂಡಿವ್ನಿ..., ನನ್ನಂತೋರು ಕುಡುದು ಬಿಸಾಕಿದ್ ಬಾಟ್ಲಿಲಿ ನೀರು ತುಂಬ್ಕಂಡೋಗಿ ಯಾರ್ಯಾರಿಗೋ ತೀರ್ತ ಅಂತ ಕುಡುಸ್ತೀರಲ್ಲ! ಅದೇ ಏನ್ಲ ನಿಮ್ಮ ಸಮುಸ್ಕೃತಿ ಅಂದ್ರೆ?" ಅವ್ರು ಕುಡಿದಿದ್ರೆ ನಿಮ್ಮ ತಿರ್ತಕ್ಕೆ ಏನ್ಲಾ ಆಗ್ತಿತ್ತು."

'ಅವಮಾನ ಆಯ್ತಿತ್ತು ಕಣಲಾ ತೀರ್ತಕ್ಕೆ'

"ಯಾರೋ ಒಬ್ರು ಗೊತ್ತಿಲ್ದೆ ಕುಡೀದಿದ್ರೆ ಅ ವ್ ವ್ ಾ ನ್ ಆ ಗ್ ೋ ದಾ ದ್ರೆ ಅದೆಂತಾ ತೀರ್ತನಲಾ ಅದು? ಆ ತೀರ್ತಕ್ಕಿಂತ ಆ ಮನ್ಸನೇ ಎಚ್ಚು ಅಂದಂಗಾಗ್ನಿಲ್ವ?" ಅಂಗಂತ ನೀವೇ ತೀರ್ತಕ್ಕೆ ಅವಮಾನ ಮಾಡದಾಗಾಗ್ಲಿಲ್ವಾ?"

"ನಿಂಗ್ಯಾಕೋ ಏರ್ಸಿದ್ದು ಜಾಸ್ತಿ ಆಗೈತೆ. ನಿನ್ನ ತವ ಈಗ ಮಾತಾಡಕ್ಕಿಲ್ಲ"

"ಲೇ ಚೆಡ್ಡಿ ಚಿಕ್ಕ, ನಿನ್ ಬುಡಕ್ಕೆ ಬಂತು ಅಂತ ತಪ್ಪ ಸ್ಕೊಂಡೋಯ್ತಿಯಾ? ಪರಮಾತ್ಮ ವಟ್ಟೆ ಸೇರಿದ್ಮೇಲೆ ಸತ್ಯವರೆಗೆ ಬತ್ತದೆ ಎಲ್ಲ ಗೊತ್ತಾಯ್ತದೆ. ಏಳ್ಲಾ ಇನ್ನೊಂದೇನದು? ಸಮುಸ್ಕಾರ?"

"ಊಂ. ನಮಗೆ ಸಮುಸ್ಕಾರ ಬ್ಯಾಡ ಅಂತ ಖುಂತವರಂತೆ ಕೆಲವು ಮೇಟ್ರು? ಅವ್ರು ಸತ್ತಮೇಲೆ ಅವ್ರ ಬಾಡಿ ನಾಯಿ ನರಿಗೆ ಆಕಕ್ಕೆ ಆಯ್ತುದೇನ್ಲಾ ಸಮುಸ್ಕಾರ ಬ್ಯಾಡ ಅಂದ್ರೆ..."

"ಲೇ ಎಣ್ಣೆ ತಮ್ಮಣ್ಣ ನೀನೇಳ್ತಿರದು ಅಂತಿಮ ಸಮುಸ್ಕಾರದ ಬಗ್ಗೆ, ಅವ್ರು ಏಳ್ತಿರದು ಸಮುಸ್ಕಾರ ಅಂತ ಪುಸ್ಕದ ಬಗ್ಗೆ, ಅದ್ರಲ್ಲಿ ಏನೇನೋ ಪೋಲಿ ಇಸ್ಕ ಇದವಂತೆ ಅದ್ಕೆ ಉದ್ರಿಗೆ ಏಳ್ಕೊಡಕ್ಯಾಗಕಿಲ್ಲ ಅಂತಾವ್ರೆ"

'ಆಹ್ಹ ಮನೇಲಿ ಕುಂತ್ಕಂಡು, ಎರಡೆರಡಿಂಚು ಬಟ್ಟೆ ಚೂರ ಅಕ್ಕಂಡು ಕುಣಿತವಲ್ಲ ಟೀವಿಲಿ ಅದುನ್ನೇಲ್ಲಾ ಎಣ್ತೆ ಮಕ್ಳು ಜತೆ ನೋಡಕಿಲ್ವಂತ ಅವ್ರು?'

'ಸುಮ್ನೆ ನಡ್ಯಪ್ಪ ನಿಂತವ ಮಾತಾಡ್ತಿನಲ್ಲ ನಂಗೆ ಬುದ್ದಿ ಇಲ್ಲ'

"ನೋಡು ನೋಡು ನಾನು ಸರ್ಯಾದ ಪಾಯಿಂಟ್ ಆಕ್ತಿದಂಗೆ ಮೆಲ್ಲಗೆ ತಪ್ಪುಸ್ಕೋತೀಯಾ ಕಳ್ಳ. ನೀನು ಬಾರಿ ಚಾಲಾಕಿ ಇದೀಯಾ. ಬಾ ನಿಮ್ಮ ದ್ಯಾವ್ರುಗಳೆಲ್ಲ ತಕತಿದ್ರಲ್ಲ ರಾಮರಸ, ಸೋಮರಸ ಅಂತ ತೀರ್ತ ಕೊಡುಸ್ತೀನಿ, ಇನ್ನೂ ಚುರುಕಾಯ್ತಿಯಾ.....

ಶ್ರೀ □

ಶತಶತಮಾನಗಳಿಂದ ಅಸಮಾನತೆಯ ಬೇಗುದಿಯಲ್ಲಿ ನರಳುತ್ತಾ ಜೀವಂತ ದಹನಗೊಳ್ಳುತ್ತಿರುವ, ಪಟ್ಟಭದ್ರರ ದಬ್ಬಾಳಿಕೆಯಲ್ಲಿ ಧ್ವನಿಯಿಲ್ಲದ ದಲಿತ ಸಮುದಾಯ ಇಂದಿಗೂ ಮಲ ಹೊರುವ ಸ್ಥಿತಿಯಿಂದ ಪೂರ್ಣ ಮುಕ್ತವಾಗಿಲ್ಲ. ಈ ಸಮುದಾಯ ಅಸ್ಪೃಶ್ಯತೆಯ ಪಿಡುಗಿಗೆ ದಿನನಿತ್ಯ ಬಲಿಯಾಗುತ್ತಿದೆ. ವಿಶ್ವದಲ್ಲೇ ಎಲ್ಲೂ ಕಂಡರಿಯದಂತಹ ಹೀನಾಯ ಸ್ಥಿತಿಯಲ್ಲಿ ದಲಿತ-ಹಿಂದುಳಿದ ಸಮುದಾಯ ಭಾರತದಲ್ಲಿ ಬದುಕುತ್ತಿದೆ.

ಇಂತಹ ಅಮಾನವೀಯ ಸ್ಥಿತಿಯಿಂದ ಈ ಜನ ಸಮುದಾಯ ಹೊರಬರಲೆಂದು ಸ್ವಾತಂತ್ರ್ಯ ಪೂರ್ವದಿಂದಲೇ ಮಾನವೀಯ ಮೌಲ್ಯವುಳ್ಳ ಪ್ರಗತಿಪರ ಚಳುವಳಿ ನಡೆದಿದೆ. ಈ ಹೋರಾಟದ ಪ್ರತಿಫಲವಾಗಿ 'ಸಾಮಾಜಿಕ ನ್ಯಾಯ'ದ ಪರಿಕಲ್ಪನೆ ಉದಯಿಸಿತು. ಉದಾ : 1902ರಲ್ಲಿ ಈಗಿನ ಮಹಾರಾಷ್ಟ್ರದ ಕೊಲ್ಲಾಪುರ ರಾಜ ಪ್ರಭುತ್ವದಲ್ಲಿ ಮತ್ತು 1921ರಲ್ಲಿ ಮೈಸೂರು ರಾಜಪ್ರಭುತ್ವದಲ್ಲಿ ದಲಿತ ಮತ್ತು ಹಿಂದುಳಿದ ಸಮುದಾಯಕ್ಕೆ ಶಿಕ್ಷಣ ರಂಗದಲ್ಲಿ ಮೀಸಲಾತಿ ಜಾರಿಗೆ ಬಂದಿತ್ತು. ಸ್ವಾತಂತ್ರ್ಯ ಪೂರ್ವದಲ್ಲಿ ವಸಾಹತುಶಾಹಿಗಳಿಂದ ನಲುಗಿದ್ದ ಭಾರತ ಬ್ರಿಟೀಷರನ್ನು ಹೊರಹಾಕಿದ್ದು ಬಿಟ್ಟರೆ, ದೇಶೀಯ ಭೂಮಾಲಕ- ಬಂಡವಾಳಶಾಹಿ -ಪಟ್ಟಭದ್ರರ ದಬ್ಬಾಳಿಕೆಯು ಇಂದಿಗೂ ಮುಂದುವರೆಯುತ್ತಿದೆ. ಮಾನವತಾವಾದಿ ಡಾ||ಅಂಬೇಡ್ಕರ್‌ರವರ ಪ್ರಧಾನ ಪಾತ್ರ ಮತ್ತು ಎಡ-ಪ್ರಜಾಸತ್ತಾತ್ಮಕ-ಪ್ರಗತಿಪರ ಜನಚಳುವಳಿಯ ಪ್ರಯತ್ನದ ಭಾಗವಾಗಿ ಕೆಳಸ್ತರದ ವರ್ಗಗಳಿಗೆ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಮುಂತಾದ ಕ್ಷೇತ್ರಗಳಲ್ಲಿ ಮೀಸಲಾತಿ ನೀಡುವ ಮುಖಾಂತರ ಅವರ ಸ್ಥಿತಿಯನ್ನು ಸುಧಾರಿಸಲು ಸಾಧ್ಯವಾಗಲೆಂದು, ಸಂವಿಧಾನದಲ್ಲೂ ಅಳವಡಿಸಿ ಆಳುವ ಸರ್ಕಾರಗಳು ಜಾರಿಗೆ ತರಬೇಕೆಂದು ನಿರ್ದೇಶಿಸಲಾಗಿತ್ತು.

**ಜನವಿರೋಧಿ ನೀತಿ**

ಸ್ವಾತಂತ್ರ್ಯ ನಂತರದಿಂದಲೂ ಅಧಿಕಾರದ ಮದದಲ್ಲಿ ಮುಳುಗಿದ್ದ ಕಾಂಗ್ರೆಸ್ ಸರ್ಕಾರ ಸಂವಿಧಾನದ ಆಶಯಗಳನ್ನು ಜಾರಿಗೆ ತರುವ ಬದಲಾಗಿ ಇನ್ನಷ್ಟು ಈ ಸಮುದಾಯವನ್ನು ದುರ್ಬಲಗೊಳಿಸುವ ಆರ್ಥಿಕ ನೀತಿಗಳನ್ನೇ ಅನುಸರಿಸುತ್ತಿದೆ. (ಉದಾ : ಕೇಂದ್ರ-ರಾಜ್ಯ ಸರ್ಕಾರಗಳು ಲಕ್ಷಗಟ್ಟಲೆ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಇಂದಿಗೂ ತುಂಬದೇ ಇರುವುದು. -ಇದಲ್ಲದೆ ಬಹುಸಂಖ್ಯಾತ ದಲಿತ ಸಮುದಾಯದ ಬದುಕಿನ ಮೂಲಭೂತ ಸಮಸ್ಯೆಗೆ ಪರಿಹಾರವಾಗಬಲ್ಲ ಭೂಹೀನರಿಗೆ ಭೂಮಿ ಹಂಚುವ ಕ್ರಾಂತಿಕಾರಕ ಭೂ ಸುಧಾರಣೆಯು ಎಡಪಕ್ಷಗಳು ಆಡಳಿತ ನಡೆಸಿದ ಮೂರು ರಾಜ್ಯಗಳನ್ನು ಬಿಟ್ಟರೆ ಬೇರೆಲ್ಲೂ ಜಾರಿಗೆ ಬರಲೇ ಇಲ್ಲ). ಅಮೇರಿಕಾ ಸಾಮ್ರಾಜ್ಯಶಾಹಿ ನೇತೃತ್ವದ WTO, WB, IMF, ನಿರ್ದೇಶನದಂತೆ, 1991ರ ನಂತರದಲ್ಲಂತೂ ಜಾರಿಗೆ ತಂದ ಹೊಸ ಆರ್ಥಿಕ ನೀತಿಗಳ ಪರಿಣಾಮ, ಜನ ಚಳುವಳಿಯ, ಸಂವಿಧಾನದ ಮೂಲ ಆಶಯವಾದ 'ಸಾಮಾಜಿಕ ನ್ಯಾಯ'ದ ಪರಿಕಲ್ಪನೆಗೆ ಕೊಡಲಿ ಪೆಟ್ಟು ಬಿದ್ದಿದೆ. ಇದರ ಪರಿಣಾಮವೇ ಇಂದು ಅನ್ನದಾತ ರೈತ-ಕಾರ್ಮಿಕ-ದುಡಿಯುವ ಬಡ ಜನತೆ ಹಸಿವಿನಿಂದ ಸಾವಿಗೆ ಗುರಿಯಾಗಿದೆ. ಆತ್ಮಹತ್ಯೆಗೆ ಇಳಿದಿದೆ.

**ಶಿಕ್ಷಣದ ವ್ಯಾಪಾರ**

ಮುಖ್ಯವಾಗಿ ಶಿಕ್ಷಣ ಕ್ಷೇತ್ರವನ್ನು ವಾಣಿಜ್ಯೀಕರಿಸಿ, ಶೇ.100ರಷ್ಟು ವಿದೇಶಿ ನೇರ ಬಂಡವಾಳ ಹೂಡಿಕೆಗೆ (FDI) ಆದ್ಯತೆ ಕೊಟ್ಟು, ಶಿಕ್ಷಣ ಕ್ಷೇತ್ರಕ್ಕೆ ಸರ್ಕಾರ ಹಣಕಾಸಿನ ನೆರವನ್ನು ಹಂತ-ಹಂತವಾಗಿ ಕಡಿತ ಗೊಳಿಸುತ್ತಾ ಶಿಕ್ಷಣದ ಖಾಸಗೀಕರಣ- ವ್ಯಾಪಾರೀಕರಣ ಮಾಡುವ ಮೂಲಕ ಬಡ-ದಲಿತ-ಹಿಂದುಳಿದ ವರ್ಗಗಳಿಗೆ ನೀಡುತ್ತಿದ್ದ ಶೈಕ್ಷಣಿಕ ಸೌಲಭ್ಯಗಳನ್ನು ನಿಲ್ಲಿಸಲಾಗುತ್ತಿದೆ. ಇದರ ಪರಿಣಾಮವೇ ಇಂದು

**ಶಿಕ್ಷಣ ಗುಣಮಟ್ಟದ ಹೆಸರಿನಲ್ಲಿ ದಲಿತ ವಿದ್ಯಾರ್ಥಿಗಳ ತಲೆಯ ಮೇಲೆ ಚಪ್ಪಡಿ ಎಳೆಯುವ ಕೆಲಸ ಕೇಂದ್ರ ಯುಪಿಎ ಸರ್ಕಾರ ಕೈ ಹಾಕಿದೆ. ವಿದ್ಯಾರ್ಥಿ ಸಮುದಾಯ ತೀವ್ರ ಹೋರಾಟಕ್ಕೆ ಸಜ್ಜಾಗಿ ನಿಂತಿದೆ.**

# ಶಿಕ್ಷಣದ ಗುಣಮಟ್ಟದ ಹೆಸರಿನಲ್ಲಿ ದಲಿತ ವಿದ್ಯಾರ್ಥಿಗಳ ಸ್ಕಾಲರ್‌ಶಿಪ್‌ಗೆ ಕುತ್ತು

ಕಾಂಗ್ರೆಸ್ ನೇತೃತ್ವದ ಯುಪಿಎ ಕೇಂದ್ರ ಸರ್ಕಾರ 11ನೇ ಪಂಚವಾರ್ಷಿಕ ಯೋಜನೆಯನ್ನು ಮಾರ್ಪಡಿಸುವ ಮುಖಾಂತರ (2007 ಮತ್ತು 2008ರಿಂದ 2011 ರಿಂದ 2012) "ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ಪದವಿಪೂರ್ವ ಪರೀಕ್ಷೆಯಲ್ಲಿ ಶೇ.60ರಷ್ಟು ಅಂಕಗಳಿಸಿ ಮುಂದಿನ ವಿದ್ಯಾಭ್ಯಾಸಕ್ಕೆ ಸರ್ಕಾರಿ ಕೋಟಾದ ಉಚಿತ ಸೀಟುಗಳನ್ನು ಪಡೆದರೆ ಮಾತ್ರ ವಿದ್ಯಾರ್ಥಿ ವೇತನ ನೀಡುವುದು. ಪಿ.ಯು.ಸಿ.ಯಲ್ಲಿ ಶೇ.60ಕ್ಕಿಂತ ಕಡಿಮೆ ಅಂಕ ಪಡೆದು ಸರ್ಕಾರಿ ಅಥವಾ ಖಾಸಗಿ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವುದಿಲ್ಲ" ವೆಂಬ ಆದೇಶವನ್ನು ಕೇಂದ್ರ ಸರ್ಕಾರ ಹೊರಡಿಸಿದೆ.

ಇಂತಹ ದಲಿತ ವಿದ್ಯಾರ್ಥಿ ವಿರೋಧಿ ನೀತಿಯಿಂದ ದಲಿತರನ್ನು ಕಾಯಂ ಆಗಿ ಉನ್ನತ ಮತ್ತು ವೃತ್ತಿಶಿಕ್ಷಣದಿಂದ ವಂಚಿಸುವುದಾಗಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಧನದಾಹಿ ದುಬಾರಿ ಶುಲ್ಕ, ಡೊನೇಷನ್ ಭರಿಸಲಾಗದೆ, ಬಹುತೇಕ ದಲಿತ ವಿದ್ಯಾರ್ಥಿಗಳು ಸರ್ಕಾರಿ ಶಾಲಾ-ಕಾಲೇಜುಗಳಿಗೆ ಅವಲಂಬಿತ ರಾಗಿದ್ದಾರೆ. ಆಳುವ ಸರ್ಕಾರದ ದಿವ್ಯ ನಿರ್ಲಕ್ಷ್ಯದಿಂದ ಸರ್ಕಾರಿ ಶಾಲಾ- ಕಾಲೇಜುಗಳಲ್ಲಿ ಶಿಕ್ಷಕ- ಉಪನ್ಯಾಸಕ- ಬೋಧಕೇತರರ ಕೊರತೆ. ಕೊಠಡಿ, ಗ್ರಂಥಾಲಯ, ಪ್ರಯೋಗಾಲಯ, ಕ್ರೀಡೆ, ಕುಡಿಯುವ ನೀರು, ಶೌಚಾಲಯ ಮುಂತಾದ ಕನಿಷ್ಠ ಶೈಕ್ಷಣಿಕ ಸೌಲಭ್ಯಗಳಿಂದಲೂ ವಂಚಿತರಾಗಿ ಗುಣಮಟ್ಟವಲ್ಲದ ಶಿಕ್ಷಣ ಪದ್ಧತಿಯಿಂದ ಬಡ-ದಲಿತ-ಹಿಂದುಳಿದ ವಿದ್ಯಾರ್ಥಿಗಳು ಉತ್ತೀರ್ಣರಾಗುವುದೇ ಕಷ್ಟಸಾಧ್ಯವಾಗಿದೆ. ಜೊತೆಗೆ ಜಾತಿ ತಾರತಮ್ಯಕ್ಕೆ ಒಳಗಾಗಿ ವಂಚನೆಗೆ ಒಳಪಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ "ಶೇ.60 ಅಂಕಗಳಿಸಿ ಸರ್ಕಾರಿ ಕೋಟಾದಡಿ ಸೀಟುಗಳನ್ನು ಪಡೆದರೆ ಮಾತ್ರ ವಿದ್ಯಾರ್ಥಿ ವೇತನ" ಎಂಬ ಆದೇಶ ಗಾಯದ ಮೇಲೆ ಬರೆ ಹಾಕಿದಂತಾಗಿದೆ. ಬಡ ದಲಿತರನ್ನು ಶಿಕ್ಷಣದಿಂದ ವಂಚಿಸುವ ಹುನ್ನಾರವಾಗಿದೆ. ಇದು ಕೇವಲ ಒಂದು ಹೆಜ್ಜೆಯಷ್ಟೇ ಆಗಿದೆ. ಮುಂದಿನ ದಿನಗಳಲ್ಲಿ ಸಂಪೂರ್ಣವಾಗಿ ಸರ್ಕಾರದ ನೆರವನ್ನು ನಿಲ್ಲಿಸಿ, ಶಿಕ್ಷಣವನ್ನು ವ್ಯಾಪಾರಕ್ಕಿಟ್ಟು - ಹಣ ಉಳ್ಳವರು ಖರೀದಿಸಿ (pay and use system) ಪಡೆಯಬಹುದೆಂಬ ನೀತಿ ಸಾರ್ವತ್ರಿಕವಾಗಿ ಜಾರಿಗೆ ಬರುವ ಅಪಾಯ ಇರುವುದರಿಂದ ಸಾಮಾನ್ಯ ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಆದ್ದರಿಂದ ವಿದ್ಯಾರ್ಥಿ ಸಮುದಾಯ ಐಕ್ಯತೆಯಿಂದ ಈ ನೀತಿಯನ್ನು ಪ್ರತಿರೋಧಿಸಬೇಕಿದೆ. ಇಂತಹ ಶಿಕ್ಷಣ ವಿರೋಧಿ ನೀತಿಗಳಿಗೆ ಕಾರಣವಾಗಿರುವ ಸಾಮ್ರಾಜ್ಯ-ಬಂಡವಾಳಶಾಹಿ ನೀತಿಗಳ ಬಾಲಂಗೋಚಿಗಳಾಗಿರುವ ಕಾಂಗ್ರೆಸ್-ಬಿಜೆಪಿಯಂತಹ ಶಕ್ತಿಗಳನ್ನು ಸೋಲಿಸಬೇಕಾಗಿದೆ. ಬಡ ದುಡಿಯುವ ಜನರ ಮರಣ ಶಾಸನ ಬರೆಯುವ ನೀತಿಗಳಾದ ಅಮೇರಿಕನ್ ಸಾಮ್ರಾಜ್ಯಶಾಹಿ ನೀತಿಗಳನ್ನು ಹಿಮ್ಮೆಟ್ಟಿಸದ ಹೊರತು ಅನ್ಯ ಮಾರ್ಗವಿಲ್ಲ.

ಎಸ್‌ಎಫ್‌ಐ ಸಂಘಟನೆ ಇಂತಹ ಬಡ ದಲಿತ ವಿದ್ಯಾರ್ಥಿ ನೀತಿಯನ್ನು ಹಿಂತೆಗೆದುಕೊಳ್ಳಲು ಒತ್ತಾಯಿಸಿ ಫೆಬ್ರವರಿ 20ರಂದು ಪಾರ್ಲಿಮೆಂಟ್ ಚಲೋ ಮುಖಾಂತರ ಪ್ರಧಾನಮಂತ್ರಿಯವರಿಗೆ ಮನವಿ ಸಲ್ಲಿಸಿದೆ. ರಾಜ್ಯದಲ್ಲಿ ಫೆಬ್ರವರಿ 20ರಿಂದ ಎಲ್ಲಾ ವಿಶ್ವವಿದ್ಯಾಲಯಗಳ ವ್ಯಾಪ್ತಿಯ ಜಿಲ್ಲಾ

ಪುಟ 10ಕ್ಕೆ

## ಕರ್ನಾಟಕದಲ್ಲಿ

ಮೆಡಿಕಲ್, ಇಂಜಿನಿಯರಿಂಗ್‌ನಂತಹ ವೃತ್ತಿಪರ ಶಿಕ್ಷಣದ ಪ್ರವೇಶಕ್ಕೆ ಶೇ.45 ನಿಗದಿಯಾಗಿದೆ.

ಸ್ಕಾಲರ್‌ಶಿಪ್ ನೀಡಿಕೆಗೆ ಶೇ.60 ನಿಗದಿ ಮಾಡಿದ್ದು ಯಾಕೆ?

ಕರ್ನಾಟಕದಲ್ಲಿ ಇದು ಜಾರಿಯಾದರೆ : 1,65,000 ವಿದ್ಯಾರ್ಥಿಗಳು ಮೆಟ್ರಿಕ್ ನಂತರದಲ್ಲಿದ್ದಾರೆ. ಎಲ್ಲಾ ಕೋರ್ಸ್‌ಗಳಿಗೆ ದಕ್ಕೆ ತರುತ್ತದೆ. ಅಂದರೆ ಶೇ.80ರಷ್ಟು ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕೆ ಅನರ್ಹರಾಗುತ್ತಾರೆ.

ಪ್ರತಿವರ್ಷ 2000 ದಲಿತ ವಿದ್ಯಾರ್ಥಿಗಳು ಮೆಡಿಕಲ್ ಇಂಜನಿಯರ್‌ನಂತಹ ವೃತ್ತಿಪರ ಶಿಕ್ಷಣಕ್ಕೆ ಪ್ರವೇಶ ಪಡೆಯುವರು. ಇದರಲ್ಲಿ 1600 ರಷ್ಟು ವಿದ್ಯಾರ್ಥಿಗಳು ಅನರ್ಹರಾಗುತ್ತಾರೆ. ಅಂದರೆ ದಲಿತರು ಶಿಕ್ಷಣ ಪಡೆಯುವುದು ಅಸಾಧ್ಯವಾಗುವುದು

| | |
|---|---|
| ಮೆಡಿಕಲ್ | 1,75,000 ರೂ. |
| ಇಂಜಿನಿಯರ್ | 60,000 ರೂ. |
| ಡೆಂಟಲ್ | 90,000 ರೂ. |

ಇಷ್ಟು ಶುಲ್ಕ ಕಟ್ಟುವುದಾದರೂ ಹೇಗೆ?

# ಇಲ್ಲಿ 'ಪ್ರತಿಭೆ' ಹುಟ್ಟುವುದಾದರೂ ಹೇಗೆ?


ಭಾರತದಲ್ಲಿ ಪರಿಶಿಷ್ಟ ಜಾತಿಯವರು ಶೇ.18 ರಷ್ಟು ಇದ್ದರು ಕೂಡ ದೇಶದ ಒಟ್ಟು ಕಾರ್ಯನಿರ್ವಹಣೆಯ ಭೂಮಿಯ ಶೇ7.12 ರಷ್ಟು ಮಾತ್ರ ದಲಿತರ ಕೈಯಲ್ಲಿ ಇದೆ. ಪರಿಶಿಷ್ಟ ಜಾತಿಯವರಲ್ಲಿ ಭೂಮಿ ಉಳ್ಳವರು ಶೇ.87 ರಷ್ಟು ಇದ್ದರೂ ಕೂಡ ಕಾಲು ಎಕರೆ, ಅರ್ಧ ಎಕರೆ ತುಂಡು ಭೂಮಿ ಹೊಂದಿದವರೆ ಶೇ.70 ರಷ್ಟು ಇದ್ದಾರೆ. ಆಸ್ತಿ ಹೀನರಾಗಿರುವುದು, ದುಡಿಯಲು ಬಂಡವಾಳ ಇಲ್ಲದೆ ಇರುವವರು ಇದ್ದಾರೆ.

ದಲಿತರಿಗೆ ಕೂಲಿಯಲ್ಲಿ ತಾರತಮ್ಯ ಇದೆ. ದಲಿತರು ವಾರಕ್ಕೆ ರೂ.174 ಕೂಲಿ ಪಡೆದರೆ ಇತರರಿಗೆ ರೂ.198 ಕೂಲಿ ಲಭ್ಯವಾಗುತ್ತಿದೆ. ಪರಿಶಿಷ್ಟ ಜಾತಿಯ ಶೇ.62 ರಷ್ಟು ಕುಟುಂಬಗಳು ಕೂಲಿಯನ್ನೇ ಅವಲಂಬಿಸಿದ್ದಾರೆ. ದಲಿತರಲ್ಲಿ ನಿರುದ್ಯೋಗ ಪ್ರಮಾಣ ಶೇ.5.0 ಇದ್ದರೆ, ಇತರರಲ್ಲಿ ಶೇ.3.5 ಇದೆ. ಉದ್ಯೋಗದಲ್ಲಿ ಪರಿಶಿಷ್ಟ ಜಾತಿಯವರಿಗೆ ತಾರತಮ್ಯವಿದ್ದು ಅವರ ಬದುಕನ್ನು ಅಸಹನೀಯಗೊಳಿಸಿದೆ. ಬಡತನವು ದಲಿತರಲ್ಲಿ ಶೇ. 35.45 ಇದ್ದರೆ ಇತರರಲ್ಲಿ ಶೇ.21 ರಷ್ಟು ಇದೆ. ಮಾಸಿಕ ತಲಾ ಕುಟುಂಬದ ಖರ್ಚು 419 ರೂ. ದಲಿತರದಾಗಿದ್ದರೆ, ಇತರರದ್ದು 560 ರೂ. ಆಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಕೇಂದ್ರ ಸರ್ಕಾರದ ಹುದ್ದೆಗಳಲ್ಲಿ ಕ್ರಮವಾಗಿ ಶೇ.15 ಮತ್ತು ಶೇ.7.5 ರಷ್ಟನ್ನು ಮೀಸಲಿಡಲಾಗಿದೆ. ಪರಿಶಿಷ್ಟ ಜಾತಿಯವರಿಗೆ ಎ ಗುಂಪಿನಲ್ಲಿ ಕೇವಲ ಶೇ.10.5 ರಷ್ಟನ್ನು ಭರ್ತಿಗೊಳಿಸಿದ್ದರೆ, ಬಿ.ಗುಂಪಿನಲ್ಲಿ ಕೇವಲ ಶೇ.12.67 ರಷ್ಟು, ಸಿ.ಗುಂಪಿನಲ್ಲಿ ಶೇ.16.15 ಮತ್ತು ಡಿ ಗುಂಪಿನಲ್ಲಿ ಶೇ.21.26 ರಷ್ಟನ್ನು ಭರ್ತಿಗೊಳಿಸಲಾಗಿದೆ. ಉಚ್ಚ ನ್ಯಾಯಾಲಯದ 544 ನ್ಯಾಯಾಧೀಶರುಗಳಲ್ಲಿ ಕೇವಲ 13 ಮಂದಿ ಮಾತ್ರ ಪರಿಶಿಷ್ಟ ಜಾತಿ ಮತ್ತು 4 ಮಂದಿ ಮಾತ್ರ ಪರಿಶಿಷ್ಟ ಪಂಗಡದವರಾಗಿದ್ದಾರೆ. ದೇಶಾದ್ಯಂತ ಶಾಲಾ ಶಿಕ್ಷಕರಲ್ಲಿ ಎಸ್.ಸಿ/ಎಸ್.ಟಿಗಳ ಸಂಖ್ಯೆಯು ಶೇ.2.6 ರಷ್ಟು ಮಾತ್ರವಿದೆ.

ಶೇ.75 ರಷ್ಟು ದಲಿತ ಮಹಿಳೆಯರು ಪೌಷ್ಠಿಕ ಆಹಾರದ ಕೊರತೆಯಿಂದ ನರಳುತ್ತಿದ್ದಾರೆ. ದಲಿತ ಮಕ್ಕಳು ಕೂಡ ಪೌಷ್ಠಿಕ ಆಹಾರದ ಕೊರತೆಯಿಂದ ಬಳಲುತ್ತಿದ್ದಾರೆ. ದಲಿತ ಮಕ್ಕಳ ಸಾವಿನ ಸಂಖ್ಯೆ 1000 ಮಕ್ಕಳಲ್ಲಿ ಶೇ.61 ಆದರೆ, ಶೇ.22 ಇತರರ ಮಕ್ಕಳು, ಪರಿಶಿಷ್ಟ ಜನರ ಆರೋಗ್ಯದ ತಾರತಮ್ಯವು ಅತ್ಯಂತ ಹೆಚ್ಚಾಗಿದೆ. ಬಡತನ, ಅನಕ್ಷರತೆ, ಸಾರ್ವಜನಿಕ ಆರೋಗ್ಯದ ಭಾಗ್ಯವನ್ನು ಕೂಡ ಅವರಿಗೆ ದಕ್ಕುತ್ತಿಲ್ಲ.


ಫೆಬ್ರವರಿ 23, 2008 ರಂದು ಬೆಂಗಳೂರಿನ ಸಿಪಿಐ(ಎಂ) ಆಯೋಜಿಸಿದ್ದ ದುಂಡುಮೇಜಿನ ಸಭೆಯ ಚಿತ್ರ





# ಪ್ರಥಮ ಕಮ್ಯುನಿಸ್ಟ್ ಸರ್ಕಾರದ ಸ್ಥಾಪನೆ


## ಇಎಂಎಸ್ ಸರ್ಕಾರ ಸುವರ್ಣ ಸಂಭ್ರಮ

ಭಾರತ ಕಮ್ಯುನಿಸ್ಟ್ ಚಳುವಳಿಯ ವಿಶೇಷ ಅಧ್ಯಾಯವೊಂದನ್ನು ನೆನಪಿಕೊಂಡು ಅದರಿಂದ ಸ್ಫೂರ್ತಿ ಪಡೆಯುವಂತಹ ವಿಶಿಷ್ಟ ಕಾರ್ಯಕ್ರಮದ ವರದಿ


ಅಚ್ಯುತಾನಂದನ್


ಯು.ಆರ್.ಅನಂತಮೂರ್ತಿ


ಬರಗೂರು ರಾಮಚಂದ್ರಪ್ಪ


ವಿ.ಜೆ.ಕೆ.ನಾಯರ್

ಅಂದು ಬೆಂಗಳೂರಿನ ಸರ್ಕಾರಿ ಕಲಾ ಕಾಲೇಜು ಮೈದಾನದಲ್ಲಿ ಸಂಭ್ರಮವೋ ಸಂಭ್ರಮ. ವಿಶಾಲ ವೇದಿಕೆಯಲ್ಲಿ, ಬೆಳಗಿನಿಂದ ಸಂಜೆಯವರೆಗೆ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ. ಕೆಳಗೆ ಪಟದ ಕುಣಿತ, ಮಕ್ಕಳಿಗೆ ಚಿತ್ರ ಬಿಡಿಸುವ ಸ್ಪರ್ಧೆ, ವೇದಿಕೆಯ ಮೇಲೆ ಕಂಸಾಳೆ, ಕೋಲಾಟ, ಮಹಿಳೆಯರ ಡೊಳ್ಳು ಕುಣಿತ, ತರಹಾವರಿ ಚಟುವಟಿಕೆಗಳು.

ಗಂಡ, ಹೆಂಡತಿ, ಮಕ್ಕಳು, ಹಿರಿಯರು, ಯುವಕರು, ಯುವತಿಯರು ಸಾಲು ಸಾಲಾಗಿ ಬಂದರು. ಜನಾರ್ಧನ (ಜನ್ನಿ) ಮತ್ತು ತಂಡವರಿಂದ ಕ್ರಾಂತಿಗೀತೆಗಳೂ ಹೋರಾಟದ ಹಾಡುಗಳು, ರಾಮದಾಸರ ಮೈಮ್, ವಾದ್ಯಗೋಷ್ಠಿ, ಜನಮನವನ್ನು ತಣಿಸಲು ಸಮೃದ್ಧ ಸಾಂಸ್ಕೃತಿಕ 'ಸರಕು'! ಇನ್ನೇನೂ ಬೇಕು.



ಮೆದುಳಿನ ಚಿಂತನೆಗೊಂದಷ್ಟು ಆಹಾರ. ವಿಚಾರ ಸಂಕಿರಣ... ಕಾರ್ಮಿಕರ, ಭೂಹೀನ ಕೂಲಿಕಾರರು, ರೈತರ ಕ್ರಾಂತಿಕಾರಿ ಆಂದೋಲನ ಹಾಗೂ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ ಒಂದಕ್ಕೊಂದು ಬೆಸೆದು ಬೆಳೆದು ಬಂದ ಚಳುವಳಿ ಕೇರಳದಲ್ಲಿ 1957 ರಲ್ಲಿ ಚುನಾವಣೆಗಳ ಮೂಲಕ ಇಡೀ ಜಗತ್ತಿನಲ್ಲೇ ಪ್ರಥಮ ಬಾರಿಗೆ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಸರ್ಕಾರವೊಂದು ಅಧಿಕಾರಕ್ಕೇರಿದ ಇತಿಹಾಸ ಸೃಷ್ಟಿಸಿತು. ಈ ಚಾರಿತ್ರಿಕ ಘಟನೆಗೆ 50 ವರ್ಷ ತುಂಬಿದ ಸಂಭ್ರಮ ಈಗ. ಈ ಹಿನ್ನೆಲೆಯಲ್ಲಿ ವಿಶೇಷ ಕಾರ್ಯಕ್ರಮ ಬೆಂಗಳೂರಿನಲ್ಲಿ ನಡೆಯಿತು.

'ಸಾಲ ತೀರಿಸಲಾಗದೇ ಸಂಕಷ್ಟ ಸ್ಥಿತಿಯಲ್ಲಿರುವ ರೈತರಿಗೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಶಾಸನ ರೂಪಿಸುವ ಅಗತ್ಯವಿದೆ' ಎಂದು ಕೇರಳ ಮುಖ್ಯಮಂತ್ರಿ ವಿ.ಎಸ್.ಅಚ್ಯುತಾನಂದನ್ ಅಭಿಪ್ರಾಯಪಟ್ಟರು.

ಕೇರಳದಲ್ಲಿ ಅಸ್ತಿತ್ವಕ್ಕೆ ಬಂದ ದೇಶದ ಪ್ರಥಮ ಚುನಾಯಿತ ಕಮ್ಯುನಿಸ್ಟ್ ಸರ್ಕಾರದ ಸುವರ್ಣ ಮಹೋತ್ಸವದ ಆಚರಣೆ ಹಿನ್ನೆಲೆಯಲ್ಲಿ ಇ.ಎಂ.ಎಸ್. ಸರ್ಕಾರದ ಸುವರ್ಣೋತ್ಸವ ಆಚರಣಾ ಸಮಿತಿ ಏರ್ಪಡಿಸಿದ್ದ ಸಮಾರಂಭದಲ್ಲಿ ಅವರು ಮಾತನಾಡಿದರು.

ಸಾಲ ತೀರಿಸಲಾಗದೇ ಸಂಕಷ್ಟ ಅನುಭವಿಸುತ್ತಿರುವ ಕೇರಳ ರಾಜ್ಯದ ರೈತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ 'ರೈತರ ಸಾಲ ಪರಿಹಾರ ಆಯೋಗ' ರಚಿಸಲಾಗಿದೆ. ಆಯೋಗವು ರೈತರ ಸಮಸ್ಯೆಗಳನ್ನು ಪರಿಶೀಲಿಸಿ, ಅವುಗಳನ್ನು ಹಂತ ಹಂತವಾಗಿ ನಿವಾರಿಸುತ್ತಿದೆ. ಕೇಂದ್ರ ಸರ್ಕಾರ ಕೂಡ ಇದೇ ಮಾದರಿಯಲ್ಲಿ ಶಾಸನ ರೂಪಿಸುವಂತೆ ಆಗ್ರಹಿಸಿ ಶೀಘ್ರವೇ ಪ್ರಚಾರಾಂದೋಲನ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.

ಸರ್ಕಾರಿ ಸ್ವಾಮ್ಯದ ಸಂಸ್ಥೆಗಳನ್ನು ಯಾವುದೇ ಕಾರಣಕ್ಕೂ ಮುಚ್ಚಲು ಅವಕಾಶ ನೀಡುವುದಿಲ್ಲ ಎಂದು ಹೇಳಿದ ಅವರು, 'ರಾಜ್ಯದಲ್ಲಿ 24 ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಲಾಭಗಳಿಸುತ್ತಿವೆ. ಕೈಗಾರಿಕಾ ಮತ್ತು ಐಟಿ ಕ್ಷೇತ್ರವನ್ನು ಸಹ ಪ್ರೋತ್ಸಾಹಿಸುವ ಉದ್ದೇಶದಲ್ಲಿ ಶೀಘ್ರವೇ ಕೈಗಾರಿಕಾ ಮತ್ತು ಐಟಿ ಸಂಸ್ಥೆಗಳ ಸ್ಥಾಪನೆಗೆ ಅವಕಾಶ ನೀಡಲಾಗುವುದು' ಎಂದರು.

'1957ರಲ್ಲಿ ಪ್ರಥಮ ಬಾರಿ ಅಸ್ತಿತ್ವಕ್ಕೆ ಬಂದ ಇ.ಎಂ.ಎಸ್. ನಂಬೂದಿರಿಪಾದ್ ನೇತೃತ್ವದ ಕಮ್ಯುನಿಸ್ಟ್ ಸರ್ಕಾರ ಕೇವಲ 28 ತಿಂಗಳಲ್ಲಿ ಭೂ ಸುಧಾರಣೆ, ಶಿಕ್ಷಣ ಸುಧಾರಣೆ ಮುಂತಾದವುಗಳಿಗೆ ಚಾಲನೆ ನೀಡಿತು.

ಶೋಷಣೆ ಮತ್ತು ದಬ್ಬಾಳಿಕೆ ವಿರುದ್ಧ ಚಳುವಳಿ ರೂಪಿಸಲು ಇದು ಸಹಕಾರಿಯಾಯಿತು' ಎಂದು ಅಚ್ಯುತಾನಂದನ್ ಹೇಳಿದರು.


'ಸರ್ಕಾರಿ ಶಾಲೆಗಳ ಶಿಕ್ಷಕರಿಗೆ ಸರ್ಕಾರದಿಂದಲೇ ನೇರವಾಗಿ ವೇತನ ನೀಡುವ ಶಿಕ್ಷಣ ಮಸೂದೆಯನ್ನು ಜಾರಿಗೆ ತರಲು ಇಎಂಎಸ್ ಸರ್ಕಾರ ಮುಂದಾದಾಗ, ಚರ್ಚ್ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳು ತೀವ್ರ ವಿರೋಧ ವ್ಯಕ್ತಪಡಿಸಿದವು. ಶಿಕ್ಷಕರ ವೇತನಕ್ಕೆ ಸಂಬಂಧಿಸಿದಂತೆ ಸರ್ಕಾರ ನೀಡುತ್ತಿದ್ದ ಅನುದಾನದಲ್ಲಿ ಕಡಿತವಾಗುತ್ತದೆ ಎಂದು ಚರ್ಚ್ ಮತ್ತು ಖಾಸಗಿ ಸಂಸ್ಥೆಗಳು ಗೊಂದಲ ಗಲಭೆ ಸೃಷ್ಟಿಸಿದವು. ಇದನ್ನು ಬಳಸಿ ಕೇಂದ್ರ ಸರ್ಕಾರವನ್ನು ವಜಾ ಮಾಡಿದ್ದರಿಂದ ಸರ್ಕಾರ ಪತನಗೊಂಡಿತು' ಎಂದರು.


ಮಹಿಳಾ ಡೊಳ್ಳು ಕುಣಿತ

### ಶಿಕ್ಷಣದ ಕಾರಣಕ್ಕಾಗಿ ವಜಾಗೊಂಡ ಏಕೈಕ ಸರ್ಕಾರ

ಸಾಹಿತಿ ಡಾ: ಯು.ಆರ್.ಅನಂತ ಮೂರ್ತಿ ಮಾತನಾಡಿ, 'ಅಭಿವೃದ್ಧಿ ಮತ್ತು ಪ್ರಗತಿ ನಡುವಿನ ವ್ಯತ್ಯಾಸ ಕಂಡುಕೊಳ್ಳುವ ಅಗತ್ಯವಿದೆ. ಪ್ರಗತಿಗೆ ಆದ್ಯತೆ ನೀಡಿ, ಜನ ಸಾಮಾನ್ಯರ ಜೀವನಮಟ್ಟ ಸುಧಾರಣೆ ಮತ್ತು ಸಮಸ್ಯೆಗಳ ನಿವಾರಣೆಗೆ ಪ್ರಾಮುಖ್ಯ ನೀಡಬೇಕಿದೆ' ಎಂದರು.

'ಇಎಂಎಸ್ ಗಾಂಧಿ ಯುಗದ ಅತ್ಯಂತ ಶ್ರೇಷ್ಠ ನಾಯಕರಲ್ಲಿ ಕೊನೆಯವರಾಗಿದ್ದರು. ಇಎಂಎಸ್ ಕನಸಿನ ಸಾಕಾರ ಈಗಿನ ಅಚ್ಯುತಾನಂದನ್ ಸರ್ಕಾರದಿಂದ ಆಗಲಿ. ಶಿಕ್ಷಣದ ಕಾರಣಕ್ಕಾಗಿ ವಜಾಗೊಂಡ ದೇಶದ ಏಕೈಕ ಸರ್ಕಾರ ಇ.ಎಂ.ಎಸ್.ರವರ ಸರ್ಕಾರಕ್ಕೆ ಇ.ಎಂ.ಎಸ್ ಶಿಕ್ಷಣ ಅಷ್ಟು ಮಹತ್ವದ ವಿಚಾರವಾಗಿತ್ತು. ನೆಹರೂ ಸರ್ಕಾರವನ್ನು ವಜಾ ಮಾಡಿ ಗಂಭೀರ ತಪ್ಪು ಮಾಡಿದರು. ನೆಹರುರವರ ಭವ್ಯ ಜೀವನದಲ್ಲಿ ಇದೊಂದು ಕಪ್ಪು ಚುಕ್ಕೆ. ಇದನ್ನು ಎಂದಿಗೂ ಕ್ಷಮಿಸಲಾಗದು. ಆದರೆ ಈಗ ನರೇಂದ್ರ ಮೋದಿಯನ್ನು ಇಳಿಸಲು ಆಗಲಿಲ್ಲ...


ಇಎಂಎಸ್ ಚರಿತ ಚಿತ್ರ ಪ್ರದರ್ಶನ ಉದ್ಘಾಟಿಸಿದ ಡಾ. ಕೆ.ಮರುಳಸಿದ್ಧಪ್ಪ

ಅಣು ವಿಷಯದಲ್ಲಿ ಅಮೇರಿಕಾ ಹೇಳಿದಂತೆ ಕೇಳಿದರೆ ಅಪಾಯ. ಪಾಕಿಸ್ತಾನದ ಮೇಲೆ ಅಮೇರಿಕಾ ಸಾಧಿಸಿರುವಂತಹ ಹಿಡಿತ ಭಾರತದ ಮೇಲೆ ಬರದೇ ಇರಲಿ.... ಬಿಜೆಪಿ ಅಧಿಕಾರಕ್ಕೆ ಬರದಂತೆ ನೋಡಿಕೊಳ್ಳಬೇಕು. ಅವರು ಅಧಿಕಾರಕ್ಕೆ ಬಂದರೆ ಹಿಂದೂ ಸಂಸ್ಕೃತಿ ನಾಶವಾಗುತ್ತದೆ. ಅವರು ಹೇಳುವುದು ಹಿಂದೂ ಸಂಸ್ಕೃತಿ ಅಲ್ಲ. ಮೋದಿಯನ್ನು ವೀರಾಧಿವೀರ ಎನ್ನುತ್ತಾರೆ. ಮತ್ತೆ ಮಾಂಸಾಹಾರ ತಿಂದರೆ ಕ್ರೌರ್ಯದ ಮನೋಭಾವ ಬೆಳೆಯುತ್ತದೆ ಎಂದೂ ಪ್ರಚಾರ ಮಾಡುತ್ತಿದ್ದಾರೆ. ಹಿಟ್ಲರ್ ಒಬ್ಬ ಸಸ್ಯಾಹಾರಿಯಾಗಿದ್ದ. ಬಿಜೆಪಿ ಮತ್ತೆ ಗೆದ್ದರೆ ರಾಜ್ಯದಲ್ಲೂ, ದೇಶದಲ್ಲೂ ಮೋದಿ ಮಾದರಿ ಬರುತ್ತದೆ. ವಾಜಪೇಯಿ ಮಾದರಿ ಅಲ್ಲ..... ಎಂದು ಅವರು ಎಚ್ಚರಿಸಿದರು.


'ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಲು ಪ್ರಬಲವಾದ ಹೋರಾಟ ಕೈಗೊಳ್ಳಬೇಕಿದೆ. ಕೋಮುವಾದದ ವಿರುದ್ಧ ಎಡಪಕ್ಷಗಳು ಸತತ ಹೋರಾಟ ನಡೆಸುತ್ತಿರುವುದು ಶ್ಲಾಘನೀಯ' ಎಂದು ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ ಹೇಳಿದರು.

ಸಿಪಿಎಂ ರಾಜ್ಯ ಘಟಕದ ಕಾರ್ಯದರ್ಶಿ ವಿ.ಜೆ.ಕೆ.ನಾಯರ್, ಪಕ್ಷದ ರಾಜ್ಯ ಮಂಡಳಿ ಸದಸ್ಯ ಜಿ.ಎನ್.ನಾಗರಾಜ್, ಎಸ್.ವೈ.ಗುರುಶಾಂತ್, ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ನೀಲಾ.ಕೆ ಮತ್ತಿತರರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

### ಚಳುವಳಿಯ ಇತಿಹಾಸ

ಕೇರಳದ ಕಮ್ಯುನಿಸ್ಟ್ ಚಳುವಳಿ ಹಾಗೂ ಅದರ ಮುನ್ನಡೆ ಬಗ್ಗೆ ಮಾತನಾಡಿದ ಕಾಂ:ವಿ.ಎಸ್., 1934ರಲ್ಲಿ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ಸ್ಥಾಪನೆಯೊಂದಿಗೆ ಕಮ್ಯುನಿಸ್ಟ್ ಚಟುವಟಿಕೆಗಳು ಹೆಗ್ಗುರುತು ಮೂಡಿಸಿದವು. 1937ರಲ್ಲಿ ಪ್ರೌಢವಾಗಿ ಕಮ್ಯುನಿಸ್ಟ್ ಪಕ್ಷ ಕೇರಳದಲ್ಲಿ ಸ್ಥಾಪಿತವಾಯಿತು.

ನಂತರ ಕಾರ್ಷಿಕ ಚಳುವಳಿ, ಕಾರ್ಮಿಕ ವರ್ಗದ ಆಂದೋಲನದ ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿ ಹೊರಹೊಮ್ಮಿದವು. ಅವು ಬ್ರಿಟೀಶ್ ವಸಾಹತುವಾದಿಗಳು ಹಾಗೂ ಭೂಮಾಲೀಕತ್ವದ ವಿರುದ್ಧವೂ ಸಾಗಿತು. ನೂರಾರು ಕಮ್ಯುನಿಸ್ಟ್ ಕ್ರಾಂತಿಕಾರಿಗಳು ಹುತಾತ್ಮರಾದರು. ಇದು ಮುನ್ನಡೆದು 1954ರಲ್ಲಿ ತಿರುಕೋಟೆ ಚುನಾವಣೆ, ಹಾಗೂ ಮುಖ್ಯವಾಗಿ 1957ರಲ್ಲಿ ಇಎಂಎಸ್ ನೇತೃತ್ವದ ಸರ್ಕಾರ ರಚಿತವಾಗುವಂತಾಯಿತು.


ಚಿತ್ರ ರಚನಾ ಸ್ಪರ್ಧೆ

ಈ ಸರ್ಕಾರ ತಂದ ಭೂ ಸುಧಾರಣಾ ಕಾಯ್ದೆ, ಶಿಕ್ಷಣ ಕಾಯ್ದೆ, ಅತ್ಯಂತ ಪ್ರಗತಿಪರವಾಗಿದ್ದವು. ಭೂ

➡

ಜನಶಕ್ತಿ ಕನ್ನಡ ವಾರಪತ್ರಿಕೆ



**ಸಿಪಿಐ(ಎಂ) ಮತ್ತು ಎಡಪಕ್ಷಗಳ ನಿರಂತರ ಸಂಘರ್ಷದಿಂದಾಗಿ ಆದಿವಾಸಿಗಳಿಗೆ ಅರಣ್ಯ ಭೂಮಿಯ ಹಕ್ಕು ನೀಡುವ ಕಾಯ್ದೆಯನ್ನು ಅಂಗೀಕರಿಸಿದ ಒಂದು ವರ್ಷದ ನಂತರ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಹಲವು ಕೊರತೆಗಳು ಹಾಗೆಯೇ ಉಳಿದುಕೊಂಡಿವೆ. ಕಾನೂನು ಬಂದರೆ ಸಾಲದು, ಜಾರಿಗಾಗಿ ಹೋರಾಟ ತೀವ್ರವಾಗಬೇಕಿದೆ.**

# ಅರಣ್ಯ ಹಕ್ಕು ಕಾಯ್ದೆಯೊಂದೇ ಸಾಕೇ?

ಪರಿಶಿಷ್ಟ ವರ್ಗಗಳು ಮತ್ತು ಇನ್ನಿತರ ಪರಂಪರಾಗತ ಅರಣ್ಯ ವಾಸಿಗಳ (ಒಟಿಎಫ್‌ಡಿ) ಅರಣ್ಯ ಹಕ್ಕುಗಳ ಮಾನ್ಯತೆ ಕಾಯಿದೆ-2006 ಸಂಸತ್ತಿನ ಅಂಗೀಕಾರ ಪಡೆದ ಒಂದು ವರ್ಷದ. ನಂತರ ಜನವರಿ 1ರಂದು ಕೇಂದ್ರ ಸರ್ಕಾರ ಮಸೂದೆಯನ್ನು ಅನುಷ್ಠಾನಗೊಳಿಸುವ ಮಾರ್ಗಸೂಚಿಗಳ ಅದಿಸೂಚನೆ ಹೊರಡಿಸಿದೆ.

ಸರ್ಕಾರ ಅಧಿಸೂಚನೆ ಹೊರಡಿಸದೆ ಯಾವುದೇ ಶಾಸನವನ್ನು ಅನುಷ್ಠಾನ 'ಗೊಳಿಸಲು ಸಾಧ್ಯವಿಲ್ಲ. ಸಂಸದೀಯ ನಿಯಮಗಳ ಪ್ರಕಾರ ಶಾಸನ ಅಳವಡಿಸಿಕೊಂಡ ಆರು ತಿಂಗಳೊಳಗೆ ಅಧಿಸೂಚನೆ ಹೊರಡಿಸಬೇಕು. ಅರಣ್ಯ ಕಾಯ್ದೆ ಕುರಿತ ಅಧಿಸೂಚನೆ ಹೊರಡಿಸುವಲ್ಲಿ ತುಂಬಾ ವಿಳಂಬವಾಯಿತು. ಇದಕ್ಕೆ ಹಲವಾರು ಕಾರಣಗಳಿವೆ.

**ವಿಳಂಬ 'ತಂತ್ರ'**

ಈ ಅರಣ್ಯ ಕಾಯ್ದೆಯಲ್ಲಿ ಕನಿಷ್ಠ ಮೂರು ನಾಲ್ಕು ವಿಷಯಗಳು ಅಧಿಸೂಚನೆ ಹೊರಡಿಸುವಲ್ಲಿ ಭಾರಿ ವಿವಾದ ಮತ್ತು ಚರ್ಚೆಗೆ ಗ್ರಾಸ ಒದಗಿಸಿದವು. ಇದೇ ರೀತಿ ಇತರೆ ಕೆಲವು ಕಾಯ್ದೆಗಳನ್ನು ಗಮನಿಸಿದಾಗ ಅವುಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಭಿನ್ನದೋರಣೆ ಅನುಸರಿಸಿರುವುದು ನಮ್ಮ ಗಮನಕ್ಕೆ ಬರುತ್ತದೆ. ಉದಾಹರಣೆಗೆ ವಿಶೇಷ ಆರ್ಥಿಕ ವಲಯ (ಎಸ್‌ಇಜಡ್) ಶಾಸನ ಜಾರಿಗೆ ಅಧಿಸೂಚನೆ ಹೊರಡಿಸಿದಾಗ ರಾತ್ರೋರಾತ್ರಿ ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಯಿತು. ಅದರಲ್ಲಿರುವ ಹಲವು ಕಾನೂನುಗಳು ಆ ಕಾಯ್ದೆಯನ್ನು ಇನ್ನಷ್ಟು 'ಶಕ್ತಿಯುತ'ಗೊಳಿಸಿವೆ. ಎಸ್‌ಇಜಡ್ ಅಭಿವೃದ್ಧಿಗೆ ನೇಮಕವಾಗಿರುವ ಆಯುಕ್ತರಿಗೆ ಸರ್ವರೀತಿಯ ಅಧಿಕಾರ ಕಲ್ಪಿಸಲಾಗಿದೆ. ಆದರೆ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಕುರಿತು ಅಧಿಸೂಚನೆ ಹೊರಡಿಸಲು ಉದ್ದೇಶಪೂರ್ವಕವಾಗೇ ಒಂದು ವರ್ಷ ವಿಳಂಬಗೊಳಿಸಲಾಯಿತು. ಅದೇ ರೀತಿ ಬುಡಕಟ್ಟು ಜನಾಂಗಗಳು ಎತ್ತಂಗಡಿ ಭೀತಿಯಲ್ಲಿ ನರಳುತ್ತಿದ್ದರೆ ಸರ್ಕಾರ ಅರಣ್ಯ ಕಾಯ್ದೆ ಅಧಿಸೂಚನೆ ಹೊರಡಿಸಲು ಹಿಂದೆ ಮುಂದೆ ನೋಡುತ್ತಿತ್ತು. ಸಂಸತ್ತಿನ ಸಂಕಲ್ಪವನ್ನೇ ಮುರಿಯಲು ಅಧಿಸೂಚನೆ ಹೊರಡಿಸುವುದನ್ನು ವಿಳಂಬ ಗೊಳಿಸುವುದರೊಂದಿಗೆ ಹಲವು ರೀತಿಯ ಹೇಯ ಕೃತ್ಯಗಳಿಗೆ ಸ್ವಾರ್ಥ ಹಿತಾಸಕ್ತಿಗಳು ಪ್ರಬಲ ಲಾಭಿ ನಡೆಸಿದವು.



**ವಿಫಲವಾದ ಬುಡಮೇಲು ಕೃತ್ಯ**

ಈ ಕಾನೂನು ಅನುಷ್ಠಾನಗೊಳಿಸಲು ಅಧಿಸೂಚನೆ ಹೊರಡಿಸುವ ಮೊದಲು ಸಹ ಹಲವಾರು ಪ್ರತಿರೋಧಗಳನ್ನು ಎದುರಿಸಿತು. 'ಸೂಕ್ಷ್ಮ ವನ್ಯಜೀವಿ ನೆಲೆ'ಗಳಲ್ಲಿ ನೆಲೆಸಿರುವ ಆದಿವಾಸಿಗಳನ್ನು ತೆರವುಗೊಳಿಸುವ ತನಕ ಅಧಿಸೂಚನೆ ಹೊರಡಿಸದಿರಲು ಪರಿಸರವಾದಿಗಳ ಮಧ್ಯದಲ್ಲಿರುವ ಬುಡಕಟ್ಟು ವಿರೋಧಿ ಶಕ್ತಿಗಳು ಮತ್ತು ಅಧಿಕಾರಿಗಳು ಸರ್ಕಾರದ ಉನ್ನತ ಶ್ರೇಣಿಯ ಅಧಿಕಾರಿಗಳ ಮನವೊಲಿಸಲು ತೀವ್ರ ಪ್ರಯತ್ನಗಳನ್ನು ನಡೆಸಿದರು. ಇಂತಹ ಪ್ರಯತ್ನಗಳು ಮುಖ್ಯವಾಗಿ ಕಾನೂನನ್ನು ಬುಡಮೇಲುಗೊಳಿಸಲು ನಡೆಸುವುದಾಗಿದೆ. ಈ ಕಾನೂನು ಕಾಡನ್ನು ನಾಶಪಡಿಸುತ್ತಿದೆ ಎಂದು ನಿರಂತರವಾಗಿ ಅಪಪ್ರಚಾರ ಮಾಡಲಾಯಿತು. ಆದರೆ ಸತತ ಒತ್ತಡ ಹೇರಿದ್ದರಿಂದ ಆ ಎಲ್ಲ ಪ್ರಯತ್ನಗಳು ವಿಫಲವಾದವು. ಪ್ರಧಾನ ಮಂತ್ರಿಗಳ ಬಳಿಗೆ ಸರ್ವಪಕ್ಷಗಳ ನಿಯೋಗ ಕರೆದೊಯ್ಯುವುದರೊಂದಿಗೆ ಸಂಸತ್ ಅಧಿವೇಶನದಲ್ಲಿ ಸಿಪಿಎಂ ಪಕ್ಷ ಸಭಾತ್ಯಾಗ ಮಾಡಿತು. ಪರಿಸರ ಮತ್ತು ಅರಣ್ಯ ಸಚಿವಾಲಯ ಕಾರ್ಯದರ್ಶಿ ವಿರುದ್ಧ ಪಾರ್ಲಿಮೆಂಟಿನಲ್ಲಿ ಹಕ್ಕುಚ್ಯುತಿ ಮಂಡಣೆ ಮಾಡಲಾಯಿತು. ಸಂಬಂಧಿತ ಹಲವಾರು ಪ್ರಾಧಿಕಾರಗಳೊಂದಿಗೆ ನಿರಂತರ ಚರ್ಚೆಗಳನ್ನು ನಡೆಸಲಾಯಿತು. ಇವೆಲ್ಲಕ್ಕಿಂತ ಹೆಚ್ಚಾಗಿ ಬುಡಕಟ್ಟು ಜನಾಂಗಗಳನ್ನು ಸಂಘಟಿಸಿ ಹೋರಾಟ ನಡೆಸಲಾಯಿತು.

ಸಂರಕ್ಷಿತ ಅರಣ್ಯ ಪ್ರದೇಶಗಳಲ್ಲಿ ನೆಲೆಸಿರುವ ಆದಿವಾಸಿಗಳನ್ನು ಶಾಸನ ಜಾರಿಗೆ ಬರುವ ಮುನ್ನವೇ ತೆರವುಗೊಳಿಸುವ ಉದ್ದೇಶದಿಂದ ಕಾನೂನಿನಲ್ಲಿ ಅಡಕಗೊಳಿಸಿರುವ 'ಸೂಕ್ಷ್ಮ ವನ್ಯಜೀವಿ ನೆಲೆಸಿರುವ ಅರಣ್ಯ ವಾಸಿಗಳು' ಯಾರು, ಯಾವ ಪ್ರದೇಶದಲ್ಲಿ ಎಷ್ಟು ಮಂದಿ ನೆಲೆಸಿದ್ದಾರೆ ಎಂಬುದನ್ನು ಪತ್ತೆ ಹಚ್ಚಬೇಕೆಂಬ ನೆಪ ಒಡ್ಡಿ ಅಧಿಸೂಚನೆ ಹೊರಡಿಸುವುದನ್ನು ವಿಳಂಬಗೊಳಿಸುತ್ತಾ ಬಂದರು. ವಾಸ್ತವವಾಗಿ ಈ ಶಾಸನ ಆದಿವಾಸಿಗಳಿಗೆ ಸಂರಕ್ಷಿತ ಅರಣ್ಯ ಪ್ರದೇಶಗಳು ಸೇರಿದಂತೆ ಕಾಡಿನ ಭೂಮಿಯ ಹಕ್ಕನ್ನು ಒದಗಿಸಿದೆ. ಇಷ್ಟೇ ಅಲ್ಲದೆ ಒಂದು ವೇಳೆ ಸೂಕ್ಷ್ಮ ಪ್ರದೇಶದಲ್ಲಿ ನೆಲೆಸಿರುವವರನ್ನು ಗುರುತಿಸಬೇಕಾದರೆ ಮತ್ತು ಪುನರ್‌ವಸತಿ ಒದಗಿಸಬೇಕಾದರೆ ಸವಿವರವಾದ ಮಾರ್ಗಸೂಚಿಗಳನ್ನು ನೀಡಲಾಗಿದೆ. ಗ್ರಾಮಸಭೆಗಳನ್ನು ನಡೆಸಬೇಕು. ಪುನರ್‌ವಸತಿ ಕಲ್ಪಿಸಲೇಬೇಕು ಅಲ್ಲದೆ ಇದಕ್ಕೆ ಅಗತ್ಯವಾದ ವೈಜ್ಞಾನಿಕ ಕಾರಣಗಳನ್ನು ಒದಗಿಸಬೇಕು.

ದೇಶದಲ್ಲಿ ಕನಿಷ್ಠ 600 ಸಂರಕ್ಷಿತ ಪ್ರದೇಶಗಳಿವೆ. ಸೂಕ್ಷ್ಮ ವನ್ಯಜೀವಿ ನೆಲೆ ಪತ್ತೆ ಹಚ್ಚುವ ಕಾರ್ಯಕ್ಕೆ ಮುಂದಾದರೆ ಸಮೀಕ್ಷೆ ಪೂರ್ಣಗೊಳಿಸಲು ಕನಿಷ್ಠ ಒಂದರಿಂದ ಎರಡು ವರ್ಷ ಬೇಕಾಗುತ್ತದೆ. ಆಗ ಆದಿವಾಸಿಗಳನ್ನು ತೆರವುಗೊಳಿಸಲು ಇನ್ನಷ್ಟು ಸಮಯ ಪಡೆಯುವ ಪಿತೂರಿಯನ್ನು ನಡೆಸಿದ್ದರು. ಸಿಪಿಎಂ ಪಕ್ಷ ಮಧ್ಯಪ್ರವೇಶ ಮಾಡಿದ್ದರಿಂದಾಗಿಯೇ ಕಾನೂನನ್ನು ಹತ್ತಿಕ್ಕುವ ಪಿತೂರಿಯನ್ನು ಹಿಮ್ಮೆಟ್ಟಿಸಲು ಸಾಧ್ಯವಾಯಿತು.

ಈ ಹಿಂದಿನ ವನ್ಯ ಮೃಗ ಸಂರಕ್ಷಣಾ ಕಾಯ್ದೆ ವಿಶೇಷವಾಗಿ ಹುಲಿಗಳ ಸಂರಕ್ಷಣೆ ಕುರಿತು ಒತ್ತಿ ಹೇಳಿತ್ತು. ಈ ಕುರಿತು ಅಧಿಸೂಚನೆ ಹೊರಡಿಸುವ ನಡುವಿನ ಅವಧಿಯಲ್ಲಿ ಹುಲಿಗಳು ಎಲ್ಲೆಲ್ಲಿವೆ ಎಂಬುದನ್ನು ಗುರುತಿಸಲಾಯಿತು. ಆದರೆ ವಾಸ್ತವವಾಗಿ ಈ. ಕಾನೂನನ್ನು ಜಾರಿಗೊಳಿಸುವ ಮುನ್ನ ಹುಲಿಗಳು ಎಲ್ಲೆಲ್ಲಿವೆ ಎಂಬುದನ್ನು ಗುರುತಿಸಲಿಲ್ಲ. ವರದಿಗಳ ಪ್ರಕಾರ 36 ಹುಲಿ ಸಂರಕ್ಷಣಾ ಪ್ರದೇಶಗಳಲ್ಲಿ ಗುರುತು ಹಚ್ಚುವ ಕಾರ್ಯವನ್ನು ಪೂರ್ಣಗೊಳಿಸಲಾಗಿದ್ದು, 273 ಗ್ರಾಮಗಳನ್ನು ಮರುವಸತಿ ಕಲ್ಪಿಸಬೇಕೆಂದು ಹೇಳಲಾಗಿತ್ತು. ಇಲ್ಲಿ ಸ್ಮರಿಸಬೇಕಾದ ಮತ್ತೊಂದು ಪ್ರಮುಖ ವಿಷಯವೆಂದರೆ ಇಲ್ಲಿ ತೆರವುಗೊಳಿಸಿದ ಕುಟುಂಬಗಳಿಗೆ ಒಂದು ಲಕ್ಷ ರೂ. ಮಾತ್ರ ಪರಿಹಾರ ಕಲ್ಪಿಸಲಾಗಿತ್ತು. ಇದಕ್ಕೆ ಸಂಸತ್‌ನಲ್ಲಿ ಸಿಪಿಎಂ ಬಲಿಷ್ಠ ವಿರೋಧ ವ್ಯಕ್ತಪಡಿಸಿತು. ಹತ್ತು ಲಕ್ಷ ರೂ. ಪರಿಹಾರ ನೀಡಬೇಕು ಅಥವಾ ಅದಕ್ಕೆ ಸರಿಸಮನಾದ ಭೂಮಿ ನೀಡಬೇಕೆಂತಲೂ ಒತ್ತಾಯಿಸಿತು. ಪರಿಹಾರವನ್ನು ಮೊದಲೇ ಅಥವಾ ಪುನರ್ ವಸತಿ ಕಲ್ಪಿಸಿದ ನಂತರ ನೀಡಿದರೂ ಇದು ಪ್ರಮುಖ ಬೆಳವಣಿಗೆಯಾಗಿದೆ. ಕಾನೂನಿನಲ್ಲಿರುವಂತೆ ಬುಡಕಟ್ಟು ಕುಟುಂಬಗಳೊಂದಿಗೆ ಸಮಾಲೋಚನೆ ನಡೆಸಿ ಪರಿಹಾರ ನೀಡಬೇಕಾಗಿದೆ. ಅಂತಹ ಸಮಾಲೋಚನೆ ಇಲ್ಲದೆ ಯಾವುದೇ ಪುನರ್ ವಸತಿ ಕಾರ್ಯಗಳನ್ನು ಕೈಗೊಳ್ಳುವಂತಿಲ್ಲ. ಚತ್ತೀಸ್‌ಘಡ ಒಂದರಲ್ಲೇ ಇಂತಹ 50 ಹಳ್ಳಿಗಳಿದ್ದು, ಮಧ್ಯಪ್ರದೇಶ, ರಾಜಸ್ತಾನ, ಮಹಾರಾಷ್ಟ್ರ ಮತ್ತು ಒರಿಸ್ಸಾಗಳಲ್ಲಿಯೂ ಗಣನೀಯ ಪ್ರಮಾಣದಲ್ಲಿವೆ. ಪ್ರಮುಖ ಅರಣ್ಯ ಪ್ರದೇಶಗಳನ್ನು ಗುರುತಿಸಲು ಆಯಾ ಗ್ರಾಮಸ್ಥರೊಂದಿಗೆ ಸಂಪರ್ಕ ಹೊಂದುವುದು ಬಹಳ ಮುಖ್ಯವಾಗಿದೆ. ಆಗ ಮಾತ್ರ ಅವರ ಹಕ್ಕುಗಳನ್ನು ರಕ್ಷಿಸಲು ಸಾಧ್ಯ.

## ಕಾನೂನಿನಲ್ಲಿರುವ ಬಿರುಕು ಮತ್ತು ದೋಷಗಳು:

ಅಂತಿಮವಾಗಿ ರೂಪಿಸಿರುವ ಕಾನೂನಿನಲ್ಲಿ ಹಲವಾರು ಬಿರುಕುಗಳು ಮತ್ತು ದೌರ್ಬಲ್ಯಗಳಿವೆ. 'ನೈಜ ಜೀವನ ಅಗತ್ಯ'ಗಳು ಎಂಬುದನ್ನು ಅಪಾಯಕರ ರೀತಿಯಲ್ಲಿ ವ್ಯಾಖ್ಯಾನಿಸಲಾಗಿದೆ. ಕಾನೂನು ಪ್ರಕಾರ ಬುಡಕಟ್ಟು ಜನಾಂಗಗಳು ತಮ್ಮ ಅಗತ್ಯಗಳಿಗಾಗಿ ಸಣ್ಣ ಪ್ರಮಾಣದ ಕಾಡು ಉತ್ಪನ್ನಗಳನ್ನು ಬಳೆಸುವ ಹಕ್ಕನ್ನು ಇದು ಹತ್ತಿಕ್ಕಲಿದೆ. ಎರಡನೆಯದಾಗಿ 'ಮೂಲತಃ ಕಾಡಿನಲ್ಲಿ ನೆಲೆಸಿರುವವರು' ಎಂಬುದನ್ನು ನಿಯಮಗಳಲ್ಲಿ ಸೇರಿಸಲಾಗಿದೆ. ಇದರಿಂದ ಕಾಡಿನ ಅಂಚಿನಲ್ಲಿ ವಾಸವಾಗಿದ್ದು ಕಾಡಿನ ಮೇಲೆ ಅವಲಂಬಿಸಿರುವವರಿಗೆ ಶಾಸನ ನೀಡಿರುವ ಹಕ್ಕುಗಳನ್ನು ವಂಚಿಸಿದಂತಾಗಿದೆ. ಮೂರನೆಯದಾಗಿ ಸಂಕಷ್ಟಕ್ಕೆ ಗುರಿಯಾದವರ ಪಟ್ಟಿಯಲ್ಲಿ 'ಸರ್ಕಾರಿ ಸಂಸ್ಥೆಗಳು' ಎಂದು ಸೇರ್ಪಡೆ ಮಾಡಿರುವುದರಿಂದ ಗ್ರಾಮಸಭೆಯ ನಿರ್ಣಯದ ವಿರುದ್ಧ ಅವರು ಮೇಲ್ಮನವಿ ಸಲ್ಲಿಸಬಹುದಾಗಿದೆ. ನಾಲ್ಕನೆಯದಾಗಿ ಗ್ರಾಮ ಸಭೆಗಳಲ್ಲಿ ಹೆಚ್ಚಿನ ಬಹುಮತ ಇರಬೇಕೆಂಬ ಅವಾಸ್ತವಿಕವಾದ ಅಂಶ ಹಾಗೂ ಐದನೆಯದಾಗಿ ಸಂಸತ್‌ನಲ್ಲಿ ಅಧಿವೇಶನದ ಸಂದರ್ಭದಲ್ಲಿ ಸರ್ಕಾರ ನೀಡಿರುವ ಭರವಸೆಯಂತೆ 'ಉರುವಲು ಮರ' ಮತ್ತು 'ಕಲ್ಲುಗಳ'ನ್ನು ಸಣ್ಣ ಪ್ರಮಾಣದ ಕಾಡು ಬೆಳೆಸುವುದರಲ್ಲಿ ಸೇರ್ಪಡೆ.ಮಾಡದಿರುವುದು. ಈಗಾಗಲೇ ಸರ್ಕಾರಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ನೆಲೆಸಿರುವ ಅರಣ್ಯವಾಸಿಗಳ ಹಕ್ಕುಗಳನ್ನು ರಕ್ಷಿಸುವುದನ್ನೂ ನಿಯಮಗಳಲ್ಲಿ ಸೇರ್ಪಡೆ ಮಾಡಿಲ್ಲ. ಮುಂದಿನ ದಿನಗಳಲ್ಲಿ ಈ ನ್ಯೂನತೆಗಳನ್ನು ಸರಿಪಡಿಸುವಂತೆ ಹೋರಾಟಗಳನ್ನು ಕೈಗೊಳ್ಳಬೇಕಾಗಿದೆ.

ಹಾಗಿದ್ದರೂ ಈಗ ಈ ಕಾನೂನನ್ನು ಪರಿಣಾಮಕಾರಿಯಾಗಿ ಆದಷ್ಟು ಬೇಗನೆ ಅನುಷ್ಠಾನಗೊಳಿಸಲು ನಮ್ಮೆಲ್ಲ ಶಕ್ತಿಯನ್ನು ಕ್ರೋಢೀಕರಿಸುವುದು ಅಗತ್ಯವಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಕಾನೂನಿಗೆ ಬದ್ಧವಾಗಿರಬೇಕಾಗಿದ್ದು ಬುಡಕಟ್ಟು ಮತ್ತು ಆದಿವಾಸಿಗಳನ್ನು ತೆರವು ಮಾಡುವ ಕ್ರಮಗಳನ್ನು ಈಗಿಂದೀಗಲೆ ಸ್ಥಗಿತಗೊಳಿಸಬೇಕು. ಮಧ್ಯಪ್ರದೇಶ, ರಾಜಸ್ತಾನ, ಜಾರ್ಖಂಡ್ ಮತ್ತು ಮಹಾರಾಷ್ಟ್ರಗಳಲ್ಲಿನ ಸಿಪಿಐ(ಎಂ) ಪಕ್ಷದ ಘಟಕಗಳು ಅರಣ್ಯ ವಾಸಿಗಳನ್ನು ತೆರವುಗೊಳಿಸುತ್ತಿರುವ ವರದಿಗಳನ್ನು ನೀಡಿವೆ. ಕೆಲವೊಂದು ಪ್ರಕರಣಗಳಲ್ಲಿ ಸರ್ಕಾರಿ ಅಂಗಸಂಸ್ಥೆಗಳು ಬುಡಕಟ್ಟು ಜನಾಂಗಗಳು ಪರಂಪರಾಗತವಾಗಿ ನೆಲೆಸಿರುವ ಕಡೆ ಹಳ್ಳಗಳನ್ನು ತೆಗೆದು ಭೂಮಿಯನ್ನು ತಮ್ಮದೆಂದು ಹೇಳುತ್ತಿವೆ. ಕಾನೂನಿನಲ್ಲಿರುವ ನಿಯಮಗಳನ್ನು ಬಳಕೆ ಮಾಡುವ ಮೂಲಕ ಇಂತಹ ತಪ್ಪು ಕ್ರಮಗಳನ್ನು ಹಿಮ್ಮೆಟ್ಟಿಸಬೇಕಾಗಿದೆ.

## ಸುವರ್ಣ ಸಂಭ್ರಮ

ಸಂಬಂಧಗಳಲ್ಲಿ ಶಿಕ್ಷಣರಂಗ, ಪೋಲೀಸ್ ಇಲಾಖೆಯಲ್ಲಿ ಹಲವು ಸುಧಾರಣೆಗಳ ತಂದದ್ದು ಪ್ರತಿಗಾಮಿಗಳನ್ನು ಕೆರಳಿಸಿತು. ಕೆಲವು ಗುಂಪುಗಳು, ಕೋಮುವಾದಿಗಳು, ಕಾಂಗ್ರೆಸ್ ನಾಯಕತ್ವದಲ್ಲಿ ಸೇರಿ ಸರ್ಕಾರದ ವಿರುದ್ಧ ವಿಮೋಚನಾ ಸಮರ ಸೇರಿ ಅಂತಿಮವಾಗಿ ಕೇಂದ್ರ ಸರ್ಕಾರ ಸಂವಿಧಾನದ 356ನೇ ಕಲಂ ಬಳಸಿ ಸರ್ಕಾರವನ್ನು ಉರುಳಿಸಿತು ಎಂದು ವಿಶ್ಲೇಷಿಸಿದರು. ಇದರಲ್ಲಿ ಅಮೇರಿಕಾ ಗೂಢಾಚಾರ ಸಂಸ್ಥೆ (ಸಿಐಎ) ಯೂ ಭಾಗಿಯಾದದ್ದನ್ನು ಪ್ರಸ್ತಾಪಿಸಿದರು. ಅಂದಿನ ಸರ್ಕಾರ ಮುಂಬರುವ ರಾಜಕೀಯ ವಿದ್ಯಾಮಾನಗಳ ಮೇಲೆ ಗಾಢ ಪ್ರಭಾವಿಸಿದ್ದನ್ನು ಅವರು ಗುರುತಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ. ನಾಯರ್‌ರವರು ಇ.ಎಂ.ಎಸ್. ಸರ್ಕಾರ ಅಧಿಕಾರ ಬಂದದ್ದು ಕೇರಳದಲ್ಲಿನ ಬೃಹತ್ ಸಮರಧೀರ ಚಳುವಳಿಗಳಿಂದ ಎಂಬುದನ್ನು ಗುರುತಿಸಿದರು. ಕರ್ನಾಟಕದಲ್ಲಿಯೂ ಇಂದಿನ ಸ್ಥಿತಿಯನ್ನು ಎದುರಿಸಿ ಎಡಶಕ್ತಿಗಳು ಮುನ್ನಡೆಯಬೇಕೆಂದರೆ ರಾಜ್ಯದಲ್ಲಿಯೂ ದುಡಿಯುವ ವರ್ಗದ ಚಳುವಳಿಯನ್ನು ದೃಢವಾಗಿ ಕಟ್ಟಿ ಬೆಳಸಬೇಕು' ಎಂದರು. ನಂತರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಚುನಾಯಿತ ಸರ್ಕಾರವಿಲ್ಲದ ಕರ್ನಾಟಕದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಯಲ್ಲಿದೆ. ರಾಷ್ಟ್ರಪತಿ ಆಡಳಿತ ಎಂದರೇನು? ಪ್ರಜಾಪ್ರಭುತ್ವ ಎಂದರೇನು? ಎಂದು ಇಲ್ಲಿನ ಸಂದರ್ಭದ ಸರಿಯಾದ ವಿಶ್ಲೇಷಣೆಯ ಮೂಲಕ ಕಂಡುಕೊಳ್ಳಬಹುದಾಗಿದೆ.



# ರಾಷ್ಟ್ರಪತಿ ಆಡಳಿತವೆಂಬ ಕನ್ನಡಿಯ ಮೂಲಕ ಪ್ರಜಾಪ್ರಭುತ್ವದ ಸ್ವರೂಪ ದರ್ಶನ



ಜಿ.ಎನ್.ನಾಗರಾಜ್

ಕರ್ನಾಟಕ ನಾಲ್ಕು ತಿಂಗಳಿಗೂ ಹೆಚ್ಚು ರಾಷ್ಟ್ರಪತಿಗಳ ಆಡಳಿತದಲ್ಲಿದೆ. ರಾಷ್ಟ್ರಪತಿಗಳ ಪರವಾಗಿ ರಾಜ್ಯಪಾಲರು, ಕೇಂದ್ರ ಸರ್ಕಾರ ನೇಮಿಸಿದ ಮೂರು ಜನ ಸಲಹೆಗಾರರು ಆಡಳಿತ ನಡೆಸಿದ್ದಾರೆ. ರಾಷ್ಟ್ರಪತಿಗಳ ಆಡಳಿತ ಘೋಷಣೆಯಾಗುವ ಮುನ್ನಾ ದಿನಗಳಲ್ಲಿ ರಾಜ್ಯದಲ್ಲಿ ನಡೆಯುತ್ತಿದ್ದ ಗೌಜು, ಗದ್ದಲ, ಗೊಂದಲ, ಕಚ್ಚಾಟಗಳೂ ರಾಜ್ಯದ ಜನರಿಗೆ ರಾಜಕೀಯದ ಬಗ್ಗೆಯೇ ಅಸಹ್ಯವನ್ನುಂಟುಮಾಡಿದ್ದ ನಡವಳಿಕೆಗಳು ಮಾಯವಾಗಿಲ್ಲದಿದ್ದರೂ ಕಡಿಮೆಯಾಗಿವೆ. ಪ್ರತಿದಿನ ದೂರದ ಊರುಗಳಿಂದ ಬೆಂಗಳೂರಿಗೆ ಬಂದು ಮಂತ್ರಿಗಳ ಮನೆಮುಂದೆ ಮುಖ್ಯ ಮಂತ್ರಿಗಳ ಮನೆ ಮುಂದೆ ನೆರೆಯುತ್ತಿದ್ದ ಶಾಸಕರ ಭವನ, ವಿಧಾನಸೌಧಗಳ ಒಳಗೆ ನೂಕುನುಗ್ಗಲುಂಟು ಮಾಡುತ್ತಿದ್ದ ಜನಸಂದಣಿ ಈಗ ಕಾಣುತ್ತಿಲ್ಲ. ಸಚಿವರ ಮುಖ್ಯಮಂತ್ರಿಗಳ ಮುಖಕ್ಕೆ ಮೈಕ್ ಹಿಡಿದು ಸೃಷ್ಟಿ ಮಾಡುತ್ತಿದ್ದ ಸುದ್ದಿಗಳು, ಗೊಂದಲಗಳು ಮಂತ್ರಿ ಮಾನ್ಯರುಗಳ ಹೆಬ್ಬುಬ್ಬೆಯ ಹೇಳಿಕೆಗಳು, ಪ್ರವಾಸಗಳು ಇಲ್ಲವಾಗಿವೆ. ಪತ್ರಿಕೆಗಳು, ಮಾಧ್ಯಮಗಳು ಮಸಾಲೆಯಿಲ್ಲದೆ ಸಪ್ಪೆಯಾಗಿವೆ. ಹೀಗೆ ಈ ಪಟ್ಟಿಯನ್ನು ಬೆಳೆಸಬಹುದು.

**ಆಡಳಿತ ಸಾಗಿದೆ**

ಅದೇ ಸಮಯದಲ್ಲಿ ರಾಜ್ಯದ ಆಡಳಿತ ಸಾಗುತ್ತಿದೆ. ಮುಖ್ಯಮಂತ್ರಿಗಳ ಕುರ್ಚಿಯಲ್ಲಿ ರಾಜ್ಯಪಾಲರು ಆಸೀನರಾಗಿದ್ದಾರೆ. ಜನತಾದರ್ಶನವನ್ನು ನಡೆಸುತ್ತಿದ್ದಾರೆ. ಹಲವು ಮುಖ್ಯಮಂತ್ರಿಗಳಿಗೆ, ಮಂತ್ರಿಗಳಿಗೆ, ಅಧಿಕಾರಿಗಳಿಗೆ ಹಿಂದೆ ನೀಡಿದ್ದ ಮನವಿಪತ್ರದ ಹೊಸ ಪ್ರತಿಗಳನ್ನು (ಏಕೆಂದರೆ ಮುಖ್ಯಮಂತ್ರಿಗಳೇ ಸ್ವತ: ಆಜ್ಞೆ ಮಾಡಿದರೂ ಕೆಲಸ ಆಗಿಲ್ಲವಲ್ಲ) ರಾಜ್ಯಪಾಲರ ಮುಂದೆಯೂ ಹಿಡಿಯುತ್ತಿದ್ದಾರೆ. ಅವುಗಳ ಬಗ್ಗೆ ರಂಜಿತವಾದ ವರ್ಣನೆಗಳು ಪತ್ರಿಕೆಗಳಲ್ಲಿ ಬರುತ್ತಲೇ ಇವೆ. ಮಂತ್ರಿಮಂಡಳದ ಸಭೆಗಳ ಜಾಗದಲ್ಲಿ ರಾಜ್ಯಪಾಲರ ಸಲಹೆಗಾರರ, ಪ್ರಮುಖ ಅಧಿಕಾರಿಗಳ ಸಭೆಗಳು ನಡೆಯುತ್ತಿವೆ.

ರಾಜ್ಯದ ಆಡಳಿತ ಮತ್ತು ಅಭಿವೃದ್ಧಿ ಕೆಲಸಗಳ ಬಗ್ಗೆ ನೀತಿ ನಿರೂಪಣೆಗಳ ಬಗ್ಗೆ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತಿದೆ. ಆಜ್ಞೆಗಳನ್ನು ಹೊರಡಿಸಲಾಗುತ್ತಿದೆ. ಹಲವಾರು ರಾಜ್ಯಮಟ್ಟದ ಅಧಿಕಾರಿಗಳ ಸಭೆಗಳನ್ನು ನಡೆಸಲಾಗಿದೆ. ಸೂಚನೆ, ಆದೇಶಗಳನ್ನು ನೀಡಲಾಗಿದೆ. ಕರಸಂಗ್ರಹಣೆಯ ಕೆಲಸಗಳು ಭರದಿಂದ ಸಾಗುತ್ತಿದೆ. ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಇನ್ನು ಮಂತ್ರಿಗಳ ಮುಂದೆ ನಿಂತು ಅವರ ಆಜ್ಞೆ ಆದೇಶಗಳನ್ನು ಪಡೆಯುತ್ತಿದ್ದ ಅಥವಾ ತಮ್ಮ ಆಜ್ಞೆ ಆದೇಶಗಳನ್ನು ಮಂತ್ರಿಗಳ ರುಜುವಿನ ಮೂಲಕ ಅಮಲಿಗೆ ತರುತ್ತಿದ್ದ ಇಲಾಖಾ ಕಾರ್ಯದರ್ಶಿಗಳು ತಾವೇ ಮಂತ್ರಿಗಳಂತೆ ವರ್ತಿಸುತ್ತಿದ್ದಾರೆ. ಅನೇಕ ಕಾರ್ಯಕ್ರಮಗಳಲ್ಲಿಯೂ ಮಂತ್ರಿಗಳ ಜಾಗದಲ್ಲಿ ತಾವೇ ಪ್ರತಿಷ್ಠಿತರಾಗಿ ಪತ್ರಿಕೆಗಳಲ್ಲಿ ರಾರಾಜಿಸುತ್ತಿದ್ದಾರೆ. ಅಧಿಕಾರಿಗಳ ವರ್ಗಾವಣೆಯೂ ಸಾರಾಸಗಟಾಗಿ ನಡೆದಿದೆ. ಮುಖ್ಯ ಕಾರ್ಯದರ್ಶಿಗಳನ್ನೇ ಬದಲಾಯಿಸಲಾಗಿದೆ. ಸೇವಾ ಹಿರಿತನಗಳನ್ನು ಬದಿಗೊತ್ತಿ ಹೊಸ ಮುಖ್ಯ ಕಾರ್ಯದರ್ಶಿಯನ್ನು ನೇಮಕ ಮಾಡಲಾಗಿದೆ. ಪೊಲೀಸ್ ಇಲಾಖೆಯ ಪ್ರಮುಖ ಅಧಿಕಾರಿಗಳನ್ನು ಬದಲಾಯಿಸುವ ಸುದ್ದಿಗಳೂ ಇವೆ. ವಿ.ವಿ. ಉಪಕುಲಪತಿಗಳನ್ನು ನೇಮಕ ಮಾಡಲಾಗಿದೆ.

**ಭ್ರಷ್ಟಾಚಾರವೂ ಸಾಗಿದೆ**


ಲಂಚ ನೀಡುವ ಕೈಗಳು ಅದೇ ಗಣಿಮಾಫಿಯ, ಭೂಮಾಫಿಯಾ, ಕೈಗಾರಿಕೆಗಳ ಮಾಲೀಕರು, ಮದ್ಯದ ದೊರೆಗಳು, ಕಂಟ್ರಾಕ್ಟರುಗಳು ಹೀಗೆ ಅದೇ ಹಿಂದಿನ ಕೈಗಳೇ ಆದರೂ ಲಂಚ ಸ್ವೀಕರಿಸುವ ಕೈಗಳು ಬದಲಾಗಿವೆ. ಲಂಚದ ಪ್ರಮಾಣ ಬದಲಾಗಿದೆಯೇ? ಗೊತ್ತಿಲ್ಲ. ಬಹಳ ಜನಕ್ಕೆ ಈ ವಹಿವಾಟುಗಳ ರೂಪ, ರೀತಿ ತಿಳಿಯುತ್ತಿಲ್ಲ. ಅದೇ ಮುಖ್ಯವಾದ ಬದಲಾವಣೆಯಾಗಿದೆ.

ಹೀಗೆ ಆಡಳಿತ ಸಾಗಿದೆ. ಅದರ ಜೊತೆಯಲ್ಲಿಯೇ ಭ್ರಷ್ಟಾಚಾರವೂ ಸಾಗಿದೆ. ಲಂಚ ನೀಡುವ ಕೈಗಳು ಅದೇ ಗಣಿಮಾಫಿಯ, ಭೂಮಾಫಿಯಾ, ಕೈಗಾರಿಕೆಗಳ ಮಾಲೀಕರು, ಮದ್ಯದ ದೊರೆಗಳು, ಕಂಟ್ರಾಕ್ಟರುಗಳು ಹೀಗೆ ಅದೇ ಹಿಂದಿನ ಕೈಗಳೇ ಆದರೂ ಲಂಚ ಸ್ವೀಕರಿಸುವ ಕೈಗಳು ಬದಲಾಗಿವೆ. ಲಂಚದ ಪ್ರಮಾಣ ಬದಲಾಗಿದೆಯೇ? ಗೊತ್ತಿಲ್ಲ. ಬಹಳ ಜನಕ್ಕೆ ಈ ವಹಿವಾಟುಗಳ ರೂಪ, ರೀತಿ ತಿಳಿಯುತ್ತಿಲ್ಲ. ಅದೇ ಮುಖ್ಯವಾದ ಬದಲಾವಣೆಯಾಗಿದೆ.

**ಪ್ರಜಾಪ್ರಭುತ್ವವಿಲ್ಲದೆ ಪ್ರಜಾಪ್ರಭುತ್ವ ವ್ಯವಸ್ಥೆಯ ಆಡಳಿತ**

ಹೀಗೆ ವಿಧಾನಸಭೆಯಿಲ್ಲದೆ, ಅಧಿವೇಶನಗಳಿಲ್ಲದೆ, ಪ್ರಶ್ನೆ ಚರ್ಚೆ, ಸಭಾತ್ಯಾಗಗಳು ವಿಧಾನಸಭೆಯ ಉಪಸಮಿತಿಗಳು, ಅವುಗಳ ವರದಿಗಳು, ಮಂತ್ರಿಗಳು, ಮಂತ್ರಿಮಂಡಲ, ಅವರ ಮಾರ್ಗದರ್ಶನ, ನಿರ್ದೇಶನಗಳು ಜಿಲ್ಲಾ ಉಸ್ತುವಾರಿ ಮಂತ್ರಿಗಳು, ಶಾಸಕರು ಅವರ ಪಾತ್ರ ಯಾವುದೂ ಇಲ್ಲದೆ ಆಡಳಿತ ನಡೆಯುತ್ತದೆ, ನಡೆಯಬಹುದು ಎಂಬುದನ್ನು ಜನ ನೋಡುವಂತಾಗಿದೆ. ಪೂರ್ಣ ಪ್ರಮಾಣದ ಬಜೆಟ್ಟನ್ನು ಕೂಡ ತಯಾರಿಸಲಾಗುವುದಂತೆ. ಹೀಗಾಗಿ ಕರ್ನಾಟಕ ರಾಜ್ಯದ ಅಭಿವೃದ್ಧಿಗೆ ಬೇಕಾದ ವಾರ್ಷಿಕ ಯೋಜನೆ, 30ರಿಂದ 40,000 ಕೋಟಿ ರೂ ವೆಚ್ಚ ಮಾಡುವ ಅಂದಾಜುಗಳನ್ನೆಲ್ಲಾ ರಾಜ್ಯಪಾಲರು, ಅಧಿಕಾರಿಗಳೇ ಮಾಡುತ್ತಿದ್ದಾರೆ.

ಕ್ಷೇತ್ರ ಪುನರ್ವಿಂಗಡಣೆಗಾಗಿ ಚುನಾವಣೆಗಳು ಮುಂದೆ ಹೋಗುವ ಸಂಭವ ಇರುವ ಸನ್ನಿವೇಶದಲ್ಲಿ ರಾಷ್ಟ್ರಪತಿಗಳ ಆಳ್ವಿಕೆಯ ಅವಧಿಯೂ ವಿಸ್ತಾರವಾಗುವ ಸಂಭವವಿದೆ. ಈ ಹಿನ್ನೆಲೆಯಲ್ಲಿ ಶಾಸನ ಸಭೆಯಲ್ಲಿ ಮಂತ್ರಿಮಂಡಳದ ಯಾವ ಗೊಡವೆಯೂ ಇಲ್ಲದೇ ಒಂದು ವರ್ಷ ಆಡಳಿತ ನಡೆಯುವ ಸಂಭವವಿದೆ. ಅದರಲ್ಲಿ ಒಂದೆರಡು ಔಪಚಾರಿಕ ಸಂಗತಿಗಳು ಮಾತ್ರ ಬಜೆಟ್‌ನ ಅಂಗೀಕಾರ, ಯಾವುದಾದರೂ ಕಾನೂನುಗಳನ್ನು ತುರ್ತಾಗಿ ಜಾರಿ ಮಾಡಬೇಕೆಂದರೆ ಅವುಗಳ ವಿಷಯದಲ್ಲಿ ಲೋಕಸಭೆಯಲ್ಲಿ ಅಂಗೀಕಾರ ಪಡೆಯಬೇಕಾಗುತ್ತದೆ. ಒಂದು ವರ್ಷ ಹೀಗೆ ಅಧಿಕಾರಶಾಹಿ ಆಡಳಿತ ನಡೆಯಬಹುದಾದರೆ ಹೀಗೆಯೇ ಐದು ವರ್ಷವೂ ಏಕೆ ನಡೆಯಬಾರದು, ಎಲ್ಲ ಕಾಲವೂ ಏಕೆ ನಡೆಯಬಾರದು ಎನ್ನುವ ಭಾವನೆ ಅನೇಕರಿಗೆ ಬಂದರೆ ಆಶ್ಚರ್ಯವಿಲ್ಲ. ಅಂತಹ ಭಾವನೆಗಳು ಈಗಾಗಲೇ ಸಮಾಜದಲ್ಲಿ ಕೆಲವು ವರ್ಗಗಳಲ್ಲಿವೆ. ವಿಧಾನಸಭೆ, ಮಂತ್ರಿಮಂಡಲ ಅಸ್ತಿತ್ವದಲ್ಲಿದ್ದಾಗ ಕೂಡ ನಿಜವಾಗಿ ಆಡಳಿತ ಮಾಡುವವರು ಯಾರು? ಅಧಿಕಾರಿಗಳೇ ಅಲ್ಲವೇ? ಎಂಬ ಪ್ರಶ್ನೆಯನ್ನೂ ಎತ್ತುತ್ತಾರೆ. ಮಂತ್ರಿಗಳಿಗೆ, ಮಂತ್ರಿಮಂಡಲಕ್ಕೆ ಎಲ್ಲವನ್ನೂ ತಯಾರು ಮಾಡಿಕೊಡುವವರು ಅಧಿಕಾರಿಗಳು. ಎಲ್ಲಾ ಕಾನೂನುಗಳನ್ನು ತಯಾರು ಮಾಡುವವರು ಬಜೆಟ್ ಅನ್ನು ಯೋಜನೆಯನ್ನು ತಯಾರು ಮಾಡುವವರು ಅಧಿಕಾರಿಗಳು ಆಜ್ಞೆ ಆದೇಶಗಳನ್ನು ತಯಾರು ಮಾಡುವವರು ಅಧಿಕಾರಿಗಳು. ಅಧಿಕಾರಿ ತೋರಿಸಿದ ಕಡೆ ರುಜು ಒತ್ತುವುದಷ್ಟೇ ಮಂತ್ರಿಗಳ ಮಂತ್ರಿಮಂಡಲದ ಕೆಲಸ. ಅದರಲ್ಲಿಯೂ ಆರು ತಿಂಗಳಿಗೊಮ್ಮೆ, ವರ್ಷಕ್ಕೊಮ್ಮೆ ಮಂತ್ರಿಗಳ ಖಾತೆ ಬದಲಾಗುತ್ತಿದ್ದರೆ, ಮಂತ್ರಿಗಳೇ ಬದಲಾಗುತ್ತಿದ್ದಾರೆ. ಅವರಿಗೆ ತಮ್ಮ ಇಲಾಖೆಯ ವಸ್ತುಸ್ಥಿತಿ, ರಾಜ್ಯದ ವಸ್ತುಸ್ಥಿತಿ ಹೇಗೆ ತ್ಳಿಳಿದೀತು? ಆಗ ಪೂರ್ಣವಾಗಿ ಅಧಿಕಾರಿಗಳ ಮೇಲೆಯೇ ಅವಲಂಬಿಸಿ ಕೆಲಸ ಮಾಡುತ್ತಾರಲ್ಲ. ಹೀಗಿರುವಾಗ ಮಂತ್ರಿ ಮಾನ್ಯರುಗಳು, ಶಾಸಕರು, ಅವರ ಕಚ್ಚಾಟ, ಭ್ರಷ್ಟಾಚಾರಗಳಿಲ್ಲದೆ ಅಧಿಕಾರಿಗಳೇ ಆಡಳಿತವನ್ನು ನಡೆಸಿದರೆ ತಪ್ಪೇನು.



ಕೃಪೆ: ಕನ್ನಡಪ್ರಭ

ಜನಗಳಲ್ಲಿ ಅತೃಪ್ತಿ ಹೆಚ್ಚಿದಂತೆ, ಆ ಅತೃಪ್ತಿಯನ್ನು ಚುನಾವಣೆಗಳಲ್ಲಿ ಮತ ಚಲಾಯಿಸುವ ಮೂಲಕ ವ್ಯಕ್ತಪಡಿಸಿ ಆಳುವ ವರ್ಗಗಳ ಬಂಡವಾಳಶಾಹಿ ಭೂಮಾಲಕ ವರ್ಗಗಳ ರಾಜಕೀಯ ಪಕ್ಷಗಳನ್ನು ಮಣ್ಣುಮುಕ್ಕಿಸುವ ಸಂದರ್ಭಗಳು ಹೆಚ್ಚಾದಂತೆ ಚುನಾವಣೆಗಳು ಏಕೆ ಬೇಕು? ಚುನಾವಣೆಗಳ ಮೂಲಕ ವ್ಯಕ್ತಪಡುವ ಜನಗಳ ಅಭಿಪ್ರಾಯವನ್ನೇ ಬುಡಮೇಲಾಗಿಸುವುದು ಹೇಗೆಂಬ ಯೋಚನೆ ಈ ಆಳುವ ವರ್ಗಗಳಿಗೆ



ಜನ ಆಹವಾಲು ಸಲ್ಲಿಸಲು ಇಲ್ಲಿಗೆ ಬರಬೇಕೇ?

ಈ ಚುನಾವಣೆಗಳು. ಅದಕ್ಕಾಗಿ ವ್ಯರ್ಥ ಖರ್ಚು ಗ್ರಾಮಮಟ್ಟದಿಂದ ಮೇಲಿನವರೆಗೆ ಗುಂಪುಗಾರಿಕೆ ಜಗಳಗಳು ಮಿತಿ ಮೀರಿದ ಭ್ರಷ್ಟಾಚಾರ ಇವೆಲ್ಲಾ ಏಕೆ ಬೇಕು ಎನ್ನುವ ವಾದಗಳೂ ಇವೆ.

ಹೀಗೆ ಒಂದು ರಾಜ್ಯದಲ್ಲಿ ಮಾತ್ರವಲ್ಲ, ಭಾರತದ ಎಲ್ಲಾ ರಾಜ್ಯಗಳಲ್ಲಿಯೂ ರಾಷ್ಟ್ರಪತಿಗಳ ಆಡಳಿತವೇ ನಡೆಯಬಹುದಲ್ಲ, ಕೊನೆಗೆ ಲೋಕಸಭೆ ಸಂಸತ್ತು ಕೂಡ ಏಕೆ ಬೇಕು. ಇಡೀ ಭಾರತದಲ್ಲಿಯೇ ರಾಷ್ಟ್ರಪತಿಗಳ ಆಡಳಿತ ನಡೆಯಬಹುದಲ್ಲ. ಹೀಗೆ ಈ ವಾದವನ್ನು ವಿಸ್ತರಿಸಬಹುದು.

ಈ ಚುನಾವಣೆಗಳು, ಜನಗಳನ್ನು ತೃಪ್ತಿಪಡಿಸುವುದು, ಅದಕ್ಕಾಗಿ ಪೊಳ್ಳು, ಸುಳ್ಳು, ಅರೆಸತ್ಯಗಳ ಘೋಷಣೆಗಳನ್ನು ಮಾಡುವುದು, ಅವರನ್ನು ತೃಪ್ತಿಪಡುಸುವುದಕ್ಕಾಗಿ ರಾಜ್ಯಗಳ, ದೇಶದ ಆದಾಯದ ದೊಡ್ಡ ಭಾಗವನ್ನು ವ್ಯಯ ಮಾಡುವುದು, ರಾಜಕಾರಣಿಗಳ ದೊಂಬರಾಟವನ್ನು ಸಹಿಸುವುದು ಅವರ ಬೇಕು ಬೇಡಗಳನ್ನು ಸಲ್ಲಿಸುವುದು ಇವು ಯಾವೂ ಇಲ್ಲದೆ ಆಡಳಿತ ನಡೆಯುತ್ತದಲ್ಲ ಎನ್ನುತ್ತಾರೆ ಇಂತಹ ವಾದಗಳನ್ನು ಮಂಡಿಸುವವರು.

## ವರ್ಗ ಹಿತಾಸಕ್ತಿ - ಪ್ರಭುತ್ವದ ನಿಜ ಮುಖ!


ಈ ಮೇಲಿನ ವಾದಗಳು ಮಧ್ಯಮ ವರ್ಗದ, ಬುದ್ಧಿ ಜೀವಿ ವರ್ಗದ ವಾದಗಳೆಂದು ಹೊರ ತೋರಿಕೆಗೆ ಕಂಡರೂ ಇದರ ಹಿಂದಿರುವುದು ಆಳುವ ವರ್ಗಗಳ, ಆಸ್ತಿ ಸಂಪತ್ತಿನ ಸ್ವಾಮ್ಯವನ್ನಾಳುವ ವರ್ಗ, ಕೈಗಾರಿಕಾ ಉತ್ಪಾದನೆ, ಮಾರುಕಟ್ಟೆಗಾಗಿ ಕೃಷಿ ಉತ್ಪಾದನೆ ಎಂಬ ಪರಿಸ್ಥಿತಿಯಲ್ಲಿ ಅದರ ಮೇಲೆ ಹಿಡಿತವನ್ನುಳ್ಳ ಬಂಡವಾಳಶಾಹಿ ವರ್ಗ. ಏಕೆಂದರೆ ರಾಜಕೀಯ ಪಕ್ಷಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವುದಕ್ಕಿಂತ ಸುಲಭವಾಗಿ ಅಧಿಕಾರಿವರ್ಗಕ್ಕೆ ಉಣ್ಣಿಸಿ, ತಿನ್ನಿಸಿ, ಸೊಕ್ಕಿಸಿ ತಮ್ಮ ಕೆಲಸಗಳನ್ನು ಆರಾಮವಾಗಿ ಮಾಡಿಕೊಳ್ಳಬಹುದು ಎಂಬ ಯೋಚನೆ.

ಜನಗಳಲ್ಲಿ ಅತೃಪ್ತಿ ಹೆಚ್ಚಿದಂತೆ, ಆ ಅತೃಪ್ತಿಯನ್ನು ಚುನಾವಣೆಗಳಲ್ಲಿ ಮತ ಚಲಾಯಿಸುವ ಮೂಲಕ ವ್ಯಕ್ತಪಡಿಸಿ ಆಳುವ ವರ್ಗಗಳ ಬಂಡವಾಳಶಾಹಿ ಭೂಮಾಲಕ ವರ್ಗಗಳ ರಾಜಕೀಯ ಪಕ್ಷಗಳನ್ನು ಮಣ್ಣುಮುಕ್ಕಿಸುವ ಸಂದರ್ಭಗಳು ಹೆಚ್ಚಾದಂತೆ ಚುನಾವಣೆಗಳು ಏಕೆ ಬೇಕು? ಚುನಾವಣೆಗಳ ಮೂಲಕ ವ್ಯಕ್ತಪಡುವ ಜನಗಳ ಅಭಿಪ್ರಾಯವನ್ನೇ ಬುಡಮೇಲಾಗಿಸುವುದು ಹೇಗೆಂಬ ಯೋಚನೆ ಈ ಆಳುವ ವರ್ಗಗಳಿಗೆ ಬಂಡವಾಳಶಾಹಿವರ್ಗವು ಪ್ರಜಾಪ್ರಭುತ್ವ ವೆಂಬ ವ್ಯವಸ್ಥೆಯನ್ನು ತನ್ನ ಹಿಡಿತ ದಲ್ಲಿಟ್ಟುಕೊಳ್ಳಲು ಗ್ರಾಮಮಟ್ಟದಿಂದ ರಾಷ್ಟ್ರ ಮಟ್ಟದವರೆಗೂ ಆಡಳಿತ ಯಂತ್ರವನ್ನು ಅಧಿಕಾರಶಾಹಿಯ ಕೈಯಲ್ಲಿಟ್ಟಿದೆ. ಚುನಾವಣೆಗಳು ಎಂಬುದು ಕೇವಲ ತೋರಿಕೆಯ ಹೊರಕವಚ, ಆಕರ್ಷಕವಾದ ಪ್ಯಾಕೇಜ್. ಅದರೊಳಗೆ ಆಳ್ವಿಕೆಯನ್ನು ಅಥವಾ ದಬ್ಬಾಳಿಕೆಯನ್ನು ನಡೆಸುತ್ತಿರುವುದು ಅಧಿಕಾರಶಾಹಿ ಪೊಲೀಸ್, ಸೈನ್ಯ, ನ್ಯಾಯಾಂಗ, ಕಾರ್ಯಾಂಗ ಗಳನ್ನೊಳಗೊಂಡ ಅಧಿಕಾರಶಾಹಿ ಪ್ರಜಾಪ್ರಭುತ್ವವೆಂಬ ಹೊರಕವಚ, ಅಧಿಕಾರಶಾಹಿ ಎಂಬ ಒಳರಚನೆ. ನಮ್ಮ ದೇಶದಲ್ಲಿ 4 ದಶಕಗಳಿಗೂ ಹೆಚ್ಚು ಕಾಲ ಸರಿಯಾದ ಪಂಚಾಯತ್ ರಾಜ್ಯ ವ್ಯವಸ್ಥೆಯೇ ಇಲ್ಲದೆ, ಇದ್ದು ವ್ಯವಸ್ಥೆಗೆ ಅಧಿಕಾರವೇ ಇಲ್ಲದೆ, ದಶಕಗಳ ಚುನಾವಣೆಯೇ ನಡೆಯದೇ ಗ್ರಾಮ, ತಾಲ್ಲೂಕು ಜಿಲ್ಲಾ ಮಟ್ಟಗಳ ಆಡಳಿತ ನಡೆಯಲಿಲ್ಲವೇ? ಹಾಗೆಯೇ ಕೇಂದ್ರದಲ್ಲಿ ಅಧಿಕಾರ ಹಿಡಿದ ಆಳುವ ವರ್ಗಗಳು ತಮಗೆ ಬೇಡವೆನಿಸಿದ ಪಕ್ಷಗಳು ಅದರಲ್ಲಿಯೂ ಪ್ರಾದೇಶಿಕ ಪಕ್ಷಗಳು, ಎಡಪಕ್ಷಗಳು, ಕಮ್ಯೂನಿಸ್ಟ್ ಪಕ್ಷಗಳ ರಾಜ್ಯ ಸರ್ಕಾರಗಳನ್ನು ಮನಬಂದಂತೆ ವಜಾ ಮಾಡಲಿಲ್ಲವೇ? ಜನರು ಬಯಸಿದ ನೀತಿಗಳನ್ನು ಜಾರಿ ಮಾಡುವುದನ್ನು ತಡೆಯಲಿಲ್ಲವೇ? ನಮ್ಮ ದೇಶದ ಕೆಲವು ರಾಷ್ಟ್ರಪತಿಗಳು ಕೇಂದ್ರ ಸರ್ಕಾರವನ್ನು ಕೂಡ ವಜಾ ಮಾಡಲು, ಆಡಳಿತವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಲಿಲ್ಲವೇ?

ಹೀಗೆ ಕರ್ನಾಟಕದಲ್ಲಿರುವ ರಾಷ್ಟ್ರಪತಿಗಳ ಆಡಳಿತ ನಮ್ಮ ದೇಶದ ಪ್ರಜಾಪ್ರಭುತ್ವವನ್ನು, ಅದರ ನಿಜ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲು ಕನ್ನಡಿ ಹಿಡಿಯುತ್ತದೆ. ಪ್ರಪಂಚದ ಅನೇಕ ದೇಶಗಳಲ್ಲಿ ಆಡಳಿತ ಮಾಡುತ್ತಿರುವ, ಮಾಡಿದ ಮಿಲಿಟರಿ ಸರ್ವಾಧಿಕಾರಗಳು, ಮಿಲಿಟರಿಯಲ್ಲದ ಆದರೆ ಚುನಾವಣೆಗಳನ್ನು ವಿಕೃತಗೊಳಿಸಿ (ಇತ್ತೀಚೆಗೆ ಇರಾಕ್‌ನಲ್ಲಿ ಆದಂತೆ) ರಚಿಸಿದ ಸರ್ವಾಧಿಕಾರಗಳು, ರಾಜಕೀಯ ಪಕ್ಷಗಳ ನಾಯಕರ ಭ್ರಷ್ಟಾಚಾರವನ್ನೇ ಆಯುಧವಾಗಿ ಬಳಸಿಕೊಂಡು ಪ್ರಜಾಪ್ರಭುತ್ವವನ್ನು ವಜಾ ಮಾಡಿದ ಸರ್ಕಾರಗಳು (ಇತ್ತೀಚೆಗೆ ಬಾಂಗ್ಲಾದೇಶ, ಪಾಕಿಸ್ತಾನಗಳಲ್ಲಿನ ಉದಾಹರಣೆಗಳು) ಮೂರನೇ ಜಗತ್ತಿನಲ್ಲಿ ಜನರ ಬದುಕನ್ನು ಕಂಗೆಡಿಸಿವೆ. ನಿರ್ದಯ ದಮನವನ್ನು ನಡೆಸಿವೆ. ಪ್ರಜಾಪ್ರಭುತ್ವದ ನಿಜ ಸ್ವರೂಪವನ್ನು ಇನ್ನಷ್ಟು ಚೆನ್ನಾಗಿ, ಆಳವಾಗಿ ಅರ್ಥ ಮಾಡಿಕೊಳ್ಳಲು ಚಿಂತಿಸಲು ಕರ್ನಾಟಕದಲ್ಲಿ ನಾವು ಕಂಡ ರಾಜಕೀಯ ಬಿಕ್ಕಟ್ಟು ಹಾಗೂ ರಾಷ್ಟ್ರಪತಿಗಳ ಆಡಳಿತ ಸಹಾಯ ಮಾಡಲಿ. ಇದೇ ದಿಸೆಯಲ್ಲಿ ಅದಕ್ಕೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ನಮ್ಮ ಚಿಂತನೆಗಳು ಹರಿಯಬೇಕಾಗಿದೆ.

## ಲಾಲ್‌ಸಲಾಂ ಕಾಮ್ರೇಡ್ ಫಿಡೆಲ್!

ಫಿಡೆಲ್ ಕ್ಯಾಸ್ಟ್ರೊ ತಮ್ಮ ಅಧ್ಯಕ್ಷ ಪದವಿ ಬಿಟ್ಟು ಕೊಡುವ ನಿರ್ಧಾರ ಮಾಡಿದ್ದಾರೆ. ಇತ್ತೀಚೆಗೆ ಪ್ರಮುಖ ಶಸ್ತ್ರಚಿಕಿತ್ಸೆ ನಡೆದು ವಿಶ್ರಾಂತಿ ಪಡೆಯುತ್ತಿರುವ ಕ್ಯಾಸ್ಟ್ರೊ ಈಗಾಗಲೇ ತಮ್ಮ ಎಲ್ಲಾ ಸರ್ಕಾರದ ಜವಾಬ್ದಾರಿಗಳನ್ನು ಇತರರಿಗೆ ವಹಿಸಿಕೊಟ್ಟಿದ್ದಾರೆ. ಮುಂಬರುವ ಅಧ್ಯಕ್ಷೀಯ ಚುನಾವಣೆಯಲ್ಲಿ ತಾವು ಅಭ್ಯರ್ಥಿ ಆಗಿರುವುದಿಲ್ಲ ಎಂದಿದ್ದಾರೆ. ಈ ನಿರ್ಧಾರದಿಂದ ಕ್ಯೂಬಾ ಮತ್ತು ಜಗತ್ತಿನ ಕಮ್ಯುನಿಸ್ಟ್ ಚರಿತ್ರೆಯಲ್ಲಿ ಒಂದು ಸುವರ್ಣ ಅಧ್ಯಾಯ ಮುಗಿದಂತಾಗಿದೆ.



1959ರ ಕ್ಯೂಬಾದ ಕ್ರಾಂತಿಯ ಅಪ್ರತಿಮ ನೇತಾರನಾಗಿ ದೇಶದ ಮುಖ್ಯಸ್ಥನಾಗಿ ಅಧಿಕಾರ ವಹಿಸಿಕೊಂಡ' ಕ್ಯಾಸ್ಟ್ರೊ ಅದನ್ನು ಸುಮಾರು 50 ವರ್ಷಗಳ ಕಾಲ ಸಮರ್ಥವಾಗಿ ಇಡೀ ಜಗತ್ತೇ ತಲೆದೂಗುವಂತೆ ನಿರ್ವಹಿಸಿದರು. ಸೂಪರ್ ಪವರ್ ಅಮೆರಿಕದ ತಟದಿಂದ ಕೇವಲ 90 ಮೈಲು ದೂರ ಇರುವ ಈ ಪುಟ್ಟ ದೇಶ 50 ವರ್ಷಗಳ ಕಾಲ ಕ್ರೂರ ಆರ್ಥಿಕ-ಮಿಲಿಟರಿ ದಿಗ್ಬಂಧನ ತಾಳಿಕೊಂಡು' ಬಾಳಿತು. ಎರಡು ನೇರ ಸಿ.ಐ.ಎ. ದಾಳಿ ಮತ್ತು ಅಣ್ವಸ್ತ್ರ ಕ್ಷಿಪಣಿ ಬಿಕ್ಕಟ್ಟು ಎದುರಿಸಿತು. ಮಾತ್ರವಲ್ಲ ಸಾರ್ವತ್ರಿಕ ಶಿಕ್ಷಣ ಮತ್ತು ವೈದ್ಯಕೀಯ ಸೇವೆಯಲ್ಲಿ ಅಪ್ರತಿಮ ಸಾಧನೆಗಳನ್ನು ಮಾಡಿತು. ಮಾನವ ಅಭಿವೃದ್ಧಿ ಸೂಚಕಗಳಲ್ಲಿ ಹಲವು ಅಭಿವೃದ್ಧಿ ಹೊಂದಿದ ದೇಶಗಳನ್ನು ಹಿಂದೆ ಹಾಕಿತು.

ಇವೆಲ್ಲದರಲ್ಲಿ ಕ್ಯಾಸ್ಟ್ರೊರ ಮಹತ್ವದ ಪಾತ್ರದ ಬಗ್ಗೆ ಅನುಮಾನವೇ ಇಲ್ಲ. ಅಮೆರಿಕದ ಒಂಬತ್ತು ಅಧ್ಯಕ್ಷರುಗಳನ್ನು ಎದುರಿಸಿದ ಮತ್ತು 20 ನೇ ಶತಮಾನದ ಹಲವು ಹಿರಿಯ ನಾಯಕರ ಜತೆ ಕೆಲಸ ಮಾಡಿದ ಹೆಗ್ಗಳಿಕೆ ಅವರದ್ದು. 50 ವರ್ಷಗಳಷ್ಟು ದೀರ್ಘ ಕಾಲ ಅತ್ಯಂತ ಜನಪ್ರಿಯ ನಾಯಕರಾಗಿದ್ದು, ಅಧಿಕಾರದಲ್ಲಿ ಇರುವಾಗಲೂ ಬಿಡುವಾಗಲೂ ಯಾವುದೇ ವಿವಾದಕ್ಕೆ ಗುರಿಯಾಗದೆ ಇರುವುದಕ್ಕೂ ಸಾಟಿಯಾದ ಬೇರೆ ಉದಾಹರಣೆಗಳು ಇಲ್ಲ. ಕ್ಯಾಸ್ಟ್ರೊ ಕ್ಯೂಬಾ ಮಾತ್ರವಲ್ಲ, ಜಗತ್ತಿನ ಜನತೆಯ ಕಮ್ಯುನಿಸ್ಟ್ ಚಳುವಳಿಯ ಅಪ್ರತಿಮ ನಾಯಕರಾಗಿದ್ದರು. ಅರವತ್ತರ ದಶಕದಲ್ಲೇ ಲ್ಯಾಟೀನ್ ಅಮೆರಿಕದ ಎಲ್ಲೆಡೆ ಕ್ರಾಂತಿ ಪಸರಿಸಲು ಅವರ ನಿಕಟ ಸಹವರ್ತಿ ಚೆ ಗವೆರಾ ತಮ್ಮ ಬಲಿದಾನ ಮಾಡಿದ್ದರು. ಎಪ್ಪತ್ತರ ದಶಕದಲ್ಲಿ ಆಫ್ರಿಕಾದ ಅಂಗೋಲಾ, ಜಿಂಬಾಬ್ವೆ ಮುಂತಾದ ದೇಶಗಳ ಸಶಸ್ತ್ರ ರಾಷ್ಟ್ರೀಯ ವಿಮೋಚನಾ ಹೋರಾಟದಲ್ಲಿ ಕೈಗೂಡಿಸಲು ಕ್ಯೂಬನ್ ಸೈನಿಕರನ್ನೂ, ವೈದ್ಯರನ್ನು ಕಳಿಸಿದ ವಿಶಿಷ್ಟ ನಾಯಕ.

ಬರಿಯ ಬಾಯ್ಮಾತಿನ ಸೌಹಾರ್ದತೆ, ಧನ ಸಹಾಯಕ್ಕೆ ಸೀಮಿತವಾಗದೆ ಕಾರ್ಯಾಚರಣೆಗೆ ಇಳಿದವರು.

ಎಂಬತ್ತರ-ತೊಂಬತ್ತರ ದಶಕದಲ್ಲಿ ಲ್ಯಾಟೀನ್ ಅಮೆರಿಕದ ಜನತಾ ಚಳುವಳಿಯ ನಾಯಕರಿಗೆ ಮಾರ್ಗದರ್ಶನ, ಬೆಂಬಲ ಕೊಡುತ್ತಾ ಬಂದರು. ಲ್ಯಾಟೀನ್ ಅಮೆರಿಕದ ಸಮಸ್ಯೆಗಳ ಪರಿಹಾರಕ್ಕೆ ಹಲವು ಸೂಚನೆಗಳನ್ನು ನೀಡಿದರು. ಈ ದಶಕದಲ್ಲಿ ಲ್ಯಾಟಿನ್ ಅಮೆರಿಕದಲ್ಲಿ ಸರಣಿ ಎಡ ಜಯಭೇರಿ'ಯಲ್ಲಿ ಅವರ ಪಾತ್ರ ದೊಡ್ಡದು. ಲ್ಯಾಟಿನ್ ಅಮೆರಿಕದ ತುಂಬಾ ಕ್ಯೂಬನ್ ವೈದ್ಯರ ನೆರವು ಜಗತ್ ಪ್ರಸಿದ್ಧ. ವೆನೆಜುವೆಲಾ ಅಧ್ಯಕ್ಷ ಚವೇಝ್ ಮತ್ತು ಇತರ ಎಡ ಒಲವಿನ ಅಧ್ಯಕ್ಷರು-ಸರಕಾರಗಳು ಅವರ ಸಲಹೆ-ಸೂಚನೆಗಳಿಗೆ ಕಾಯುತ್ತಾರೆ. ಜಗತ್ತಿನ ಕಮ್ಯುನಿಸ್ಟ್ ಚಳುವಳಿಯಲ್ಲಿ ನಡೆದ ಹಲವು ಸೈದ್ಧಾಂತಿಕ ಚರ್ಚೆಗಳಲ್ಲಿ ಮಹತ್ವದ ಪಾತ್ರ ವಹಿಸಿದ ಕ್ಯಾಸ್ಟ್ರೊರ ಅಭಿಪ್ರಾಯಗಳು ಯಾವಾಗಲೂ ಹೆಚ್ಚಿನ ತೂಕವಿದ್ದವು. ಅರವತ್ತರ ದಶಕದಲ್ಲಿ ಸೋವಿಯೆಟ್ ಒಕ್ಕೂಟ ಮತ್ತು ಚೀನಾದ ಹಲವು ಸೈದ್ಧಾಂತಿಕ ತಪ್ಪುಗಳನ್ನು ನಿಷ್ಠುರವಾಗಿ ಟೀಕೆ ಮಾಡಿದವರು.

ಅಧ್ಯಕ್ಷರಾಗಿ ನಿವೃತ್ತರಾದರೂ ಕ್ರಾಂತಿಕಾರಿಗಳಿಗೆ ನಿವೃತ್ತಿ ಇಲ್ಲ. 'ಗ್ರಾನ್ಮಾ '(ಕ್ಯೂಬಾದ ಕಮ್ಯುನಿಸ್ಟ್ ಪಕ್ಷದ ದೈನಿಕ) ದ ತಮ್ಮ ಕಾಲಂನಲ್ಲಿ ಸಾಮ್ರಾಜ್ಯಶಾಹಿ-ಬಂಡವಾಳಶಾಹಿ ವಿರುದ್ಧ ಹೋರಾಟ, ಜಗತ್ತಿನ ಸುಡುತ್ತಿರುವ ಸಮಸ್ಯೆಗಳ ಬಗ್ಗೆ ಚಿಂತನೆ, ಸಮಾಜವಾದಿ ಚಳುವಳಿಯ ಮುನ್ನಡೆ ಬಗ್ಗೆ ತಮ್ಮ ಯೋಚನೆಗಳನ್ನು ಬರೆಯುವುದರಮೂಲಕ ಇಡೀ ಜಗತ್ತಿನ ಜನತೆಯ ಜತೆ ಸಂವಾದವನ್ನು ಕ್ಯಾಸ್ಟ್ರೊ ಮುಂದುವರೆಸುತ್ತಾರೆ. ಅವರ ಹೋರಾಟ ಲೇಖನಿಯ ಮೂಲಕ ಮುಂದೆ ಸಾಗಲಿದೆ. ಪರಿಸರದ ಸಮಸ್ಯೆಯನ್ನು ಬಡ ಜನತೆ ಮತ್ತು ಮನುಕುಲದ ದೃಷ್ಟಿಯಲ್ಲಿ ನೋಡುವಲ್ಲಿ ಕ್ಯಾಸ್ಟ್ರೊ ವಿಶಿಷ್ಟರಾಗಿದ್ದಾರೆ. ಅವರು ನಮ್ಮ ಜತೆಗೆ ಸದಾ ಇದ್ದು ದಾರಿ ತೋರಿಸಲಿ.

ಲಾಲ್ ಸಲಾಂ ಕಾಮ್ರೇಡ್ ಫಿಡೆಲ್ !

□ ಶರತ್




ಕಳೆದ ತಿಂಗಳು ತಾಲ್ಲೂಕು ಪಂಚಾಯ್ತಿಯ ಮುಂದೆ ಕೆಂಬಾವುಟ ಹಿಡಿದು ಬಂದು 'ಉದ್ಯೋಗ ಕೊಡಿ' ಎಂದು ಪಟ್ಟು ಬಿಡದೇ ಕೇಳಿದವರು, ಈಗ ಕೆರೆಯಲ್ಲಿ, ಕೆನಾಲಿನಲ್ಲಿ ಸಲಿಕೆ ಗುದ್ದಲಿ ಹಿಡಿದು ನೆಲ ಅಗೆಯುತಿರುವವರು, 55 ವಯಸ್ಸಿನ ರತ್ನಮ್ಮ ಗಂಡನ ಪ್ಯಾಂಟು ಮಗನ ಅಂಗಿ ತೊಟ್ಟು ಗಟ್ಟಿಗೊಂಡ ನೆಲವನ್ನು ಕುಟ್ಟಿ ಪುಡಿ ಮಾಡಿ ಕೆಡುವುತಿರುವಳು. ಹಲ್ಲಿಲ್ಲದ ಇಸ್ಮಾಯಿಲ್ ಸಾಬ ಹರೆಯದ ಯುವಕರು, ನಾಚುವಂತೆ ಮಣ್ಣಿನ ಬುಟ್ಟಿಗೆ ಚಲನೆ ಕಲಿಸಿರುವನು. ಅರವತ್ತಕ್ಕೂ ಹೆಚ್ಚು ವಯಸ್ಸಿನ ಶೋಭಮ್ಮ ಮುಳ್ಳಿನ ಗಿಡದ ಮಗ್ಗಲು ಮುರಿದು ನೆಲ ಹಸನುಗೊಳಿಸುತಿರುವಳು.

# ಚಂದ್ರನ ತಲೆಗೆ ಕೆಂಬಾವುಟ ಹಾರಾಡಿದಂತೆ

ನಿನ್ನೆ ಇಡೀ ದಿನ ಹುಮನಾಬಾದ್ ತಾಲ್ಲೂಕಿನ 5-6 ಹಳ್ಳಿಗಳನ್ನು ಸುತ್ತಾಡಿದ್ದೇನೆ. ಹಸುಗೂಸನ್ನು ಕಂಕುಳಲಿಟ್ಟುಕೊಂಡಂತೆ ಒಂದು ಕ್ಯಾಮರಾವನ್ನು ಹಿಡಿದು ಕಾಲಿಗೆ ಗೆಜ್ಜೆ ಕಟ್ಟಿದಂತೆ ಉಲ್ಲಾಸದಿಂದ ಓಡಾಡಿದ್ದೇನೆ. ಕಳೆದ ತಿಂಗಳು ತಾಲ್ಲೂಕು ಪಂಚಾಯ್ತಿಯ ಮುಂದೆ ಕೆಂಬಾವುಟ ಹಿಡಿದು ಬಂದು 'ಉದ್ಯೋಗ ಕೊಡಿ' ಎಂದು ಪಟ್ಟು ಬಿಡದೇ ಕೇಳಿದವರು, ಈಗ ಕೆರೆಯಲ್ಲಿ, ಕೆನಾಲಿನಲ್ಲಿ ಸಲಿಕೆ ಗುದ್ದಲಿ ಹಿಡಿದು ನೆಲ ಅಗೆಯುತಿರುವವರು, 55 ವಯಸ್ಸಿನ ರತ್ನಮ್ಮ ಗಂಡನ ಪ್ಯಾಂಟು ಮಗನ ಅಂಗಿ ತೊಟ್ಟು ಗಟ್ಟಿಗೊಂಡ ನೆಲವನ್ನು ಕುಟ್ಟಿ ಪುಡಿ ಮಾಡಿ ಕೆಡುವುತಿರುವಳು. ಹಲ್ಲಿಲ್ಲದ ಇಸ್ಮಾಯಿಲ್ ಸಾಬ ಹರೆಯದ ಯುವಕರು, ನಾಚುವಂತೆ ಮಣ್ಣಿನ ಬುಟ್ಟಿಗೆ ಚಲನೆ ಕಲಿಸಿರುವನು. ಅರವತ್ತಕ್ಕೂ ಹೆಚ್ಚು ವಯಸ್ಸಿನ ಶೋಭಮ್ಮ ಮುಳ್ಳಿನ ಗಿಡದ ಮಗ್ಗಲು ಮುರಿದು ನೆಲ ಹಸನುಗೊಳಿಸುತಿರುವಳು.

"ಚಂದ್ರಮ್ಮಕ್ಕ ಈ ಗುದ್ದಲಿ ನಿಂಗ ಭಾರ ಆಗಾದಿಲ್ಲೇನು? ನಿನ್ ಕೈಗಿ ಸರಳ ಬರಂಗ ಇನಾ ಜರಾ ಬ್ಯಾರೆ ನಮುನಾದಾಗ ಇರಬೇಕನಸ್ತದೇನು?" ನಾನು ಗುದ್ದಲಿ ಎತ್ತಿ ನೆಲಕ್ಕೊಂದು ಅಗೆ ಕೊಟ್ಟು ಕೇಳಿದೆ. ಚಂದ್ರಮ್ಮಕ್ಕ ಸಪೂರ ಕಾಯದ ಕರಿ ಮೈಯ ಹೆಂಗಸು "ಬಿಡ್ರೀ ಬಾಯರೊ ಅಗಿಯ ಕೆಲಸ ನಿಮಗ ಹ್ಯಾಂಗ ಬಂದಾತು..." ಅಂತ ನಗುತ ಹೇಳಿದಳು. "ಇದರ್‌ಕಿನಾ ಚೆಂದನದು ಸಿಕ್ರ ಸಿಗಲಿ ಇಲ್ಲಾಂದರ್ರೂ ಇದೇ ಗುದ್ದಲಿಯಿಂದ ಕೆಲಸ ಮಾಡ್ತೀವಿ" ಹೇಳುತ್ತಲೇ ನೆಲ ಅಗೆಯ ತೊಡಗಿದಳು. ಮೂರು ಹಾಲ್ಗೆನ್ನೆಯ ಹಸುಗೂಸುಗಳು ಮರದ ನೆರಳಲ್ಲಿ ಕೇಕೆ ಹಾಕುತ್ತ ನಗುತ್ತಿದ್ದವು. ಅಲ್ಲೊಂದು ತುಂಬು ವಯಸ್ಸಿನ ಅಜ್ಜಿ ಮಕ್ಕಳನ್ನು ಕಾಯುತ್ತಿದ್ದಳು. "ಪಗಾರ ಒಂದು ಜಲ್ದಿ ಮಾಡಲಾಕ ಹೇಳ್ರೀ. ಹಳ್ಳ್ಯಾಗ ಉದ್ರಿ ಕುಡಾದಿಲ್ಲ. ಮನಿ ನಡಸಾದು ಭಾಳ ಕಷ್ಟ ಆಗ್ಯಾದ. ಸಾಲ ಮಾಡಿ ಬಡ್ಡಿ ಯಾರ ಕಟ್ಟಬೇಕು?" ಗಂಡ ಇಲ್ಲದ ಶರಣಮ್ಮಕ್ಕ ಮೂರು ಮಕ್ಕಳನು ಶಾಲೆಗೆ ಕಳಿಸಿ ತಾನೊಬ್ಬಳೇ ದುಡಿದು ಮನೆ ನಡೆಸುತ್ತಾಳೆ. "ನಾವು ಹೇಳಿದ ಮ್ಯಾಲನೂ ಪಗಾರ ಕೊಟ್ಟಿಲ್ಲ ಅಂದ್ರ ಏನ್ ಮಾಡಬೇಕು ಶಾಣಮಕ್ಕ...." ನಾನು ಕ್ಯಾಮೆರಾದ ತಲೆಯ ಬಟನ್ನು ಒತ್ತಿ, ಕ್ಲಿಕ್ಕಿಸುತ ಕೇಳಿದೆ" ಸಂಘದ ಝೇಂಡಾ ಅದಾ ಅಲ್ರಿ. ತಗೊಂಡು ಹೋಗಿ ಜಕ್ಕಿಸಿ ಕೇಳಾಣ... ನೀವು ಹೂ ಅನ್ರೀ, ನಿನ್ನ ಪಗಾರ ಆಗಾಲ್ಲಾಂದ್ರ ಏನ್ ಮಾಡ್ತಿ ಅಂತ ಆಫೀಸರಗ ಹಿಡದು ಕೇಳ್ತೀವಿ... ಕೊಟ್ಟಿಲ್ಲಾಂದ್ರ ಜಡದು ಕೀಲಿ ಹಾಕಾಣ..." ಶಾಣಮ್ಮಕ್ಕ ಬಲು ಹೆಮ್ಮೆಯಿಂದ ಹೇಳುವಾಗ ಅವಳ ದನಿಯಲ್ಲಿ ಹೋರಾಟದಿಂದ ಮಾತ್ರ ಹಕ್ಕು ಪಡೆಯಬಹುದು ಎಂಬ ಅದಮ್ಯ ನಂಬಿಕೆ ಢಾಳಾಗಿತ್ತು.

ಜೊತೆ ಬಂದ ಸಂಗಾತಿಗಳಾದ ಅಂಬುಬಾಯಿ, ದೇವಾನಂದ, ಶೀಲಾ ಚಂದಮ್ಮ ಎಲ್ಲ-ಎಲ್ಲವನ್ನೂ ಆ ಹೊತ್ತಿನವರೆಗೆ ಮೌನವಾಗಿ ವೀಕ್ಷಿಸುತ್ತಿದ್ದವರು ಇದ್ದಕ್ಕಿದ್ದಂತೆ ದೇವಾನಂದ ಹೇಳಿದ, "ಹೋರಾಟ ಮಾಡಾದರಿಂದನೇ ಏನೆಲ್ಲ ಪಡಿಲಿಕ್ಕ ಸಾಧ್ಯ ಅಂತ ಹ್ಯಾಂಗ ಸ್ವಂತ ಅನುಭವದಿಂದ ಪಡದಾರ ನೋಡ್ರೀ...'

ಹೌದು, ಈ ಅನುಭವ ಸ್ವತಃ ದೇವಾನಂದನದೂ. ಬಡವರ ಮನೆಯ ಏಕೈಕ ಮಗ ಈತ. ಹಿರಿಯ ಸಂಗಾತಿಯೊಬ್ಬರ ನಿರಂತರ ಒಡನಾಟದಿಂದ ಈಗ ಕೃಷಿ ಕೂಲಿಕಾರ ಸಂಘದ ಮುಖಂಡ. ಕಳೆದ ಬಾರಿ ನಾನು ಸಭೆಗೆ ಬಂದಾಗ ಆತನ ತಂದೆ ಹೇಳುತ್ತಿದ್ದರು "ಹಗಲು ರಾತ್ರಿ ಅನಲಾರದೆ ಮಗ ಓಡಾಡ್ತಾನ್ರೀ. ಗೂಂಡಾಗಿರಿ ಎದರ್‍ಸಬೇಕಾಗ್ತದ. ಬಡವ್ರಿಗೆಲ್ಲ ಎತ್ತಿ ಕಟ್ಟಲ್ತಾನ ಅಂತ ಧೋಡೆ ಮಂದಿ ಹಲ್ಲ ಮಸಿಲತಾರ... ನನ ಮಗನ್ನ ಸಂಘದಿಂದ ಬಿಡ್ರಿ. ಗರೀಬ ಮಂದಿ ದುಡ್ಕೊಂಡು ಉಣ್ತೇವಿ" ಅಂತ ಕಣ್ತುಂಬ ನೀರ ತಂದು, ಆ ಹೆತ್ತ ಕರುಳು ಮರುಗ್ತಿತ್ತು. "ಯಜಮಾನಾ ನಿನ ಮಗ ಬಿಡ್ತೀನಿ ಅಂದ್ರ ನಾವು ಬ್ಯಾಡನ್ನಂಗಿಲ್ಲ..." ಅಂತ ನಾನು ಸಣ್ಣ ಮುಗುಳ್ನಗೆಯೊಂದಿಗೆ ಹೇಳಿದೆ. "ಅಂವ ಬಿಡಾದ್ರಿಲ್ರೀ.... " ಮತ್ತೂ ದುಃಖದಿಂದ ಹೇಳಿದನು. "ಮತ್ತ ಆಯ್ತು ಬಿಡು. ಮಂದಿ ಸಲುವಾಗಿ ಬಡದಾಡ್ತಾನ. ಮಂದಿನೇ ಅವನ ಹಿತನೂ ಮಾಡ್ತಾರ. ಚಿಂತಿ ಮಾಡಬ್ಯಾಡ". ನಾನು ಹಾಗಂತ ಹೇಳಿದ ಮೇಲೆ ಆ ಮುದಿ ಜೀವ ಅಸಹಾಯಕತೆಯಿಂದ ಮೌನಕ್ಕೆ ಶರಣಾಯ್ತು. ಒಂದು ದಿನ ದೇವಾನಂದನ ಸುಂದರ ಹೆಂಡತಿ ಕಣ್ಣುಗಳೆರಡರ ತುಂಬ ನೀರು ತುಂಬಿಕೊಂಡು ಬಿಕ್ಕಿದಳು. 'ಒಂದ್ ದಿನ ಮನ್ಯಾಗ ಇರಲ್ಲ...ಯಾರರೇ ಹೊಡೆದ ಹಾಕಿದ್ರ ಏನ್ ಮಾಡಬೇಕು...? ಮನ್ಯಾಗ ನಾ ಒಬ್ಬಾಕಿನೇ ಹ್ಯಾಂಗ ಇರಲಿ.." ಅವಳು ತಲೆಯ ಮೇಲಿನ ಸೆರಗು ಮತ್ತೂ ಬಿಗಿಗೊಳಿಸಿ ಕೇಳಿದಳು. "ತಂಗೀ, ನಿನ ನೋವು ಅರ್ಥ ಆಗ್ತದ. ನಿನ್ನಂಥ ಅಕ್ಕತಂಗೇರಿಗೆ ಉದ್ಯೋಗ ಕೊಡಸ್ಲಾಕ ಕೆಲಸ ಮಾಡ್ತಾನ. ಚಲೋ ಅಲ್ಲೇನು...? ಮತ್ತ ನೀ ಯಾಕ ಒಬ್ಬಾಕಿನೇ ಮನ್ಯಾಗ ಇರ್ತಿ. ನೀನೂ ಸಂಘಕ್ಕ ಬಾ... " ಅವಳ ಭುಜದ ತುಂಬ ಕೈ ಹಾಕಿ ಕಕ್ಕುಲಾತಿಯಿಂದ ಕೇಳಿದೆ. " ಈ ಜೀವನಾ ಜರಾ ಸಾರ್ಥಕ ಆಗಾಗ ಬದಕಬೇಕಲ್ಲ...?" ಅವಳಿಗೆ ಹುಂ ಅನ್ನಲಾಗಲಿಲ್ಲ. ಆದರೆ ಈಗ ದೇವಾನಂದ ಹೇಳುತ್ತಿದ್ದ 'ಸಿಟ್ಟಿಲಿಂದ ಜಗಳ ಆಡಿ ನಾನು ಸಂಗಾಟ ಬರ್ತೀನಿ... ಹ್ಯಾಂಗನೂ ನನಗೂ ಬಾ ಅಂದಾರ ನೀಲಾ ಅಂತ ನನ ಹೆಣ್ತಿ ಹೇಳ್ಯಾಳ್ರೀ...?" ಎಂದು ದೇವಾನಂದ ಬಾಯ್ತುಂಬ ನಗುತ ಹೇಳಿದನು. ಬರೋಬರಿ ಆಯ್ತಲ್ಲ... ಸೈಕಲ್ ಮ್ಯಾಲ ಹೊರಡ್ಲಿ ಜನುಮದ ಜೋಡಿ" ಹಾರಿಸಿದ ನಗೆ ಚಟಾಕಿಗೆ ಹರುಷದ ದನಿಗಳು ಸೇರಿದವು.

ಈ ಉದ್ಯೋಗ ಖಾತ್ರಿ ಕೆಲಸ ಖರೆನೇ. ಅದ್ಭುತವಾದದ್ದು. ಅದೊಂದು ದಿನ ಪಂಚಾಯತ್ ಮುಖಂಡರು, ಕೆಲಸ ಕೇಳಲು ಹೋದ ಹೆಣ್ಣು ಮಕ್ಕಳನ್ನು ಬಯ್ದು ಕಳಿಸಿದರಂತೆ. ಅದ್ಯಾರದೋ ಮುಂದೆ ಹೆಂಗಸರ ತಲಿ ಬೋಳಸ್ತೀವಿ, ಅವರ ಸಂಘದವರ ಕಾಲ ಮುರಿತಿವಿ" ಅಂದಿದ್ದು ಹೆಣ್ಣ ಮಕ್ಕಳ ಕಿವಿಗೆ ಬಿದ್ದು ಮರುದಿನ ಪಂಚಾಯತ್ ಮುಖಂಡರಿಗೆ ಘೇರಾವ್ ಮಾಡಿಯೇ ಬಿಟ್ಟರಂತೆ. "ಮೊದಲು ತಲಿ ಬೋಳಸಪಾ" ನೂರಾರು ಮಹಿಳೆಯರತ್ತ ಕೈ ತೋರಿಸಿ ರಂಗಮ್ಮ ಹೇಳಿದಳಂತೆ 'ಆಗಾ, ಇಷ್ಟ ಮಂದಿ ಇದಿವಿ.. ಹಿಮ್ಮತ್ ಇದ್ರ ನಮ ಲೀಡರ್‌ನ ಕಾಲ ಮುರಿ..." ಅಂತ ಸವಾಲು ಹಾಕಿ ಜಗಳಕ್ಕೆ ನಿಂತ ಪರಿಗೆ ಆ ಮುಖಂಡರುಗಳು "ಹಾಂಗಾದಿದ್ದು ತಪ್ಪಾಯ್ತು.." ಅಂದು ಎರಡ ದಿನದಾಗ ಕೆಲಸ ಕೊಡ್ತೀವಿ ಅಂತ ಒಪ್ಪಿದ ಮೇಲ ವಾಪಸ್ ಬಂದವರು ಈಗ ಎರಡುವರೆ ನೂರು ಜನ ಕೆಲಸ ಮಾಡುತ್ತಿದ್ದಾರೆ. 'ಜನಶಕ್ತಿ'ಯ ಮುಂದೆ ಬೇರೆ ಏನಿದೆ ಹೇಳಿ....?

ನಾವು ಕನಕಟ್ಟಾ, ಮಾಣಿಕನಗರ, ಹುಣಚಗೇರಾ, ಚಾಮನಗರ ಸುತ್ತಾಡಿದೆವು. ಅಳತೆಗೆ ಮೀರಿದ ಕೆನಾಲುಗಳು ಒಂದೇ ಸಮತಟ್ಟಲ್ಲಿ ರೂಪುಗೊಂಡಿದ್ದವು. ಹುಣಚಗೇರಾ ದಲಿತ ಕೇರಿಯ ಹಳೆಯ ಬಾವಿಯ ಹೂಳೆತ್ತುತ್ತಿದ್ದರು. ಕಳೆದ ಬಾರಿ ನಿರ್ಮಿಸಿದ ಗೋಕಟ್ಟಾದತ್ತ ಕೈ ತೋರಿ ವಿವರಿಸುತ್ತ ಮುಕುಂದ, ದತ್ತು ಅವರ ಮನದಲ್ಲಿ ಅಭಿವ್ಯಕ್ತಿಗೆ ಎಟುಕದ ಅಭಿಮಾನ ಪುಟಿಯುತ್ತಿತ್ತು. ಹುಣ್ಣಿಮೆಯ ಹೋಳಿಗೆಗಳು ಎಲ್ಲರ ಬುತ್ತಿಯಲ್ಲಿದ್ದವು. ದಟ್ಟ ಮರಗಳ ನೆರಳಿಗೆ ಅವರೆಲ್ಲರೊಂದಿಗೆ ಹರಟುತ ಊಟಕ್ಕೆ ಕೂತೆವು. ಬೀದರಿನ ಆರ್‌ಇಜಿಎ ಅಧಿಕಾರಿಯೊಬ್ಬರು ಫೋನಾಯಿಸಿ ಹೇಳುತ್ತಿದ್ದರು. "ಮೇಡಮ್ಮರೇ ವರ್ಕ್‌ಔಟ್ ಆಗ್ತಾ ಇಲ್ರೀ... ನಿಮ್ ಕೂಲಿಕಾರ ಮಂದಿ ಕೆಲಸ ಮಾಡಾದಿಲ್ಲ..." ನನಗೆ ಸಹನೆಯ ಕಟ್ಟೆಯೊಡೆಯಿತು. "ನಿಮ್ಮ ಕೈಯಿಂದನೂ ಆರ್‌ಇಜಿಎ ಪ್ರಾಮಾಣಿಕತೆಯಿಂದ ಜಾರಿ ಮಾಡಲಿಕಾಗ್ತಾ ಇಲ್ಲ.... ನೌಕ್ರಿ ಬಿಟ್ಟು ಮನಿಗಿ ಹೋಗ್ರಿ..' ಅಂದೆ. ಯಾವ ತಕರಾರು ಇಲ್ಲದೆ ಅಳತೆಯಷ್ಟು ಕೆಲಸ ಅದ್ಭುತವಾಗಿ ಮಾಡಿ ಮುಗಿಸಿದ ಕ್ಷೇತ್ರದಲ್ಲಿ ನಿಂತ ನಾನು ಹಾಗೆ ಹೇಳುವುದು ಅನಿವಾರ್ಯವಾಗಿತ್ತು.



ಕತ್ತಲಾಗುವ ಹೊತ್ತಾಗಿದ್ದೇನೊ ಹೌದು. ಆದರೆ ಪೂರ್ಣ ಬೆಳದಿಂಗಳ ಚಂದ್ರ ಆಗಸದಂಗಳದಲ್ಲಿ ಕಂಗೊಳಿಸುತ್ತಿದ್ದ. ಹಾಲ್ಬೆಂಬಗಳು ಚೆಲ್ಲಿತ್ತು. ವೇತನ ಆದ ಕೂಡಲೇ ಸಂಘ ಬಲಪಡಿಸಲು ನಿಧಿ ಕೊಡುವ ಪ್ರಸ್ತಾಪ ಮಾಡಿದೆವು. "ನಮ್ಮ ಸಂಘ ಅಲ್ಲೇನ್ರಿ ... ನಾವು ಕೊಟ್ಟೆ ಕೊಡ್ತಿವಿ.." ಮುಕುಂದ ತಲೆ ಎತ್ತಿ ಹೇಳಿದ. ಅಲ್ಲಿದ್ದವರೆಲ್ಲ ದನಿಗೂಡಿಸಿದರು.

ಈ ಆರ್‌ಇಜಿಎ ಕೆಲಸ ಅದ್ಭುತವೇ... ಸಂಘಟನೆ, ಹೋರಾಟ ಮತ್ತೆ ಸಂಘದ ಶಕ್ತಿಯ ವಿಸ್ತರಣೆ, ಮತ್ತೆ ಹೋರಾಟ... ಜೀಪು ಹತ್ತಿ ಹೊರಡುವಾಗ ನೂರು ಕನಸುಗಳು. ಚಂದ್ರನ ತಲೆಗೆ ಕೆಂಬಾವುಟ ಹಾರಾಡಿದಂತೆ. ಜೀಪಿನೊಳಗೆ ಮಾತುಗಳ ಕಲರವ. "ಕಾಮ್ರೇಡ್ 'ತಾಯಿ' ಕಾದಂಬರಿ ಕಳಿಸಿಕೊಡಿ"... ಸಂಗಾತಿಗಳ ಬೇಡಿಕೆ ನಿಮಗೂ ಖುಷಿ ತರುವುದು.

○

# ದಲಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ....

ಪುಟ 5 ರಿಂದ

ಕೇಂದ್ರಗಳಲ್ಲಿ 24 ಘಂಟೆಗಳ ಕಾಲ ಧರಣಿ ನಡೆಸಲಾಗುತ್ತಿದೆ. ಬೆಂಗಳೂರಿನಲ್ಲಿ ಫೆಬ್ರವರಿ 26, 2008ರಿಂದ ಎಂ.ಜಿ.ರಸ್ತೆಯಲ್ಲಿರುವ ಮಹಾತ್ಮಗಾಂಧಿಜಿಯವರ ಪ್ರತಿಮೆ ಎದುರು ಅನಿರ್ದಿಷ್ಟಾವಧಿ ಧರಣಿಯನ್ನು ಎಸ್‌ಎಫ್‌ಐ ಕರ್ನಾಟಕ ರಾಜ್ಯಸಮಿತಿ ಹಮ್ಮಿಕೊಂಡಿದೆ. ಇದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಹೊರಡಿಸಿರುವ ಆದೇಶದ ಪ್ರತಿಯನ್ನು ಸಹ ಸುಡಲಾಗುವುದು.

ಕೇಂದ್ರ ಸರ್ಕಾರ ಜಾರಿಗೆ ತಂದಿರುವ "ಶೇ.60 ಅಂಕ ಗಳಿಸಿದರೆ ಮಾತ್ರ ದಲಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ"ವೆಂಬ ಆದೇಶದಿಂದ ಬಡ ದಲಿತರಿಗೆ ಯಾವ ಮಟ್ಟದಲ್ಲಿ ಶಿಕ್ಷಣದಿಂದ ವಂಚಿಸಲಾಗುತ್ತದೆಂಬುದಕ್ಕೆ ಒಂದು ಉದಾಹರಣೆಯೆಂದರೆ,

ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ದಕ್ಷಿಣ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯಲ್ಲಿ ಈಗ ಪದವಿಪೂರ್ವ ತರಗತಿಯ ನಂತರದ ವಿದ್ಯಾರ್ಥಿಗಳು (ಹಾಸ್ಟೆಲ್ ವಿದ್ಯಾರ್ಥಿಗಳು ಹೊರತುಪಡಿಸಿ) ವರ್ಷಕ್ಕೆ 27 ಕೋಟಿ ವಿದ್ಯಾರ್ಥಿ ವೇತನ ಪಡೆಯುತ್ತಿದ್ದಾರೆ. ಈ ಮೇಲಿನ ಆದೇಶವನ್ನು ಪ್ರಸಕ್ತ ವರ್ಷದಿಂದ ಜಾರಿಗೆ ತಂದರೆ ಕೇವಲ 2 ಕೋಟಿಯಷ್ಟು ಮಾತ್ರ ವಿದ್ಯಾರ್ಥಿ ವೇತನ ಪಡೆಯುವಷ್ಟು ಮಾತ್ರ ಬೆಂಗಳೂರು ದಕ್ಷಿಣ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ವಿದ್ಯಾರ್ಥಿಗಳು ಅರ್ಹರಾಗುತ್ತಾರೆ. ಅಂದರೆ ಶೇ.2.8ರಷ್ಟು ಮಾತ್ರ ದಲಿತ ವಿದ್ಯಾರ್ಥಿಗಳಲ್ಲಿ ಶೇ.60ರಷ್ಟು ಅಂಕ ಗಳಿಸುವುದು. ಇದು ಕೇವಲ ಒಂದು ತಾಲ್ಲೂಕು ಮಟ್ಟದ ಅಂಕಿ ಅಂಶ. ಇದನ್ನು ಬೆಂಗಳೂರು, ಕರ್ನಾಟಕ ರಾಜ್ಯ ಇಡೀ ದೇಶಕ್ಕೆ ಹೋಲಿಸಿದಾಗ ಎಷ್ಟು ಕೋಟಿ ಹಣ ಉಳಿಯುತ್ತದೆ. ಎಷ್ಟು ಲಕ್ಷ ಬಡ ದಲಿತ ವಿದ್ಯಾರ್ಥಿಗಳು ಇದರಿಂದ ವಂಚಿತರಾಗುತ್ತಾರೆ ಎಂಬುದು ಮನದಟ್ಟಾಗುತ್ತದೆ. ಈಗಾಗಲೇ ಎಸ್‌ಎಫ್‌ಐ ಹೇಳಿರುವಂತೆ ಹಾಲಿ ಕೊಡಬೇಕಾಗಿರುವ ವಿದ್ಯಾರ್ಥಿವೇತನ ಸಮರ್ಪಕವಾಗಿ ನೀಡದಿರುವುದು ಬೇರೆ ಮಾತಾಗಿದೆ. ಜಾಗತೀಕರಣ ನೀತಿಗಳೆಂದರೆ ಹೇಗೆ ಎಂಬುದನ್ನು ಇನ್ನಾದರೂ ಸೀಗು ಹಾಕುವ ಕೆಲ ಸಂಘಟನೆ ಮನಗಾಣಬೇಕಾಗಿದೆ.

○

ಜನಶಕ್ತಿ ಕನ್ನಡ ವಾರಪತ್ರಿಕೆ



**ಅಮೆರಿಕಾ ನೇತೃತ್ವದ ಸಾಮ್ರಾಜ್ಯಶಾಹಿ ಶಕ್ತಿಗಳ ದುಷ್ಟತನಗಳಿಗೆ ಜಗತ್ತಿನಾದ್ಯಂತ ಭಾರಿ ಪ್ರತಿರೋಧ ಬೆಳೆದು ಬರುತ್ತಿದ್ದರೂ ಜಗತ್ತಿನ ಆರ್ಥಿಕತೆ ಮಾತ್ರ ಇಂದಿಗೂ ಇದೇ ಶಕ್ತಿಗಳ ಹಿಡಿತದಲ್ಲಿ ನರಳುತ್ತಿದೆ.**

# ಸಾಮ್ರಾಜ್ಯಶಾಹಿ ಜಾಗತೀಕರಣದ ಕಬಂಧಬಾಹುಗಳಲ್ಲಿ ತತ್ತರಿಸುತ್ತಿರುವ ವಿಶ್ವ ಆರ್ಥಿಕ

**ಶರತ್‌ಚಂದ್ರ**

ವಿಶ್ವ ಆರ್ಥಿಕ ಸಾಮ್ರಾಜ್ಯಶಾಹಿ ಜಾಗತೀಕರಣ ಹೊರಿಸುವ ಆರ್ಥಿಕ ನೀತಿಗಳು ಹೆಚ್ಚಿನ ದೇಶಗಳಲ್ಲಿ ಈ ಅವಧಿಯಲ್ಲೂ ಮುಂದುವರೆದವು. ಸಾಮ್ರಾಜ್ಯಶಾಹಿ ಜಾಗತೀಕರಣದ ನೀತಿಗಳು, ಸಾಮ್ರಾಜ್ಯಶಾಹಿ ಶಕ್ತಿಗಳು ಮತ್ತು ಅವರ ಬಾಲಬಡುಕರನ್ನು ಬಿಟ್ಟರೆ ಎಲ್ಲರ ಹಿತಾಸಕ್ತಿಗೆ ವಿರೋಧವಾದುದು. ಮಾತ್ರವಲ್ಲ. ಅದು ಕಾರ್ಯಸಾಧ್ಯವಾದ ವ್ಯವಸ್ಥೆಯೂ ಅಲ್ಲ. ಅದರ ಕಬಂಧ ಬಾಹುಗಳಲ್ಲಿ ವಿಶ್ವ ಆರ್ಥಿಕ ತತ್ತರಿಸುತ್ತಿದೆ. ಯಾವುದೇ ದೃಷ್ಟಿಯಿಂದ ನೋಡಿದರೂ ವಿಶ್ವ ಆರ್ಥಿಕ ದುಸ್ಥಿತಿ ಕಣ್ಣಿಗೆ ಹೊಡೆಯುವಂತಿದೆ. ವಿಶ್ವ ಆರ್ಥಿಕ 2004-06ರಲ್ಲಿ ಜಿಡಿಪಿ(ಒಟ್ಟು ರಾಷ್ಟ್ರೀಯ ಉತ್ಪನ್ನ)ಯಲ್ಲಿ ಶೇಕಡಾ 3 ರಿಂದ 4 ವಾರ್ಷಿಕ ಬೆಳವಣಿಗೆ ಕಂಡಿದ್ದು ಅದು ನಿಧಾನಗೊಳ್ಳುವಂತಹ ಸ್ಥಿತಿಯನ್ನು ಎದುರಿಸುತ್ತಿದೆ. ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ರಿಯಲ್ ಎಸ್ಟೇಟ್(ಸ್ಥಿರಾಸ್ತಿ ವ್ಯವಹಾರಗಳ) ಉತ್ಕರ್ಷ ಕುಸಿದಿರುವುದು ಈ ನಿಧಾನ ಗತಿಯ ನಿರೀಕ್ಷೆಗೆ ಪ್ರಧಾನ ಕಾರಣ. ಈ ಹಿಂದಿನ ಆರ್ಥಿಕ ಹಿಂಜರಿತ 2000ರಲ್ಲಿ ಅಮೆರಿಕಾದಲ್ಲಿ ಶೇರು ಮಾರುಕಟ್ಟೆ ಮತ್ತು ಐಟಿ(ಮಾಹಿತಿ ತಂತ್ರಜ್ಞಾನ) ಉತ್ಕರ್ಷದ ಕುಸಿತದಿಂದ ಹೊಮ್ಮಿತ್ತು. ನಂತರ ಅದು ಹಲವು ದೇಶಗಳಿಗೆ ಹರಡಿ ಒಂದು ಜಾಗತಿಕ ಕುಸಿತ ತಂದಿತ್ತು. ಅದೇ ರೀತಿಯ ಬೆಳವಣಿಗೆ 2006ರಿಂದ ಈಚೆಗೆ ಅಮೆರಿಕಾದಲ್ಲಿ ಕಾಣಬಂದಿದೆ. ಅಡಮಾನ ಸಾಲ ನೀಡುವ ಬ್ಯಾಂಕುಗಳು ಮನೆ(ಅಡಮಾನ) ಸಾಲಗಳನ್ನು, ಸಾಲ ಮರುಪಾವತಿ ಮಾಡುವ ಸಾಮರ್ಥ್ಯ ಸಂದೇಹಾಸ್ಪದವಾಗಿದ್ದ ಸಾಲಗಾರರಿಗೆ ಬೇಕಾಬಿಟ್ಟಿ ನೀಡಿದ್ದರಿಂದ(ಸಬ್ ಪ್ರೈಮ್ ಸಾಲ ನೀಡಿಕೆ) ಈ ಬಿಕ್ಕಟ್ಟು ಉದ್ಭವಿಸಿದೆ. ಈ ಸಾಲಗಳಲ್ಲಿ ಸುಸ್ತಿ ಹೆಚ್ಚಾಗಿ ಈ ಬಿಕ್ಕಟ್ಟು ಹೊಮ್ಮಿ ಬಂತು. ಇತರ ಹಲವು ಅಭಿವೃದ್ಧಿ ಹೊಂದಿದ ದೇಶಗಳಲ್ಲೂ ಕಳೆದ ದಶಕದಲ್ಲಿ ಇಂತಹುದೇ ರಿಯಲ್ ಎಸ್ಟೇಟ್ ಗುಳ್ಳೆಗಳು ಕಂಡು ಬಂದಿದ್ದು, ಅವು ಕೂಡಾ ಸ್ಥಿರಾಸ್ತಿ ಮಾರುಕಟ್ಟೆಗಳಲ್ಲಿ ಇಳಿಕೆ ಕಾಣುತ್ತಿವೆ.

**ಅಸ್ಥಿರಗೊಂಡ ವಿಶ್ವ ಆರ್ಥಿಕ**

ಇತ್ತೀಚಿನ ಸಮಯದಲ್ಲಿ ಯುರೋ ಮತ್ತು ಇತರ ನಾಣ್ಯ(ಕರೆನ್ಸಿ)ಗಳೆದುರು ಡಾಲರ್ ದುರ್ಬಲಗೊಳ್ಳುತ್ತಿದೆ. ಡಾಲರಿನ ಮೌಲ್ಯದಲ್ಲಿ ಒಂದು ತೀಕ್ಷ್ಣ ಪತನ ಡಾಲರಿನ ಆಧಿಪತ್ಯದ ಮೇಲೆ ನಿಂತಿರುವ ಜಾಗತಿಕ ಆರ್ಥಿಕದ ಮೇಲೆ ಅಸ್ಥಿರಕಾರೀ ಪರಿಣಾಮಗಳನ್ನು ಬೀರಬಹುದು. ಡಾಲರಿಗೆ ತಮ್ಮ ನಾಣ್ಯದ ಮೌಲ್ಯವನ್ನು ಲಗತ್ತಿಸಿಕೊಂಡಿರುವ ಹಲವು ದೇಶಗಳು ಕೂಡ ಡಾಲರಿನ ಮೌಲ್ಯಕ್ಕೆ ಬೆದರಿಕೆ ಬಂದರೆ ಅಸ್ಥಿರತೆಯನ್ನು ಕಾಣಬಹುದು. ಜಾಗತೀಕರಣದ ಅಡಿಯಲ್ಲಿ ಬಹುರಾಷ್ಟ್ರೀಯ ಹಣಕಾಸು ಕಂಪನಿಗಳಿಗೆ ಹೆಚ್ಚೇನೂ ನಿಯಂತ್ರಣಗಳಿಲ್ಲದೆ ದೇಶಗಳ ಒಳಗೆ ಬರುವ, ಹೊರಗೆ ಹೋಗುವ ಮತ್ತು ಕರೆನ್ಸಿಯಲ್ಲಿ ಜೂಜಿಗೆ ಇಳಿಯುವ ಸಾಮರ್ಥ್ಯವಿರುವುದರಿಂದ ಇಂತಹ ಅಸ್ಥಿರತೆಯ ಅಪಾಯ ಹೆಚ್ಚುತ್ತದೆ. ಅಲ್ಲದೆ ಜಾಗತಿಕ ಆಮದುಗಳಲ್ಲಿ ಸುಮಾರು ಶೇಕಡಾ 20 ಅಮೆರಿಕಾದ್ದು. ಅಮೆರಿಕಾದ ಆರ್ಥಿಕ ನಿಧಾನಗೊಂಡರೆ ಅದು ಯುರೋಪಿಯನ್ ಒಕ್ಕೂಟ ಮತ್ತು ಜಪಾನಿನಂತಹ ಮುಂದುವರೆದ ಆರ್ಥಿಕಗಳತ್ತ ಮತ್ತು ಚೀನಾ ಮತ್ತು ಭಾರತದಂತಹ ಅಭಿವೃದ್ಧಿಶೀಲ ದೇಶಗಳನ್ನೂ ಒಳಗೊಳ್ಳುವುದು ಖಚಿತ. ಈ ಆರ್ಥಿಕಗಳ ಬೆಳೆಯುತ್ತಿರುವ ವಲಯಗಳು ಅಮೆರಿಕಾದ ಮಾರುಕಟ್ಟೆಗಳನ್ನು ನಿರ್ಣಾಯಕವಾಗಿ ಅವಲಂಬಿಸಿವೆ. ಆದ್ದರಿಂದ ಅಮೆರಿಕಾದಲ್ಲಿ ನಿಧಾನತೆ ಬಂದರೆ ಈ ದೇಶಗಳಲ್ಲೂ ಆದಾಯ ಮತ್ತು ಉದ್ಯೋಗದ ಬೆಳವಣಿಗೆಯಲ್ಲಿ ನಿಧಾನತೆ ಎಂದೇ ಆಗುತ್ತದೆ. ಇನ್ನೊಂದೆಡೆ ಅಮೆರಿಕಾ ಡಾಲರ್‌ನ ಮೌಲ್ಯ ಇಳಿಕೆಯ ಪ್ರಯೋಜನ ಪಡೆದು ತನ್ನ ರಫ್ತುಗಳನ್ನು ಹೆಚ್ಚಿಸಿಕೊಳ್ಳಲು ಮತ್ತು ತನ್ನ ವಿಪರೀತ ವ್ಯಾಪಾರ ಕೊರತೆಯನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತದೆ. ಅಮೆರಿಕಾದೊಳಗೆ ಹೊರಗುತ್ತಿಗೆ ಮೇಲೆ ಕಡಿವಾಣ ಹಾಕಬೇಕು ಎಂಬಂತಹ ಬೇಡಿಕೆಗಳು ಹೆಚ್ಚಬಹುದು. ಇತ್ತ ಅಭಿವೃದ್ಧಿಶೀಲ ದೇಶಗಳ ಮೇಲೆ ಅವುಗಳ ಮಾರುಕಟ್ಟೆಗಳನ್ನು ಅಮೆರಿಕಾದ ಸರಕುಗಳು ಮತ್ತು ಸೇವೆಗಳಿಗೆ ಇನ್ನಷ್ಟು ತೆರೆಯಬೇಕು ಎಂಬ ಒತ್ತಡಗಳೂ ಹೆಚ್ಚುತ್ತವೆ.

ಕಳೆದ ಕೆಲವು ವರ್ಷಗಳಲ್ಲಿ ಎರಡು ಅಂಶಗಳು ವಿಶ್ವದ ಆರ್ಥಿಕವನ್ನು ನಡೆಸಿಕೊಂಡು ಬಂದಿವೆ. ಮೊದಲನೆಯದು ಬುಶ್ ಆಡಳಿತದಿಂದ ಮುಖ್ಯವಾಗಿ 'ಭಯೋತ್ಪಾದನೆಯ ಮೇಲೆ ಯುದ್ಧ'ಕ್ಕೆ ಮಿಲಿಟರಿ ಖರ್ಚನ್ನು ಏರಿಸಲು ಕೊರತೆ ಬಜೆಟ್. ಎರಡನೇಯದು ಅಮೆರಿಕಾದಲ್ಲಿ ಸಾಲಗಳಿಂದ ಹಣಪಡೆದು ಬಳಕೆ ಖರ್ಚುಗಳಲ್ಲಿ ದೊಡ್ಡ ಏರಿಕೆ. ಅಮೆರಿಕಾದ ಮಿಲಿಟರಿ ಖರ್ಚು 2000ದಲ್ಲಿ ಜಿಡಿಪಿಯ ಶೇಕಡಾ 3 ಇದ್ದದ್ದು 2005ರಲ್ಲಿ ಶೇಕಡಾ 4 ಕ್ಕೆ ಏರಿದೆ. ಹಿಂಜರಿತ ಎದುರಾದಾಗ ಅಮೆರಿಕಾದ ಆಡಳಿತ ಆರ್ಥಿಕದಲ್ಲಿ ಆಂತರಿಕ ಬೇಡಿಕೆಯನ್ನು ಮೇಲೆತ್ತಲು ತನ್ನ ಮಿಲಿಟರಿಶಾಹಿಯನ್ನು ಇನ್ನಷ್ಟು ಹೆಚ್ಚಿಸುವ ಸಾಧ್ಯತೆ ಇದೆ.

**ಬಡ ದೇಶಗಳಿಂದ ಶ್ರೀಮಂತ ದೇಶಗಳಿಗೆ ಹರಿದ ಸಂಪತ್ತು**

ಸಂಪನ್ಮೂಲಗಳು ಒಟ್ಟಾರೆಯಾಗಿ ಬಡ ದೇಶಗಳಿಂದ ಶ್ರೀಮಂತ ದೇಶಗಳತ್ತ ಹರಿದು ಹೋಗುತ್ತಿವೆ. ಇದು ವಿಚಿತ್ರ ಆದರೂ ನಿಜ. ಇದು ಜಾಗತೀಕರಣದ ಒಟ್ಟು ಪರಿಣಾಮ. ವಿಶ್ವಸಂಸ್ಥೆಯ ಇತ್ತೀಚಿನ ವಿಶ್ವ ಆರ್ಥಿಕ ಸನ್ನಿವೇಶ ಮತ್ತು ಪ್ರತೀಕ್ಷೆಗಳು 2007 ರ ಪ್ರಕಾರ, ಅಭಿವೃದ್ಧಿಶೀಲ ಆರ್ಥಿಕಗಳಲ್ಲಿ ನಿವ್ವಳ ಹಣಕಾಸು ಹರಿವುಗಳಲ್ಲಿ 1995ರಲ್ಲಿ 40 ಬಿಲಿಯನ್(4 ಸಾವಿರ ಕೋಟಿ) ಡಾಲರುಗಳ ನಿವ್ವಳ ಒಳಹರಿವು ಇದ್ದದ್ದು 2006ರಲ್ಲಿ 657 ಬಿಲಿಯನ್(65700 ಕೋಟಿ) ನಿವ್ವಳ ಹೊರಹರಿವು ಆಗಿದೆ. ಅಭಿವೃದ್ಧಿಶೀಲ ಆರ್ಥಿಕಗಳಿಂದ ಮುಂದುವರೆದ ಆರ್ಥಿಕಗಳಿಗೆ ಇಂತಹ ಸಂಪನ್ಮೂಲಗಳ ವರ್ಗಾವಣೆ ಪ್ರಧಾನವಾಗಿ ಸಾಲಗಳ ಮೇಲಿನ ಬಡ್ಡಿ ಪಾವತಿ, ಬಹುರಾಷ್ಟ್ರೀಯ ಕಂಪನಿಗಳ ಲಾಭಗಳು ಹಾಗೂ ಅಭಿವೃದ್ಧಿ ಹೊಂದಿದ ಆರ್ಥಿಕಗಳ ಹಣಕಾಸು ಮಾರುಕಟ್ಟೆಗಳಲ್ಲಿ ಅಭಿವೃದ್ಧಿಶೀಲ ದೇಶಗಳ ಕಂಪನಿಗಳು ಮತ್ತು ಶ್ರೀಮಂತರು ಮಾಡುವ ಹೂಡಿಕೆಗಳಿಂದಾಗಿ ನಡೆದಿದೆ. ಇದು ಅಭಿವೃದ್ಧಿಶೀಲ ದೇಶಗಳ ಒಳಗೆ ವಿದೇಶಿ ಹೂಡಿಕೆಗಳು ಮತ್ತು ನೆರವಿನ ರೂಪದಲ್ಲಿ ಹರಿದು ಬರುವ ಬಂಡವಾಳಕ್ಕಿಂತ ಎಷ್ಟೋ ಹೆಚ್ಚು. ಅಲ್ಲದೆ ಅಭಿವೃದ್ಧಿಶೀಲ ದೇಶಗಳು ಒಟ್ಟು 3 ಟ್ರಿಲಿಯನ್(3 ಲಕ್ಷಕೋಟಿ) ಡಾಲರುಗಳಿಗಿಂತಲೂ ಹೆಚ್ಚು ವಿದೇಶೀ ವಿನಿಮಯ ಮೀಸಲುಗಳನ್ನು ಹೊಂದಿದ್ದು ಇದು ಅಭಿವೃದ್ಧಿಶೀಲ ಆರ್ಥಿಕಗಳಿಂದ ಮುಂದುವರೆದ ಆರ್ಥಿಕಗಳಿಗೆ ಸಂಪನ್ಮೂಲಗಳ ಹರಿವಿಗೆ ಇನ್ನಷ್ಟು ಸೇರಿಸುತ್ತದೆ. ಕೇವಲ ಅಮೆರಿಕಾವೊಂದೇ ಬಡ ದೇಶಗಳಿಂದ ಪ್ರತಿದಿನ 2 ಬಿಲಿಯನ್ (200ಕೋಟಿ) ಡಾಲರು ಗಳಿಗಿಂತಲೂ ಹೆಚ್ಚಿನ ಸಾಲ ತರುತ್ತದೆ.

ಜಾಗತೀಕರಣದ ಪ್ರಕ್ರಿಯೆಯಲ್ಲಿಯೇ ಅಡಕವಾಗಿರುವ ವೈರುಧ್ಯಗಳು ಡಬ್ಲ್ಯುಟಿಒ(ವಿಶ್ವ ವ್ಯಾಪಾರ ಸಂಘಟನೆ) ದ ದೋಹಾ ಸುತ್ತಿನ ಮಾತುಗಳ ಮುಂದುವರೆದ ಅನಿಶ್ಚಿತತೆಯಲ್ಲಿ ಸ್ಪಷ್ಟವಾಗಿ ಪ್ರಕಟಗೊಂಡಿವೆ. ಅಮೆರಿಕಾ ಅಭಿವೃದ್ಧಿಶೀಲ ದೇಶಗಳಿಗೆ ಹೆಚ್ಚಿನ ಮಾರುಕಟ್ಟೆ ಅವಕಾಶಗಳನ್ನು ಕಲ್ಪಿಸಲು ಅನುವಾಗುವಂತೆ ತಮ್ಮ ದೇಶದಲ್ಲಿ ನೀಡುವ ಅಪಾರ ಕೃಷಿ ಸಬ್ಸಿಡಿಗಳನ್ನು ಕಡಿತ ಮಾಡಲು ಮತ್ತು ಕೃಷಿ ಸುಂಕಗಳನ್ನು ಇಳಿಸಲು ಇಷ್ಟಪಡದಿರುವುದು ಯಾವುದೇ ಒಪ್ಪಂದವಾಗದಿರಲು ಕಾರಣ. ಕೃಷಿ ಸಬ್ಸಿಡಿಗಳ ಪ್ರಶ್ನೆಯ ಮೇಲೆ ಅಮೆರಿಕ ಮತ್ತು ಯುರೋಪಿಯನ್ ಒಕ್ಕೂಟದ ನಡುವೆ ವೈರುಧ್ಯಗಳಿವೆ. ಆದರೆ ಅಮೆರಿಕ ಮತ್ತು ಯುರೋಪಿಯನ್ ಒಕ್ಕೂಟ ತಮ್ಮದೇ ದೇಶಗಳಲ್ಲಿ ರಕ್ಷಣಾತ್ಮಕ ಕ್ರಮಗಳನ್ನು ಪಟ್ಟು ಹಿಡಿದು ಸಮರ್ಥಿಸಿಕೊಳ್ಳುತ್ತಲೇ ಅಭಿವೃದ್ಧಿಶೀಲ ದೇಶಗಳು ಕೈಗಾರಿಕಾ ಸರಕುಗಳ ಮೇಲಿನ ಸುಂಕಗಳನ್ನು ತೀವ್ರವಾಗಿ ಕಡಿತ ಮಾಡಲು ಮತ್ತು ತಮ್ಮ ಸೇವಾವಲಯಗಳನ್ನು, ಹಣಕಾಸು ಮತ್ತು ಸಾಮಾಜಿಕ ವಲಯಗಳನ್ನೂ ಕೂಡಾ ತೆರೆದು ಕೊಡಲು ಒಪ್ಪುವಂತೆ ಮಾಡಲು ಯತ್ನಿಸುತ್ತಿವೆ.

## ಅಗಾಧವಾಗಿ ಹೆಚ್ಚುತ್ತಿರುವ ಅಸಮಾನತೆ

ಜಾಗತೀಕರಣದ ಅಡಿಯಲ್ಲಿ ಹೆಚ್ಚಿನ ದೇಶಗಳು ಅನುಸರಿಸುತ್ತಿರುವ ನವ ಉದಾರವಾದಿ ಧೋರಣೆಗಳು ಸಂಪತ್ತು ಮತ್ತು ಆದಾಯಗಳ ಅಸಮಾನತೆಗಳು ಇನ್ನಷ್ಟು ವಿಸ್ತಾರಗೊಳ್ಳಲು ಮತ್ತು ಆಸ್ತಿಗಳ ಒಡೆತನ ಇನ್ನಷ್ಟು ಕೇಂದ್ರೀಕೃತಗೊಳ್ಳಲು ಕೂಡಾ ಕಾರಣೀಭೂತವಾಗಿವೆ. ವೈಡರ್ ಎಂಬ ವಿಶ್ವಸಂಸ್ಥೆಯ ಒಂದು ಸಂಸ್ಥೆ ವಿಶ್ವಾದ್ಯಂತ ವೈಯಕ್ತಿಕ ಸಂಪತ್ತು ಕುರಿತಂತೆ 2006 ರಲ್ಲಿ ನಡೆಸಿದ ಒಂದು ಅಧ್ಯಯನ ಅಸಮಾನತೆ ಎಷ್ಟು ಅಗಾಧವಾಗಿ ಬೆಳೆದಿದೆ ಎಂದು ಹೊರಗೆಡಹಿದೆ. 2000 ದಲ್ಲಿ ಶೇಕಡ 1 ಅತೀ ಶ್ರೀಮಂತರು, ಜಾಗತಿಕ ಆಸ್ತಿಗಳ ಶೇಕಡಾ 40 ರ ಮೇಲೆ ಒಡೆತನ ಹೊಂದಿದ್ದರು. ಅತಿ ಶ್ರೀಮಂತ ಶೇಕಡ 10 ಜನರ ಬಳಿ, ವಿಶ್ವದ ಆಸ್ತಿಯ ಶೇಕಡ 85 ಇತ್ತು ಎಂದಿದೆ ವರದಿ. ಇದಕ್ಕೆ ವ್ಯತಿರಿಕ್ತವಾಗಿ ವಿಶ್ವದ ಜನಸಂಖ್ಯೆಯ ಕೆಳಗಿನ ಅರ್ಧದಷ್ಟು ಮಂದಿಯ ಬಳಿ ಜಾಗತಿಕ ಸಂಪತ್ತಿನ ಕೇವಲ ಶೇಕಡ 1 ಇತ್ತು. ಮಾನವ ಅಭಿವೃದ್ಧಿ ವರದಿ (ಹೆಚ್‌ಡಿಆರ್) 2007/2008 ದೇಶಗಳ ನಡುವೆಯೂ ಮತ್ತು ದೇಶಗಳ ಒಳಗೂ ಪ್ರಸಕ್ತ ಜಾಗತೀಕರಣದ ಘಟ್ಟದಲ್ಲಿ ಶ್ರೀಮಂತರು ಮತ್ತು ಬಡವರ ನಡುವಿನ ಅಸಮಾನತೆಗಳು ಹೆಚ್ಚುತ್ತಿವೆ ಎಂದು ಮತ್ತೆ ದೃಢಪಡಿಸಿದೆ. ದಿನಕ್ಕೆ 2 ಡಾಲರುಗಳಿಗಿಂತಲೂ ಕಡಿಮೆ ಆದಾಯದ ಮೇಲೆ ಬದುಕುತ್ತಿರುವ ವಿಶ್ವದ ಶೇ. 40 ಜನರು ವಿಶ್ವದ ಒಟ್ಟು ಆದಾಯದ ಶೇಕಡ 5 ಹೊಂದಿದ್ದಾರೆ. ಅತ್ಯಂತ ಶ್ರೀಮಂತ 20 ಶೇಕಡಾ ಮಂದಿ ಮುಕ್ಕಾಲು ಪಾಲು ಹೊಂದಿದ್ದಾರೆ. ವಿಶ್ವದ 80 ಶೇಕಡಾ ಜನ ಆದಾಯದ ಅಂತರಗಳು ಹೆಚ್ಚುತ್ತಿರುವ ದೇಶಗಳಲ್ಲಿ ಜೀವಿಸುತ್ತಿದ್ದಾರೆ. ಸಾಮ್ರಾಜ್ಯಶಾಹಿ ಮತ್ತು ಅಭಿವೃದ್ಧಿಶೀಲ ದೇಶಗಳ ನಡುವಿನ ವೈರುಧ್ಯಗಳು ತೀವ್ರಗೊಳ್ಳುತ್ತಿವೆಯೆಂಬುದು ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ವಲಯಗಳಲ್ಲಿ, ಈಗ ಕಾಣಿಸಿಕೊಳ್ಳುತ್ತಿರುವ ಜಾಗತಿಕ ಬಿಸಿಯೇರಿಕೆಯ ಬಿಕ್ಕಟ್ಟಿನಲ್ಲಿ ಕೂಡಾ ಅಭಿವ್ಯಕ್ತಗೊಳ್ಳುತ್ತಿವೆ.

# ಬಹುಧ್ರುವೀಯತೆಯತ್ತ ಜಗತ್ತಿನ ಬೆಳವಣಿಗೆಗಳು

## ಮೂರು ವರ್ಷಗಳ ಸಿಂಹಾವಲೋಕನ

ಕಳೆದ ಮೂರು ವರ್ಷಗಳು ಅಂತರ್‍ರಾಷ್ಟ್ರೀಯ ಸಂದರ್ಭದಲ್ಲಿ ಹಲವು ಹೊಸ ಪ್ರವೃತ್ತಿಗಳು ಮಹತ್ವದ ಬೆಳವಣಿಗೆಗಳನ್ನು ಕಂಡ ಅವಧಿ. ಜಗತ್ತನ್ನು ನಡುಗಿಸಿದ 9/11 ದುರಂತದಿಂದ ಆರಂಭವಾದ ಅದರ ಹಿಂದಿನ ಮೂರು ವರ್ಷಗಳಿಗೆ ಹೋಲಿಸಿದರೆ, ಹೆಚ್ಚು ಸಕಾರಾತ್ಮಕ ಬೆಳವಣಿಗೆಗಳನ್ನು ಕಂಡದ್ದು ವಿಶೇಷ. ಕಳೆದ ಮೂರು ವರ್ಷಗಳ ಪ್ರಮುಖ ಅಂತರ್‍ರಾಷ್ಟ್ರೀಯ ಬೆಳವಣಿಗೆಗಳ ಸಿಂಹಾವಲೋಕನವನ್ನು 'ಜನಶಕ್ತಿ' ತನ್ನ ಓದುಗರ ಮುಂದೆ ಇಡುತ್ತಿದೆ. ಸಾಮ್ರಾಜ್ಯಶಾಹಿ ಜಾಗತೀಕರಣದ ಕಬಂಧ ಬಾಹುಗಳಲ್ಲಿ ತತ್ತರಿಸುತ್ತಿರುವ ಜಾಗತಿಕ ಆರ್ಥಿಕ, ಜಗತ್ತಿನ ಮೇಲೆ ಅಮೆರಿಕದ 'ಭಯೋತ್ಪಾದಕ ಯುದ್ಧ', 'ಏಕಮಾತ್ರ ಸೂಪರ್ ಪವರ್ ಗಿರಿ' ಗೆ ಸವಾಲು, ಹವಾಮಾನ ಬದಲಾವಣೆಯ ಸವಾಲು, ದಕ್ಷಿಣ ಏಶ್ಯಾದಲ್ಲಿ ಸಾಮ್ರಾಜ್ಯಶಾಹಿ ಮೂಗು ತೂರಿಸುವಿಕೆ .... ಮುಂತಾಗಿ.

ಅಮೆರಿಕದ ಆಧಿಪತ್ಯದಲ್ಲಿ ಸಾಮ್ರಾಜ್ಯಶಾಹಿ ಜಾಗತೀಕರಣ ಹೊರಿಸುವ ಆರ್ಥಿಕ ನೀತಿಗಳು ಭಾರತ ಸೇರಿದಂತೆ ಹಲವು ದೇಶಗಳಲ್ಲಿ ಈ ಅವಧಿಯಲ್ಲೂ ಮುಂದುವರೆದವು. ಆದರೆ ಅದರ ದುಷ್ಪರಿಣಾಮಗಳ ಬಗ್ಗೆ ಹೆಚ್ಚೆಚ್ಚಾಗಿ ಹೆಚ್ಚಿನ ಜನವಿಭಾಗಗಳಿಗೆ ಅರಿವಾಗಲೂ ಆರಂಭವಾಗಿ, ಅದರ ವಿರುದ್ಧ ತೀವ್ರ ಪ್ರತಿರೋಧ ಬೃಹದಾಕಾರವಾಗಿ ಬೆಳೆದ ಅವಧಿ. ಸಾಮ್ರಾಜ್ಯಶಾಹಿ ಜಾಗತೀಕರಣದ ನೀತಿಗಳು, ಸಾಮ್ರಾಜ್ಯಶಾಹಿ ಶಕ್ತಿಗಳು ಮತ್ತು ಅವರ ಬಾಲಬಡುಕರನ್ನು ಬಿಟ್ಟರೆ ಎಲ್ಲರ ಹಿತಾಸಕ್ತಿಗೆ

ಪುಟ 12ಕ್ಕೆ

# ಪಾಕಿಸ್ತಾನ ಚುನಾವಣೆ: ಮಿಲಿಟರಿ ಸರ್ವಾಧಿಕಾರಕ್ಕೆ ಜನತೆಯ ತಿರಸ್ಕಾರ

**ಈ ಚುನಾವಣೆಯಲ್ಲಿ ಪಾಕಿಸ್ತಾನದ ಜನತೆ ಮಿಲಿಟರಿ ಸರ್ವಾಧಿಕಾರತ್ವವನ್ನು, ಧಾರ್ಮಿಕ ಸಂಕುಚಿತವಾದವನ್ನು ತಿರಸ್ಕರಿಸಿದ್ದಾರೆ. ಈ ಫಲಿತಾಂಶದಂತೆ ಪ್ರಜಾಪ್ರಭುತ್ವ ಅಲ್ಲಿ ಆರಳಿ ನೆಲೆಗೊಳ್ಳಬೇಕು. ಭಾರತ-ಪಾಕ್ ಸಂಬಂಧ ಸುಧಾರಿಸಬೇಕು. ಹಾಗಾದೀತೇ?**

ಮೂಲಭೂತವಾದಿ, ಸರ್ವಾಧಿಕಾರಿ, ಮಿಲಿಟರಿ ಆಡಳಿತ ಇರುವ ದೇಶ, ಜಾಗತಿಕ ಭಯೋತ್ಪಾದನೆಯ ಕೇಂದ್ರ ಎಂಬೆಲ್ಲ ಬಿರುದುಗಳನ್ನು ಪಾಕಿಸ್ತಾನ ಹೊಂದಿದ್ದರೂ ಅಲ್ಲಿನ ಜನತೆ ಪ್ರಜಾಪ್ರಭುತ್ವಕ್ಕಾಗಿ ಹಪಹಪಿಸುತ್ತಿದ್ದರು ಎಂಬುದನ್ನು ಫೆಬ್ರವರಿ 18ರಂದು ನಡೆದ ಸಾರ್ವತ್ರಿಕ ಚುನಾವಣೆ ಸಾಬೀತುಗೊಳಿಸಿದೆ.

**ಹೀನಾಯ ಸೋಲು**

ರಾಜಕಾರಣಿಗಳು, ಮೂಲಭೂತ ವಾದಿ ಪಕ್ಷಗಳು, ಸರ್ವಾಧಿಕಾರಿ ವ್ಯಕ್ತಿಗಳು ಕೈಗೊಳ್ಳುವ ನಿರ್ಣಯಗಳು ಅಲ್ಲಿನ ಜನತೆಯ ಮನಸ್ಸಿನಲ್ಲಿರುವ ಭಾವನೆಗಳು, ಆಶಯಗಳ ಪ್ರತಿಬಿಂಬವಲ್ಲ ಎಂಬುದನ್ನು ಎಲ್ಲರೂ ಅರಿಯಬೇಕು ಎನ್ನುವುದಕ್ಕೆ ಇದು ಪ್ರಬಲ ನಿದರ್ಶನವಾಗಿದೆ. ಜರ್ಮನಿ, ಫ್ರಾನ್ಸ್, ಬ್ರಿಟನ್, ಆಸ್ಟ್ರೇಲಿಯಾ, ಜಪಾನ್, ಇಸ್ರೇಲ್ ಸೇರಿದಂತೆ ಹಲವಾರು ದೇಶಗಳು ಅಮೆರಿಕದ ಡೋಂಗಿ 'ಭಯೋತ್ಪಾದನೆ ವಿರುದ್ಧದ ಹೋರಾಟ'ದಲ್ಲಿ ಕೈಜೋಡಿಸಿದ್ದವು. ಫ್ರಾನ್ಸ್ ಹೊರತುಪಡಿಸಿದರೆ ಅಮೆರಿಕದ ತಂತ್ರಕ್ಕೆ ಬೆಂಬಲ ನೀಡಿದ ಎಲ್ಲ ದೇಶಗಳ ಆಡಳಿತಗಳು ಅಲ್ಲಿನ ಜನತೆಯಿಂದ ಛೀಮಾರಿ ಹಾಕಿಸಿಕೊಂಡಿವೆ. ಇದಕ್ಕೆ ಜಾರ್ಜ್ ಬುಷ್ ಸಹ ಹೊರತಾಗಿಲ್ಲ. ಅಲ್ಲಿನ ಸಂಸತ್‌ಗೆ ನಡೆದ ಚುನಾವಣೆಯಲ್ಲಿ ಅವರ ಪಕ್ಷ ಹೀನಾಯ ಸೋಲು ಅನುಭವಿಸಿದೆ.

ಕ್ಷಿಪ್ರ ಕ್ರಾಂತಿಯ ಮೂಲಕ ಅಧಿಕಾರ ಕಬಳಿಸಿದ ಜನರಲ್ ಪರ್ವೇಜ್ ಮುಷರಫ್ ಅಧಿಕಾರದಲ್ಲಿ ಉಳಿಯಲು ಏನೆಲ್ಲಾ ತಂತ್ರಗಳನ್ನು ಬಳಕೆ ಮಾಡಿದರು. 'ಸಂವಿಧಾನಕ್ಕೇ' ತಿದ್ದುಪಡಿಯನ್ನೂ ಮಾಡಿದರು. ಕೊನೆಗೂ ಜನತೆಯ ತೀರ್ಪಿಗೆ ಶರಣಾಗಬೇಕಾಯಿತು. ಅಂತಿಮವಾಗಿ ಪ್ರಜಾಪ್ರಭುತ್ವ ವಿಜಯ ಸಾಧಿಸಿತು. ಈ ಗೆಲವು ಪಾಕಿಸ್ತಾನ ಜನತೆಯದು ಮಾತ್ರವಲ್ಲ. ಪ್ರಜಾಪ್ರಭುತ್ವವನ್ನು ಪ್ರೀತಿಸುವ ಇಡೀ ಜಗತ್ತಿನ ಜನತೆಯ ಗೆಲುವಾಗಿದೆ.

ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯಾಗುವುದನ್ನು ತಡೆಯಲು ಅಲ್ಲಿನ ಮೂಲಭೂತವಾದಿ, ಸರ್ವಾಧಿಕಾರಿ ಪಕ್ಷಗಳು ತೀವ್ರತರವಾದ ಕಾನೂನು ಬಾಹಿರ ಕೃತ್ಯಗಳಲ್ಲಿ ತೊಡಗಿದ್ದವು. ಪ್ರಾಣವನ್ನೂ ಲೆಕ್ಕಿಸದೆ ಪ್ರಜಾಪ್ರಭುತ್ವ ಸ್ಥಾಪನೆಗೆ ಮುಂದಾದ ಬೆನಜೀರ್ ಭುಟ್ಟೋರನ್ನು ಸರ್ವಾಧಿಕಾರಿ ಆಡಳಿತ ಮತ್ತು ಧಾರ್ಮಿಕ ಮೂಲಭೂತವಾದಿಗಳು ಬಲಿ ತೆಗೆದುಕೊಂಡರು. ಭುಟ್ಟೋ ಹತ್ಯೆ, ಆರ್ಥಿಕ ಬಿಕ್ಕಟ್ಟನ್ನು ವಿರೋಧಿಸಿ ಪ್ರಜಾಪ್ರಭುತ್ವ ಸ್ಥಾಪನೆಗೆ ಮುಂದಾದ ಜನತೆ ಸಂಸತ್ ಚುನಾವಣೆಗಳಲ್ಲಿ ಅಧಿಕಾರಸ್ಥರನ್ನು ಪಕ್ಷಗಳನ್ನು ಸೋಲಿಸಿದ್ದಾರೆ.

ಭುಟ್ಟೋ ನೇತೃತ್ವದ ಪಾಕಿಸ್ತಾನ ಪೀಪಲ್ಸ್ ಪಕ್ಷ (ಪಿಪಿಪಿ) 80ಕ್ಕೂ ಹೆಚ್ಚು ಸ್ಥಾನಗಳನ್ನು ಗಳಿಸುವ ಮೂಲಕ ಅತ್ಯಂತ ದೊಡ್ಡಪಕ್ಷವಾಗಿದ್ದು, ಮಾಜಿ ಪ್ರಧಾನಿ ನವಾಜ್ ಷರೀಫ್‌ರ ಪಾಕಿಸ್ತಾನ್ ಮುಸ್ಲಿಮ್ ಲೀಗ್ (ಎನ್) 66 ಸ್ಥಾನಗಳಲ್ಲಿ ಜಯಗಳಿಸುವ ಮೂಲಕ ಎರಡನೇ ದೊಡ್ಡ ಪಕ್ಷವಾಗಿದೆ. ಮುಷರಫ್ ಬೆಂಬಲಕ್ಕೆ ನಿಂತಿದ್ದ ಪಿಎಂಎಲ್-ಕ್ಯೂ ಮೂರನೆ ಸ್ಥಾನಕ್ಕೆ ದೂಡಲ್ಪಟ್ಟಿದೆ.

**ಮುಂದಿನ ಪ್ರಕ್ರಿಯೆ**

ಪ್ರಜಾಪ್ರಭುತ್ವ ಸರ್ಕಾರ ಸ್ಥಾಪಿಸಬೇಕೆಂಬ ಏಕೈಕ ಉದ್ದೇಶದಿಂದ ಪ್ರಮುಖ ವಿರೋಧ ಪಕ್ಷಗಳಾಗಿರುವ ಭುಟ್ಟೋ ರವರ ಪಿಪಿಪಿ ನವಾಜ್ ಷರೀಫ್‌ರ ಪಿಎಂಎಲ್-ಎನ್ ಮೈತ್ರಿ ಮಾಡಿಕೊಳ್ಳಲು ಮುಂದಾಗಿವೆ. ಮಾಜಿ ಪ್ರಧಾನಿ ನವಾಜ್ ಷರೀಫ್ ಮತ್ತು ಭುಟ್ಟೋ ಪತಿ ಆಸಿಫ್ ಜರ್ದಾರಿ ಸಂಸತ್ ಸದಸ್ಯರಲ್ಲದ ಕಾರಣದಿಂದಾಗಿ ಪಿಪಿಪಿ ಹಿರಿಯ ಉಪಾಧ್ಯಕ್ಷ ಮಖ್‌ದುಮ್ ಅಮಿನ್ ಫಹೀಮ್ ಹೆಸರು ಪ್ರಧಾನಿ ಸ್ಥಾನಕ್ಕೆ ಪ್ರಮುಖವಾಗಿ ಕೇಳಿಬರುತ್ತಿದೆ. ಈ ಮಧ್ಯೆ, ಮುಷರಫ್ ಬೆಂಬಲಕ್ಕೆ ನಿಂತಿದ್ದ ಪಿಎಂಎಲ್-ಕ್ಯೂ ಅಧಿಕಾರಕ್ಕಾಗಿ ಪಿಪಿಪಿ ಜೊತೆ ಹೊಂದಾಣಿಕೆ ಮಾಡಿಕೊಳ್ಳಲು ತೆರೆಮರೆಯ ಪ್ರಯತ್ನಗಳನ್ನು ನಡೆಸಿದೆಯಾದರೂ ಅಂತಹ ಪ್ರಯತ್ನಗಳನ್ನು ಪಿಪಿಪಿ ಸಾರಾಸಗಟಾಗಿ ತಿರಸ್ಕರಿಸಿದೆ.

ಮುಷರಫ್ ಅಧ್ಯಕ್ಷ ಸ್ಥಾನ ತ್ಯಜಿಸಬೇಕೆಂದು ಚುನಾವಣೆಗೆ ಮೊದಲೇ ಎಲ್ಲ ಪಕ್ಷಗಳು ಒತ್ತಾಯಿಸಿದ್ದವು. ಜನತೆ ತನ್ನ ವಿರುದ್ಧ ತೀರ್ಪು ನೀಡಿದರೆ ತ್ಯಜಿಸುವುದಾಗಿ ಮುಷರಫ್ ಹೇಳಿದ್ದರು. ಫಲಿತಾಂಶ ತನ್ನ ವಿರುದ್ಧ ಬಂದರೂ ಅಧಿಕಾರ ತ್ಯಜಿಸಲು ಇಷ್ಟವಿಲ್ಲದ ಮುಷರಫ್ ರಾಗ ಬದಲಿಸಿದ್ದು ದೇಶದ ಹಿತದೃಷ್ಟಿಯಿಂದ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡೋಣ ಎನ್ನುತ್ತಾ ಮೇಕೆ ಮೂತಿಗೆ ತುಪ್ಪ ಸವರುವ ಕೆಲಸದಲ್ಲಿ ತೊಡಗಿದ್ದಾರೆ. ಜಗತ್ತಿನ ದೊಡ್ಡಣ್ಣ ಅಮೆರಿಕದ ಈ ಫಲಿತಾಂಶದ ಕುರಿತು ತುಟಿ ಬಿಚ್ಚಿಲ್ಲ. ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ತನ್ನೊಂದಿಗೆ ಕೈಜೋಡಿಸಿದ್ದ ಎಲ್ಲ ಪಕ್ಷಗಳು ಒಂದೊಂದಾಗಿ ಮಣ್ಣು ಮುಕ್ಕುತ್ತಿರುವುದರೊಂದಿಗೆ ಅಮೆರಿಕದಲ್ಲಿ ಉಂಟಾಗಿರುವ ಆರ್ಥಿಕ ಬಿಕ್ಕಟ್ಟಿನಿಂದ ತಲ್ಲಣಿಸಿರುವ ಜಾರ್ಜ್ ಬುಷ್ ಪ್ರತಿಕ್ರಿಯಿಸುವ ತಾಕತ್ತನ್ನೇ ಕಳೆದುಕೊಂಡಿದ್ದಾರೆ.

**ಅಪಾಯ – ಆತಂಕ**

ವಿದೇಶಿ ಮಾರುಕಟ್ಟೆ ಮೇಲೆ ಭಾರತ



ಸಂಪೂರ್ಣವಾಗಿ ಅವಲಂಬಿತವಾಗಿಲ್ಲ. ಹಾಗಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಉದ್ಭವಿಸಿರುವ, ಅದರಲ್ಲೂ ವಿಶೇಷವಾಗಿ ಅಮೆರಿಕದಲ್ಲಿ ಉಂಟಾಗಿರುವ ಆರ್ಥಿಕ ಬಿಕ್ಕಟ್ಟಿನಿಂದ ಅಲ್ಪಸ್ವಲ್ಪ ಉಸಿರಾಡುತ್ತಿದೆ. ಆದರೆ ಪಾಕಿಸ್ತಾನದ ಆರ್ಥಿಕತೆ ಶೇಕಡ 70ಕ್ಕು ಹೆಚ್ಚು ವಿದೇಶಿ ಮಾರುಕಟ್ಟೆಯನ್ನು ಅವಲಂಬಿಸಿದೆ. ಅದರಲ್ಲೂ ವಿಶೇಷವಾಗಿ ಅಮೆರಿಕ ಮಾರುಕಟ್ಟೆಯನ್ನು ಹೆಚ್ಚಾಗಿ ಅವಲಂಬಿಸಿದೆ. ಅಮೆರಿಕದಲ್ಲಿ ಉಂಟಾಗಿರುವ ಆರ್ಥಿಕ ಬಿಕ್ಕಟ್ಟಿಗೆ ಪಾಕಿಸ್ತಾನ ಬೆಲೆ ತೆರಲೇಬೇಕು. ನಿತ್ಯಬಳಕೆ ವಸ್ತುಗಳು, ಆಹಾರ ಪದಾರ್ಥಗಳು, ಅಡಿಗೆ ಅನಿಲ, ಸೀಮೆ ಎಣ್ಣೆ ದರಗಳು ಗಗನ ಮುಟ್ಟಿವೆ. ಆರ್ಥಿಕ ಬಿಕ್ಕಟ್ಟಿನಿಂದ ಜನತೆ ಒಪ್ಪೊತ್ತಿನ ಊಟಕ್ಕೂ ಪರದಾಡುವಂತಾಗಿದೆ. ಮುಷರಫ್ ಸೋಲಲು ಕಾರಣವಾದ ಅಂಶಗಳಲ್ಲಿ ಇದೂ ಒಂದಾಗಿದೆ. ಪಾಕಿಸ್ತಾನದ ಮುಂದೆ ಹಿಮಾಲಯದಷ್ಟು ಆರ್ಥಿಕ ಸಮಸ್ಯೆ ಇದೆ. ಹೊಸ ಸರ್ಕಾರ ಇಲ್ಲಿ ಎಡವಿದರೆ ಮತ್ತೊಂದು ಕ್ಷಿಪ್ರಕ್ರಾಂತಿಯನ್ನು ತಳ್ಳಿಹಾಕುವಂತಿಲ್ಲ. ಜನತೆಯ ಪ್ರಬಲ ಇಚ್ಛೆ

ಚುನಾವಣೆಗೆ ಮೊದಲೇ ಮಾಧ್ಯಮಗಳ ಮೇಲೆ ಮುಷರಫ್ ನಿಷೇಧ ಹೇರಿದ್ದರು. ಅದೇ ಸಂದರ್ಭದಲ್ಲಿ ಬೆನಜೀರ್ ಹತ್ಯೆಯೂ ಸಂಭವಿಸಿತು. ಇದರಿಂದಾಗಿ ಯಾವ ರಾಜಕೀಯ ಮುಖಂಡರು ಸಹ ಸಕ್ರಿಯವಾಗಿ ಚುನಾವಣೆ ಪ್ರಚಾರದಲ್ಲಿ ಪಾಲ್ಗೊಂಡಿರಲಿಲ್ಲ. ಚುನಾವಣೆ ಹಿಂದಿನ ದಿನ ಪಿಪಿಪಿ ಪಕ್ಷದ ಕಚೇರಿ ಮುಂಭಾಗದಲ್ಲಿ ನಡೆದ ಆತ್ಮಾಹುತಿ ದಾಳಿಯಲ್ಲಿ 46ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದರು. ದಕ್ಷಿಣ ವಜೀರಿಸ್ತಾನದಲ್ಲಿ ನಡೆದ ದಾಳಿಯಲ್ಲಿ ಅಭ್ಯರ್ಥಿ ಸೇರಿದಂತೆ 14 ಮಂದಿ ಮೃತಪಟ್ಟಿದ್ದರು. ಕೆಲವು ಮುಖಂಡರು ಎರಡು ಮೂರು ಬಹಿರಂಗ ಸಭೆಗಳನ್ನು ಸಂಘಟಿಸಿದ್ದನ್ನು ಬಿಟ್ಟರೆ ಯಾರೂ ದೇಶಾದ್ಯಂತ ಪ್ರವಾಸ ಕೈಗೊಂಡಿರಲಿಲ್ಲ. ಅಂತಿಮ ಕ್ಷಣದವರೆಗೂ ಚುನಾವಣೆ ನಡೆಯುತ್ತದೆಯೋ ಇಲ್ಲವೊ ಎಂಬ ಭೀತಿ ತಲೆದೋರಿತ್ತು. ಇದೇ ಸಂದರ್ಭದಲ್ಲಿ ಚುನಾವಣೆಯಲ್ಲಿ ನೇರವಾಗಿ ತೊಡಗಿಸಿಕೊಳ್ಳುವ ಪ್ರಯತ್ನಗಳನ್ನು ಸೈನ್ಯ ನಡೆಸಿತು. ಆದರೆ ಜನತೆಯ ಪ್ರಬಲ ವಿರೋಧದಿಂದಾಗಿ ಕೊನೆಕೊನೆಗೆ ಹಿಂದ ಸರಿಯಿತು. ಹಾಗೊಮ್ಮೆ ನಡೆದಿದ್ದಲ್ಲಿ ಮುಷರಫ್ ತನ್ನೆಲ್ಲ ಕೈಚಳಕ ತೋರಿಸುತ್ತಿದ್ದರು ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ.

ಈ ಚುನಾವಣೆಯನ್ನು ಮುಷರಫ್ ಎಂದೂ ಮರೆಯುವಂತಿಲ್ಲ. ಏಕೆಂದರೆ ಮತದಾನ ನಡೆದ ಫೆಬ್ರವರಿ 18 ಅವರ ಪತ್ನಿ ಸೆಹಬಾ ಮತ್ತು ಪ್ರೀತಿಯ ಮತ್ರಿ ಆಯಲಾ ಜನ್ಮದಿನವಾಗಿತ್ತು. ಚುನಾವಣೆ ಫಲಿತಾಂಶವೇ ಜನ್ಮದಿನದ ಉಡುಗೊರೆ ಎಂದು ವಚನ ನೀಡಿದ್ದರು. ಆದರೆ ಜನತೆ ನೀಡಿದ ಉಡುಗೊರೆಯೇ ಬೇರೆ. ಅವರ ಸರ್ವಾಧಿಕಾರವನ್ನು ಸ್ಪಷ್ಟವಾಗಿ ತಿರಸ್ಕರಿಸಿದರು.

ಒಟ್ಟಾರೆ ಈ ಫಲಿತಾಂಶಗಳು ಮಿಲಿಟರಿ ಸರ್ವಾಧಿಕಾರತ್ವಕ್ಕೆ ಜನತೆಯ ತಿರಸ್ಕಾರವಾಗಿದೆ. ಮತ್ತು ಪಾರ್ಲಿಮೆಂಟರಿ ಪ್ರಜಾಪ್ರಭುತ್ವಕ್ಕೆ ಅವರ ಬದ್ಧತೆ ತೋರಿದ್ದಾರೆ. ಇದು ಪೂರ್ಣ ಪ್ರಜಾತಂತ್ರದತ್ತ ಸಾಗಬೇಕು. ಹಾಗೆಯೇ ಭಾರತ - ಪಾಕ್ ಸಂಬಂಧಗಳ ಸುಧಾರಣೆಯಲ್ಲಿ ಸರಿಯಾದ ಹೆಜ್ಜೆಯನ್ನು ಇರಿಸಬೇಕು.

– ಅಪ್ಪು


# ಜಗತ್ತಿನ ಬೆಳವಣಿಗೆಗಳು.....

ಪುಟ 11 ರಿಂದ

ವಿರೋಧವಾದುದು. ಮಾತ್ರವಲ್ಲ. ಅದು ಕಾರ್ಯಸಾಧ್ಯವಾದ ವ್ಯವಸ್ಥೆಯೂ ಅಲ್ಲ. ಅದರ ಕಬಂಧ ಬಾಹುಗಳಲ್ಲಿ ಜಾಗತಿಕ ಆರ್ಥಿಕ ತತ್ತರಿಸುತ್ತಿದೆ. ಅದನ್ನು ಕಾರ್ಯಸಾಧ್ಯ ಮಾಡಲು ಅಮೆರಿಕ, ಅಂತರಿಕವಾಗಿ ಮತ್ತು ಅಭಿವೃದ್ಧಿಶೀಲ ದೇಶಗಳ ಶೋಷಣೆಯನ್ನು ತೀವ್ರಗೊಳಿಸುವ ಮತ್ತು ವಿಶ್ವದೆಲ್ಲೆಡೆ ಆರ್ಥಿಕ ಸಂಪನ್ಮೂಲಗಳನ್ನು ವಶಪಡಿಸಿಕೊಳ್ಳುವ ಮೂಲಕ ಪ್ರಯತ್ನಿಸಿದೆ. ಅದು ಅಸಾಧ್ಯ ಅಥವಾ ಕಷ್ಟಸಾಧ್ಯ ಆದಾಗ, ದಿಗ್ಬಂಧನಗಳು ಮತ್ತು ನಿರ್ಬಂಧಗಳು ಮುಂತಾದ ಬಲಪ್ರಯೋಗದ ವಿಧಾನಗಳು, ಹಾಗೂ ನೇರ ಮಿಲಿಟರಿ ಮಧ್ಯಪ್ರವೇಶದ ಮಾತ್ರ ನಡೆಸಿದೆ. 'ಭಯೋತ್ಪಾದನೆ ಮೇಲೆ ಯುದ್ಧ'ದ ಹೆಸರಲ್ಲಿ ತಾನೇ ಭಯೋತ್ಪಾದಕ ಯುದ್ಧವನ್ನು ಇಡೀ ಜಗತ್ತಿನ ಮೇಲೆ ಸಾರಿದೆ.

ಅಮೆರಿಕ 'ಏಕಮಾತ್ರ ಸೂಪರ್ ಪವರ್' ಆಗಿ ಮುಂದುವರೆಯಲು ಶತಪ್ರಯತ್ನ ಮಾಡುತ್ತಿದೆ. ಆದರೆ ಹಣಕಾಸು ಬಂಡವಾಳ-ನಿರ್ದೇಶಿತ ಜಾಗತೀಕರಣದ ಅಸಮರ್ಥತೆ, ಅಮೆರಿಕಾದ ಮಿಲಿಟರಿ ಹಸ್ತಕ್ಷೇಪದ ಮಿತಿಗಳು, ಲ್ಯಾಟಿನ್ ಅಮೆರಿಕದಲ್ಲಿ ಎಡ ಶಕ್ತಿಗಳ ವಿಜಯ, ಯುರೋಪು ಮತ್ತು ಇತರೆಡೆ ಸಾಮ್ರಾಜ್ಯಶಾಹಿ ಜಾಗತೀಕರಣ ಹೊರಿಸುವ ಆರ್ಥಿಕ ನೀತಿಗಳಿಗೆ ವಿರೋಧ ಮತ್ತು ಚೀನಾ ಹಾಗೂ ಇತರ ಪ್ರಮುಖ ಅಭಿವೃದ್ಧಿಶೀಲ ದೇಶಗಳ ಹೆಚ್ಚುತ್ತಿರುವ ಆರ್ಥಿಕ ಶಕ್ತಿ - ಇವೆಲ್ಲ ಒಂದು ಬಹುಧ್ರುವೀಯ ಜಗತ್ತಿಗೆ ಅನುಕೂಲಕರವಾದ ಪರಿಸ್ಥಿತಿಗಳನ್ನು ಸೃಷ್ಟಿಸುತ್ತಿವೆ. ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆ ಈಗ ಬಿಕ್ಕಟ್ಟಿನ ಪ್ರಮಾಣ ತಲುಪಿದೆ. ಇದು ಮಳೆ, ತಾಪಮಾನಗಳಲ್ಲಿ ವಿಪರೀತ ಏರುಪೇರು, ನೆರೆ-ಬರಗಳ ಮೂಲಕ ಕೃಷಿಯ ಮೇಲೆ ಅವಲಂಬಿಸಿದ ಬಡದೇಶಗಳ ಕೋಟ್ಯಾಂತರ ಬಡವರನ್ನು ಹೆಚ್ಚಾಗಿ ತಟ್ಟಲಿದೆ. ನಮ್ಮ ನೆರೆಹೊರೆಯ ದಕ್ಷಿಣ ಏಶ್ಯಾದ ದೇಶಗಳಲ್ಲೂ ಅಮೆರಿಕ ಮೂಗು ತೂರಿಸಲು ಪ್ರಯತ್ನಿಸುತ್ತಿದೆ. ಪಾಕಿಸ್ತಾನ, ನೇಪಾಳಗಳಲ್ಲಿ ಪ್ರಜಾಪ್ರಭುತ್ವ ಮನಃಸ್ಥಾಪನೆಗೆ ನಡೆದ ಸಫಲ ಹೋರಾಟವನ್ನು ವಿಫಲಗೊಳಿಸಿ ತನ್ನ ಬಾಲಬಡುಕರಾದ ಸರ್ವಾಧಿಕಾರಿಗಳನ್ನು ಗಟ್ಟಿಗೊಳಿಸಲು ಪ್ರಯತ್ನಿಸುತ್ತಿದೆ.

ಇಂತಹ ಸಂದರ್ಭಗಳಲ್ಲಿ ವಿಶ್ವಾದ್ಯಂತ ಸಾಮ್ರಾಜ್ಯಶಾಹಿ-ವಿರೋಧಿ ಶಕ್ತಿಗಳನ್ನು ಬಲಪಡಿಸಲು, ರಾಷ್ಟ್ರೀಯ ಸಾರ್ವಭೌಮತೆಯನ್ನು ರಕ್ಷಿಸಿಕೊಳ್ಳುವ ಹೋರಾಟಗಳಿಗೆ ಮತ್ತು ಸಾಮ್ರಾಜ್ಯಶಾಹಿ ಯುದ್ಧಗಳ ವಿರುದ್ಧವಾದ ಹೋರಾಟಗಳಿಗೆ ಸೌಹಾರ್ದ ವ್ಯಕ್ತಪಡಿಸಲು ಪ್ರಯತ್ನಗಳ ತುರ್ತು ಅಗತ್ಯ ಇದೆ. ಜಗತ್ತಿನಾದ್ಯಂತ ಯುದ್ಧ-ವಿರೋಧಿ ಜನಭಾವನೆಗಳು ಮತ್ತು ವಿಶ್ವವ್ಯಾಪಿ ಜಾಗತೀಕರಣ-ವಿರೋಧಿ ಪ್ರತಿಭಟನೆಗಳನ್ನು ಸಂಗಮಗೊಳಿಸಿ ಒಂದು ಬೃಹತ್ ಸಾಮ್ರಾಜ್ಯಶಾಹಿ-ವಿರೋಧಿ ಜನಾಂದೋಲನವಾಗಿ ಮಾಡಬೇಕು. ಭಾರತೀಯ ಜನತೆಯ ಸಾಮ್ರಾಜ್ಯಶಾಹಿ-ವಿರೋಧಿ ಭಾವನೆಗಳನ್ನು ಜಾಗೃತಗೊಳಿಸುವುದನ್ನು ಮತ್ತು ಭಾರತ ಸರಕಾರ ಬಹುಧ್ರುವೀಯತೆಯನ್ನು ಪ್ರೋತ್ಸಾಹಿಸುವಲ್ಲಿ, ಅಲಿಪ್ತ ಆಂದೋಲನವನ್ನು ರಕ್ಷಿಸುವಲ್ಲಿ ಒಂದು ಸ್ವೈರ್ಯಪೂರ್ಣ ಪಾತ್ರವನ್ನು ವಹಿಸುವಂತೆ ಒತ್ತಡವನ್ನು ಮುಂದುವರೆಸಬೇಕು. ಭಾರತವು ಅಮೆರಿಕದ ಪ್ರಾದೇಶಿಕ ಪೋಲೀಸು ಪ್ಯಾದೆ ಆಗುವುದನ್ನು ದೃಢವಾಗಿ ವಿರೋಧಿಸಬೇಕು. ಭಾರತೀಯ ಜನಗಳ ನಡುವೆ ಇರುವ ಸಾಮ್ರಾಜ್ಯಶಾಹಿ-ವಿರೋಧಿ ಪ್ರಜ್ಞೆಯನ್ನು ಬಲಪಡಿಸಬೇಕು.




# ಅಮೆರಿಕಾದ ಬೇಹುಗಾರಿಕೆ ಉಪಗ್ರಹ ಸ್ಫೋಟದ ಸುತ್ತ ಅನುಮಾನದ ಹುತ್ತ

ಮೊನ್ನೆಯಷ್ಟೆ ಅಮೇರಿಕಾ ತನ್ನ ಬೇಹುಗಾರಿಕೆ ಉಪಗ್ರಹವೊಂದನ್ನು ಹೊಡೆದು ಸ್ಫೋಟಗಳಿಸಿದೆ. ಪೆಸಿಫಿಕ್ ಸಾಗರದ ತನ್ನ ನೌಕಾನೆಲೆಯಿಂದ ಚಿಮ್ಮಿದ ಎಸ್‌ಎಮ್-3 ಎಂದು ಕರೆಯಲಾಗುವ ಕ್ಷಿಪಣಿಯು ತಾನು ಹಾರಿದ ಮೂರೇ ನಿಮಿಷಗಳಲ್ಲಿ ಅಂತರಿಕ್ಷದಲ್ಲಿ 247ಕಿ.ಮೀ ದೂರದಲ್ಲಿದ್ದ ಉಪಗ್ರಹವನ್ನು ಸ್ಫೋಟಗೊಳಿಸಿತು. ಸುಮಾರು 2 ಟನ್ ತೂಕವಿದ್ದು ಒಂದು ಬಸ್ಸಿನ ಗಾತ್ರವಿದ್ದ ಈ ಬೇಹುಗಾರಿಕೆ ಉಪಗ್ರಹವನ್ನು 2006ರಲ್ಲಿ ಅಮೇರಿಕಾ ಉಡಾವಣೆ ಮಾಡಿತ್ತು. ಈ ಉಪಗ್ರಹವು ಉಡಾವಣೆ ಮಾಡಿದ ಕೆಲವೇ ಕ್ಷಣಗಳಲ್ಲಿ ನಿಯಂತ್ರಣ ಕಳೆದುಕೊಂಡು ನಿರುಪಯುಕ್ತವೆನಿಸಿತ್ತು. ಉಪಗ್ರಹದಲ್ಲಿ ಅತ್ಯಾಧುನಿಕವಾಗಿ ಛಾಯಾಚಿತ್ರಗಳನ್ನು ತೆಗೆಯಬಲ್ಲ ಉಪಕರಣಗಳಿದ್ದುವಾದರೂ ಅದರ ಕಂಪ್ಯೂಟರ್ ತಕ್ಷಣದಲ್ಲೇ ಕೆಟ್ಟುಹೋಗಿ ನಿಷ್ಕ್ರಿಯಗೊಂಡಿತ್ತು ಮತ್ತು ಭೂಮಿಯೆಡೆಗೆ ಧಾವಿಸಿ ಬರುತ್ತಿತ್ತು.




ಅಂತರಿಕ್ಷಕ್ಕೆ ಹಾರಿಬಿಡುವ ಹಲವಾರು ಉಪಗ್ರಹಗಳ ಪೈಕಿ ಕೆಲವು ತಾಂತ್ರಿಕ ದೋಷಗಳಿಂದಾಗಿ ನಿಯಂತ್ರಣ ಕಳೆದುಕೊಂಡು ನಿರುಪಯುಕ್ತವೆನಿಸಿಕೊಳ್ಳುತ್ತವೆ. ಇಂತಹ ನಿರುಪಯುಕ್ತ ಉಪಗ್ರಹಗಳನ್ನು ಅಂತರಿಕ್ಷದಲ್ಲೇ ಸ್ಫೋಟಿಸಿ ಅಥವಾ ಇತರೆ ಉಪಗ್ರಹ ಮತ್ತು ಸಂವಹನ ವ್ಯವಸ್ಥೆಗಳಿಗೆ ಮಾರಕವಾಗದಂತೆ ನಾಶಗೊಳಿಸಲಾಗುತ್ತದೆ. ಹೀಗೆ ನಿರುಪಯುಕ್ತ ಉಪಗ್ರಹಗಳನ್ನು ಅಂತರಿಕ್ಷದಲ್ಲೇ ನಾಶಗೊಳಿಸುವ ವಿಜ್ಞಾನ ಕೂಡ ಅಭಿವೃದ್ಧಿ ಹೊಂದುತ್ತಿದ್ದು, ಕೇವಲ ಬೆರಳೆಣಿಕೆಯಷ್ಟು ರಾಷ್ಟ್ರಗಳು ಅದನ್ನು ಯಶಸ್ವಿಯಾಗಿ ಬಳಸುತ್ತಿವೆ.

ಉಪಗ್ರಹವನ್ನು ಸ್ಫೋಟ ಗೊಳಿಸಿದ್ದೇಕೆ?

ಅದರಲ್ಲಿ 450 ಕೆಜಿ ತೂಕದ ವಿಷಕಾರಿಯಾದ 'ಹೈಡ್ರಜೀನ್' ಎಂಬ ಇಂಧನವಿದ್ದುದ್ದರಿಂದ ಈ ಉಪಗ್ರಹವು ಭೂಮಿಗೆ ಬೀಳುವ ಮೊದಲೇ ಅದನ್ನು ಸ್ಫೋಟಗೊಳಿಸದಿದ್ದಲ್ಲಿ, ಭೂಮಿಯ ವಾತಾವರಣದ ಮೇಲೆ ಆ ಇಂಧನವು ತೀವ್ರತರದ ದುಷ್ಪರಿಣಾಮ ಬೀರುತ್ತಿತ್ತು. ಆದ್ದರಿಂದ ಇದನ್ನು ಆಗಸದಲ್ಲೇ ತಡೆಹಿಡಿದು ಸ್ಫೋಟಗೊಳಿಸಲಾಗಿದೆಯೆಂದು ಅಮೇರಿಕಾದ ಬೇಹುಗಾರಿಕಾ ಸಂಸ್ಥೆ ಪೆಂಟಗಾನ್ ತಿಳಿಸಿದೆ. 'ಹೈಡ್ರಜೀನ್'ನ್ನು ರಾಕೆಟ್ ಮತ್ತು ಇತರೆ ಅಂತರಿಕ್ಷ ನೌಕೆಗಳಲ್ಲಿ ಇಂಧನವಾಗಿ ಬಳಸಲಾಗುತ್ತದೆ: ಇದು ಅತ್ಯಂತ ವಿಷಕಾರಿ ಮತ್ತು ಅಪಾಯಕಾರಿ ರಾಸಾಯನಿಕ ವಸ್ತುವೆನಿಸಿದೆ.

ಅಮೇರಿಕಾದ ಕುಂಟುನೆಪದ ಹಿಂದೆ ಹಲವು ಅನುಮಾನಗಳು:

ಭೂಮಿಯ ವಾತಾವರಣ ಮತ್ತು ಜನರನ್ನು ಅಪಾಯದಿಂದ ರಕ್ಷಿಸುವ ಸಲುವಾಗಿ



ಉಪಗ್ರಹವನ್ನು ತಾನು ಹೊಡೆದುರುಳಿಸಬೇಕಾಯಿತು ಎಂದು ಅಮೇರಿಕಾ ಹೇಳಿಕೊಂಡರೂ, ಇದರ ಹಿನ್ನೆಲೆಯಲ್ಲಿ ಹಲವಾರು ಅನುಮಾನಗಳು ಮೂಡಿಬಂದಿವೆ. ಏಕೆಂದರೆ, ಭೂಮಿಯಲ್ಲಿ ಶೇ. 30ರಷ್ಟು ಭಾಗದಲ್ಲಿ ಮಾತ್ರ ಮನುಷ್ಯರು ವಾಸಿಸುತ್ತಿದ್ದು ಇತರೆ ಶೇ. 70 ಭಾಗ ಜಲಾವೃತವಾಗಿರುವುದರಿಂದ ಉಪಗ್ರಹವು ಜನವಸತಿಗಳ ಮೇಲೆ ಬೀಳುವ ಸಾಧ್ಯತೆಯೂ ಇರಲಿಲ್ಲ ಹಾಗೂ ನಿಷ್ಕ್ರಿಯಗೊಂಡ ಉಪಗ್ರಹಗಳು ಭೂಮಿ ತಲುಪುವ ಮೊದಲೇ ತಂತಾನೇ ಭಸ್ಮಗೊಳ್ಳುವುದರಿಂದ, ಅಂಥಹವುಗಳಿಂದ ಉಂಟಾಗುತ್ತಿದ್ದ ಅಪಾಯವೂ ತೀರಾ ಕಡಿಮೆ ಇತ್ತು ಎನ್ನಲಾಗುತ್ತಿದೆ.

ತನ್ನ ಬೇಹುಗಾರಿಕಾ ಉಪಗ್ರಹವು ಇತರೆ ರಾಷ್ಟ್ರಗಳ ಕೈಗೆ ಸಿಗದಂತೆ ಮಾಡುವ ಯತ್ನವಿದೆಂದು ಕೆಲವು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಕ್ಷಿಪಣಿ-ನಾಶ ತಂತ್ರಜ್ಞಾನ:

ಶತ್ರು ದೇಶಗಳಿಂದ ತನ್ನ ದೇಶದ ಮೇಲೆ ಬಂದೆರಗುವ ಕ್ಷಿಪಣಿಗಳನ್ನು ಅವು ಗುರಿ ತಲುಪುವ ಮೊದಲೇ ನಾಶಗೊಳಿಸುವ ತಂತ್ರಜ್ಞಾನಕ್ಕೆ ಕ್ಷಿಪಣಿ ರಕ್ಷಣಾ ವ್ಯವಸ್ಥೆ ಅಥವಾ ಕ್ಷಿಪಣಿ-ನಾಶ ತಂತ್ರಜ್ಞಾನ ಎಂದು ಕರೆಯುತ್ತಾರೆ. ಅಂತಹ ತಂತ್ರಜ್ಞಾನವನ್ನು ಅಮೇರಿಕಾ ಅಭಿವೃದ್ಧಿಗೊಳಿಸುತ್ತಿರುವುದಕ್ಕೆ ಹಲವು ರಾಷ್ಟ್ರಗಳು ವಿರೋಧ ವ್ಯಕ್ತಪಡಿಸುತ್ತಿದ್ದು, ಇದರಿಂದಾಗಿ ದೇಶದೇಶಗಳ ನಡುವೆ ಶಸ್ತ್ರಾಸ್ತ್ರ ಪೈಪೋಟಿ ಮೇರೆ ಮೀರುತ್ತದೆಂದು ಹೇಳುತ್ತಿವೆ. ಉಪಗ್ರಹವು ಅದು ಭೂಮಿಗೆ ಬಂದು ತಲುಪುವ ಮೊದಲೇ ಭಸ್ಮಗೊಳಿಸುವ ತಂತ್ರಜ್ಞಾನವು ಕ್ಷಿಪಣಿ-ನಾಶ ತಂತ್ರಜ್ಞಾನಕ್ಕೆ ಅತಿ ಸಮೀಪದ್ದಾಗಿರುವ ಹಿನ್ನೆಲೆಯಲ್ಲಿ ಕ್ಷಿಪಣಿ-ನಾಶ ತಂತ್ರಜ್ಞಾನವನ್ನು ಪರೀಕ್ಷಿಸಲು ಅಮೇರಿಕಾ ಈ ಸಂದರ್ಭವನ್ನು ಬಳಸಿಕೊಂಡಿದೆ ಎಂದು ರಷ್ಯಾ ಮತ್ತು ಚೀನಾಗಳು ಪ್ರತಿಕ್ರಿಯಿಸಿವೆ. ಅಮೇರಿಕಾ ತನ್ನ ರಾಷ್ಟ್ರೀಯ ಕ್ಷಿಪಣಿ-ನಾಶ ತಂತ್ರಜ್ಞಾನವನ್ನು ಪರೀಕ್ಷಿಸಲು ಮತ್ತು ಇತರೆ ದೇಶಗಳ ಸಂವಹನ ಮತ್ತು ಬೇಹುಗಾರಿಕಾ ಉಪಗ್ರಹಗಳನ್ನು ಹೊಡೆದುರುಳಿಸಲು ಈ ಕ್ರಮಕೈಗೊಂಡಿದೆ ಎಂದು ಆಪಾದಿಸಿವೆ.

ಅಂತರಿಕ್ಷಕ್ಕೆ ಅಮೇರಿಕಾ ನ್ಯೂಕ್ಲಿಯರ್ ವಸ್ತುಗಳ ರವಾನೆ?

ಅಮೇರಿಕಾ ಹೊಡೆದುರುಳಿಸಿದ ಉಪಗ್ರಹದಲ್ಲಿ ನ್ಯೂಕ್ಲಿಯರ್ ವಸ್ತುಗಳಿರುವ ಅನುಮಾನವಿದೆಯೆಂದು ರಷ್ಯಾ ತಿಳಿಸಿರುವುದು ಇನ್ನಷ್ಟು ಆತಂಕ ಮೂಡಿಸಿದೆ. ಉಪಗ್ರಹದಲ್ಲೇಕೆ ನ್ಯೂಕ್ಲಿಯರ್ ವಸ್ತುಗಳನ್ನು ಅಮೇರಿಕಾ ಅಡಗಿಸಿಟ್ಟಿತ್ತೆಂಬುದು ಈಗ ಎಲ್ಲರ ಮುಂದಿರುವ ಪ್ರಶ್ನೆ.

# ಆಟಗಾರರ ನಿರ್ಲಜ್ಜ ಹರಾಜು : ಕ್ರಿಕೆಟ್ ಹೊಸ ಅವತಾರ

ಕ್ರಿಕೆಟ್‌ನ ಅವತಾರ ಬದಲಾಗಿದೆ. ಅದರ ಈಗಿನ ಹೊಸ ಮುಖ ಐಪಿಎಲ್. ಕ್ರಿಕೆಟಿಗರ ಹರಾಜು ಮೂಲಕ ಅದೀಗ ಎಲ್ಲರ ಗಮನ ಸೆಳೆದಿದೆ, ಮಾತ್ರವಲ್ಲ ವಿಶ್ವವೇ ಬೆಚ್ಚಿ ಬೀಳುವಂತೆ ಮಾಡಿದೆ.

ವಿಶ್ವದ ಹೆಸರಾಂತ ಕ್ರಿಕೆಟ್ ಆಟಗಾರರನ್ನು ಬಿಡ್ ಮೂಲಕ 3 ವರ್ಷಗಳಿಗೆ ಖರೀದಿಸುವುದು ಹರಾಜಿನ ಮುಖ್ಯಾಂಶ. ಹರಾಜಿನ ಹಣವನ್ನು ಪ್ರತೀ ವರ್ಷ ಆಯಾ ಆಟಗಾರನಿಗೆ ನೀಡಲಾಗುವುದು. ಅದಕ್ಕೆ ಪ್ರತಿಯಾಗಿ ಆ ಆಟಗಾರರು ಮುಂದಿನ ಮೂರು ವರ್ಷಗಳ ತನಕ ಐಪಿಎಲ್ ನಿಗದಿಪಡಿಸಿದ ಕಡೆಗಳಲ್ಲಿ 20-20 ಪಂದ್ಯವನ್ನು ಆಡಬೇಕು. ಅದೂ ಪ್ರೈಂ ಟೈಮ್‌ನಲ್ಲಿ.

ಬಿಡ್‌ನಲ್ಲಿ ಉದ್ಯಮಿಗಳು:

ಹೈದರಾಬಾದ್, ಚನ್ನೈ, ಕೋಲ್ಕತಾ, ದೆಹಲಿ, ಬೆಂಗಳೂರು, ಮೊಹಾಲಿ, ಜೈಪುರ, ಮುಂಬೈ- ಹೀಗೆ ಎಂಟು ಐಪಿಎಲ್ ತಂಡಗಳು. ಈ ತಂಡಗಳನ್ನು ನಿಯಂತ್ರಿಸುವವರು ಉದ್ಯಮಿಗಳು. ಪ್ರತೀ ತಂಡಕ್ಕೆ ಅವರೇ ಒಡೆಯರು. ಸಿನಿಮಾ ತಾರೆಯರಾದ ಶಾರುಖ್, ಪ್ರೀತಿ ಜಿಂಟಾ ಕೂಡಾ ಈ ಉದ್ಯಮಕ್ಕೆ ಕೈ ಹಾಕಿದ್ದಾರೆ. ಬಿಡ್‌ನಲ್ಲಿ ಅವರಿಗೆ ಬೇಕಾದ ಆಟಗಾರರನ್ನು ಖರೀದಿಸುವವರು ಈ ಉದ್ಯಮಿಗಳೇ.

ಖರೀದಿಯಲ್ಲಿ ಪೈಪೋಟಿ

ಮಹೇಂದ್ರ ಸಿಂಗ್ ಧೋನಿ ಅತೀ ಹೆಚ್ಚು ಮೊತ್ತಕ್ಕೆ ಮಾರಾಟವಾದ ಆಟಗಾರ. ಆತನ ರೇಟ್ ಆರು ಕೋಟಿ ರೂ. ಜನಾಂಗೀಯ ನಿಂದನೆ ಮೂಲಕ ಕುಖ್ಯಾತಿ ಪಡೆದ ಸೈಮಂಡ್ಸ್ 5.4 ಕೋಟಿ ರೂ.ಗೆ ಮಾರಾಟವಾಗಿ ತನ್ನ ನಾಯಕನನ್ನೇ ಮೀರಿಸಿದ್ದಾನೆ. ನವತಾರೆ ಇಶಾಂತ್ ಶರ್ಮಾ, ಇರ್ಫಾನ್ ಪಠಾಣ್, ಉತ್ತಪ್ಪ, ರೋಹಿತ್ ಶರ್ಮಾ ಉತ್ತಮ ಮೊತ್ತಕ್ಕೆ ಮಾರಾಟವಾದರು. ಲಂಕಾ, ಆಸ್ಟ್ರೇಲಿಯಾ, ಆಫ್ರಿಕಾ ಆಟಗಾರರಿಗೂ ಬಿಡ್‌ದಾರರಿಂದ ಡಿಮ್ಯಾಂಡ್ ಇತ್ತು. ಸಚಿನ್, ಸೌರವ್, ದ್ರಾವಿಡ್, ಸೆಹ್ವಾಗ್, ಯುವರಾಜ್ ಐಕಾನ್ ಆಟಗಾರರು. ಅವರಿಗೆ ಅತಿ ಹೆಚ್ಚು ಸಂಭಾವನೆ ಪಡೆಯುವ ತಂಡದ ಆಟಗಾರನಿಗಿಂತ ಶೇ. 15 ಹೆಚ್ಚು ಹಣ.

ಕುಣಿದ ಕುರುಡು ಕಾಂಚಾಣ

ಅಷ್ಟೊಂದು ದುಡ್ಡು ಸುರಿದ ಮೇಲೆ ಉದ್ಯಮಿಗಳು ಸುಮ್ಮನೆ ಕೂರುತ್ತಾರೆಯೇ? ಖಂಡಿತಾ ಇಲ್ಲ. ಹಾಕಿದ ಹಣಕ್ಕೆ ಬಡ್ಡಿ ಸಮೇತ ಲಾಭ ಮಾಡಿಯೇ ಮಾಡುತ್ತಾರೆ. ತಾನು ಖರೀದಿಸಿದ ಆಟಗಾರನ ಜನಪ್ರಿಯತೆ ಮತ್ತು ಆತನ ಆಟದಿಂದ ಕ್ರಿಕೆಟ್ ಎಂಬ ಕ್ರೀಡೆಯನ್ನೂ ಲಾಭದಾಯಕ ಉದ್ಯಮವನ್ನಾಗಿ ಪರಿವರ್ತಿಸುತ್ತಾನೆ.

ಹಿನ್ನೆಲೆ

ಕ್ರಿಕೆಟ್‌ನಲ್ಲಿ ಅಧಿಪತ್ಯ ಹೊಂದಿದ್ದ ಬಿಸಿಸಿಐಗೆ ತಿರುಗೇಟು ನೀಡಲು ಝೀ ವಾಹಿನಿ ಐಸಿಎಲ್ ಎಂಬ ಸಂಸ್ಥೆಯನ್ನು ಹುಟ್ಟುಹಾಕಿತು. ಕ್ರಿಕೆಟ್‌ನಲ್ಲಿ ಹರಿಯುವ ಹಣಕ್ಕೆ ಕಟ್ಟೆ ಹಾಕಲು ಆ ಚಾನೆಲ್ ನಡೆಸಿದ ಪ್ರಯತ್ನ ಇದು. ಸಂಸ್ಥೆಯ ಮುಖ್ಯಸ್ಥ ಕಪಿಲ್ ದೇವ್ ವಿಶ್ವದ ಖ್ಯಾತ ಕ್ರಿಕೆಟಿಗರನ್ನು ಸೆಳೆಯಲು


ಕ್ರಿಕೆಟಿಗರನ್ನುಕೊಂಡ ಧಣಿಗಳು

ಇನ್ನಿಲ್ಲದ ಪ್ರಯತ್ನ ಮಾಡಿದ್ದು, ಆ ರಾಷ್ಟ್ರದ ಕ್ರಿಕೆಟ್ ಸಂಸ್ಥೆಗಳು ಅದಕ್ಕೆ ಅಡ್ಡಿ ಮಾಡಿದ್ದು ಈಗ ಇತಿಹಾಸ.

ಇಂಡಿಯನ್ ಕ್ರಿಕೆಟ್ ಲೀಗ್ ಮೇಲುಗೈ ಸಾಧಿಸುವುದನ್ನು ತಡೆಯಲು ಬಿಸಿಸಿಐ ಐಪಿಎಲ್‌ಗೆ ಜನ್ಮ ನೀಡಿತು. ತನ್ನ ಎದುರಾಳಿಯನ್ನು ಮಣಿಸಲು ಹೊಸ ಹೊಸ ಕಾರ್ಯತಂತ್ರ ರೂಪಿಸಿತು. ಅದರ ಹಣ ಮಾಡುವ ಈ ಉದ್ಯಮದ ಕನಸಿನ ಕೂಸೇ 20-20.

ಫಲ ಕೊಟ್ಟ ತಂತ್ರ

ಈ ಪ್ರಕ್ರಿಯೆ ಮಧ್ಯೆ ಟೀಂ ಇಂಡಿಯಾ 20-20 ವಿಶ್ವಕಪ್ ಗೆದ್ದುಕೊಂಡಿತು. ಭಾರತದಲ್ಲಿ 20-20 ಪಂದ್ಯ ಜನಪ್ರಿಯವೂ ಆಯಿತು. ಭಾರತದ ಯುವ ಪಡೆಗೆ ಭವ್ಯ ಸ್ವಾಗತವೂ ಸಿಕ್ಕಿತು. ಬೀಸಿದ್ದೇ ಹೊಡೆತ, ಓಡಿದ್ದೇ ರನ್ ಎಂಬಂತಾಯಿತು ಈ ಕ್ರಿಕೆಟ್‌ನ ಪರಿಸ್ಥಿತಿ. ನಾಲ್ಕೈದು ಗಂಟೆಗಳಲ್ಲಿ ಮುಗಿಯುವ ಈ ಪಂದ್ಯವನ್ನು ನೋಡಲು ಸ್ಟೇಡಿಯಂ ಹಾಗೂ ಟಿವಿ ಮುಂದೆ ಜನಸಾಗರವೇ ಸೇರುವಂತಾಯಿತು. ಕ್ರಿಕೆಟ್ ಪಂದ್ಯದ ಪ್ರಸಾರ ಮಾರಾಟ ಹಕ್ಕು ಮತ್ತು ಜಾಹೀರಾತಿನ ಮೂಲಕ ಹಣದ ಹೊಳೆಯೇ ಹರಿಯುವಂತಾಯಿತು.

ಆ ಕ್ರಿಕೆಟ್ ಪಂದ್ಯದ ಪ್ರಸಾರ ಮಾರಾಟ ಹಕ್ಕು ಮತ್ತು ಜಾಹೀರಾತಿನಲ್ಲಿ ಉದ್ಯಮಿಗಳಿಗೂ, ಐಪಿಎಲ್ ಪಾಲು.

ಬದಲಾಗಲಿದೆ ಕ್ರಿಕೆಟ್:

ಕೆಲವರಿಗೆ ಈ ಬೆಳವಣಿಗೆ ಖುಷಿ ಕೊಟ್ಟಿರಬಹುದು, ನಿವೃತ್ತಿಯ ಅಂಚಿನಲ್ಲಿರುವ ಖ್ಯಾತ ಆಟಗಾರರಿಗೆ ಆಸರೆ ಸಿಗಬಹುದು. ಆದರೆ, ಕೆಲವೇ ಆಟಗಾರರ ಆಟಕ್ಕೆ ಬಿಲಿಯನ್‌ಗಟ್ಟಲೆ ಹಣವನ್ನು ಹೂಡಲಾಗುತ್ತದೆ. ಜಾಹೀರಾತುದಾರರು ಅಂತಿಮವಾಗಿ ಗ್ರಾಹಕರನ್ನೇ ಬಲಿಪಶು ಮಾಡುತ್ತಾರೆ. ಇನ್ನು ಜೂಜು, ಬೆಟ್ಟಿಂಗ್ ಪಿಡುಗು ದೈತ್ಯಾಕಾರ ಪಡೆದರೆ ಅಚ್ಚರಿ ಇಲ್ಲ.

**ಜಗದಗಲ**

ಶರತ್‌ಚಂದ್ರ


# ಕೊಸೊವೊ : ಇನ್ನೊಂದು ಕೃಪಾಪೋಷಿತ ದೇಶದ ರಚನೆ

ಕೊನೆಗೂ ಯುಗೊಸ್ಲಾವಿಯ ದೇಶವನ್ನು ಛಿದ್ರಗೊಳಿಸುವ ಪಾಶ್ಚಿಮಾತ್ಯ ಶಕ್ತಿಗಳ ಹುನ್ನಾರ ಪೂರ್ಣಗೊಂಡಿದೆ. ಯುಗೊಸ್ಲಾವಿಯಾದ ಭಾಗವಾಗಿದ್ದ ಸರ್ಬಿಯಾದ ಒಂದು ಪ್ರಾಂತ್ಯ ಕೊಸೊವೊ ಪ್ರತ್ಯೇಕಗೊಂಡು ಸ್ವಾತಂತ್ರ್ಯ ಘೋಷಿಸಿದೆ. ಅಮೆರಿಕಾ, ಬ್ರಿಟನ್, ಫ್ರಾನ್ಸ್ ಮತ್ತು ಜರ್ಮನಿ ಅದಕ್ಕೆ ಮಾನ್ಯತೆ ನೀಡುವ ಆಶಯ ವ್ಯಕ್ತಪಡಿಸಿವೆ. ಸುಮಾರು ಎರಡು ದಶಕಗಳ ಹಿಂದೆ ಆಗ ಯುಗೊಸ್ಲಾವಿಯಾದ ಭಾಗವಾಗಿದ್ದ ಸ್ಲೊವೇನಿಯಾ ಮತ್ತು ಕ್ರೊವೇಶಿಯಾಕ್ಕೆ ಜರ್ಮನಿ ಮಾನ್ಯತೆ ನೀಡುವುದರೊಂದಿಗೆ ಯುಗೊಸ್ಲಾವಿಯಾದ ಛಿದ್ರೀಕರಣ ಪ್ರಕ್ರಿಯೆಗೆ ಕುಮ್ಮಕ್ಕು ನೀಡಿತ್ತು. ಮುಂದುವರೆದು ಅಮೆರಿಕನ್ ಮತ್ತು ಯುರೋಪಿಯನ್ ಶಕ್ತಿಗಳು ಆ ದೇಶವನ್ನು ಮತ್ತಷ್ಟು ಒಡೆದು ಬೊಸ್ನಿಯ ಮತ್ತು ಹೆರ್ಝೆಗೊವಿನಾವನ್ನು ಪ್ರತ್ಯೇಕಿಸಿದವು. ಇದಕ್ಕಾಗಿ ನಾಟೋ ಪಡೆಗಳು ಸರ್ಬಿಯಾದ ಮೇಲೆ ಬಾಂಬುಗಳ ಸುರಿಮಳೆಗರೆದವು, ಕೊನೆಗೆ ಅಲ್ಲಿಯ ಮುಖಂಡ ಸ್ಲೊಬೊದನ್ ಮಿಲೊಸೆವಿಕ್‌ರನ್ನು ಪದಚ್ಯುತಗೊಳಿಸಿದವು.

**ಹೇರಳ ಸಂಪನ್ಮೂಲ ಸುಲಿಗೆಯ ತಂತ್ರಗಳು**

ಯುಗೊಸ್ಲಾವಿಯಾದ ವಿಘಟನೆಯು ಬಾಲ್ಕನ್ ಪ್ರದೇಶದ ಮೇಲೆ ಹತೋಟಿ ಹೊಂದಲು ಅಮೆರಿಕಾ ಆರಂಭಿಸಿದ ಯೋಜನೆಯ ಒಂದು ಭಾಗ. ಏಕೆಂದರೆ ಇದು ಕ್ಯಾಸ್ಪಿಯನ್ ಜಲಾನಯನ ಪ್ರದೇಶದಲ್ಲಿನ ಹೇರಳ ಇಂಧನ ಸಂಪನ್ಮೂಲಗಳ ಪ್ರದೇಶ.

ಕೊಸೊವೊ ಸ್ವಾತಂತ್ರ್ಯ ಘೋಷಿಸಿದಾಗ ನಾಟೋದ 16000 ಪಡೆಗಳು ಆ ಪ್ರಾಂತ್ಯದಲ್ಲಿ ನೆಲೆಗೊಂಡಿದ್ದವು. ವಾಸ್ತವವಾಗಿ ಇದಕ್ಕೆ ಅನುವು




ಮಾಡಿಕೊಡಲೆಂದೇ ಅವನ್ನು ಅಲ್ಲಿ ನೆಲೆಗೊಳಿಸಲಾಗಿತ್ತು. ಇದು 1999ರಲ್ಲಿ ಸರ್ಬಿಯದ ವಿರುದ್ಧ ಅಮೆರಿಕ ಮತ್ತು ನಾಟೊ ನಡೆಸಿದ ಯುದ್ಧದ ನಂತರ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ನಿರ್ಣಯಗಳಿಗೂ ವಿರುದ್ಧವಾದದ್ದು ಎಂಬುದು ಗಮನಾರ್ಹ.

> ಸಾಮ್ರಾಜ್ಯಶಾಹಿ ಶಕ್ತಿಗಳ ಕುಮ್ಮಕ್ಕಿನಿಂದ ಸರ್ಬಿಯಾ ದೇಶವನ್ನು ತುಂಡರಿಸಿ ಕೊಸೊವೊದ ರಚನೆ ಅಲ್ಪಸಂಖ್ಯಾತ ಜನವಿಭಾಗಗಳಿರುವ ದೇಶಗಳ ಸಾರ್ವಭೌಮತೆ ಮತ್ತು ಮೂಲಭೂತ ಅಂತರ್‍ರಾಷ್ಟ್ರೀಯ ಕಾನೂನಿಗೆ,ವಿಶ್ವದ ಶಾಂತಿ ಮತ್ತು ಸ್ಥಿರತೆಗೆ ಸವಾಲಾಗಿರುವ ಒಂದು ಪ್ರಶ್ನೆ.
> ಇದರಲ್ಲಾದರೂ ಯುಪಿಎ ಸರಕಾರ ಸ್ಪಷ್ಟ ನಿಲುವು ತಳೆಯಬೇಕಾಗಿತ್ತು.

ಪಾಶ್ಚಿಮಾತ್ಯ ಶಕ್ತಿಗಳು ತಮ್ಮ ಪ್ರಭಾವದ ಹೊರಗಿದ್ದ ದೇಶಗಳ ಮೇಲೆ ತಮ್ಮ ನವ-ಉದಾರವಾದಿ ನೀತಿಗಳನ್ನು ಹೇರಿ ಸಂಪತ್ತು ಸೂರೆಗೊಳ್ಳಲು ತೊಂಭತ್ತರ ದಶಕದಲ್ಲಿ ಒಂದು ಹೊಸ ತಂತ್ರವನ್ನು ಅನುಸರಿಸಿದವು. ಅದೆಂದರೆ ಜನಾಂಗೀಯ ತಿಕ್ಕಾಟಗಳನ್ನು ಪ್ರಚೋದಿಸುವುದು, ನಂತರ 'ಮಾನವೀಯ ಮಧ್ಯಪ್ರವೇಶ'ದ ಹೆಸರಿನಲ್ಲಿ ಆಯಾ ದೇಶಗಳ ಸಾರ್ವಭೌಮತೆಯನ್ನು ಉಲ್ಲಂಘಿಸಿ ಮೂಗು ತೂರಿಸುವುದು. ಆಗಿನ ಅಮೆರಿಕನ್ ವಿದೇಶಾಂಗ ಕಾರ್ಯದರ್ಶಿ ಮ್ಯಾಡೆಲಿನ್ ಆಲ್‌ಬ್ರೈಟ್‌ರಂತೂ ದೇಶಗಳ ಸಾರ್ವಭೌಮತೆಯೆಂಬುದು 19ನೇ ಶತಮಾನದ ಪರಿಕಲ್ಪನೆ, ಈಗಿನ ಕಾಲಕ್ಕೆ ಅನುಗುಣವಾಗಿ ಅದನ್ನು ಮಿತಗೊಳಿಸಬೇಕಾಗಿದೆ ಎಂದೂ ಪ್ರತಿಪಾದಿಸಿದರು! ಆ 'ಮಾನವೀಯ ಮಧ್ಯಪ್ರವೇಶ' ದಿಂದ ಈಗಿನ 'ಭಯೋತ್ಪಾದನೆಯ ಮೇಲೆ ಸಮರ'ದವರೆಗೆ ಈ ಪಾಶ್ಚಿಮಾತ್ಯ ಶಕ್ತಿಗಳು ತಮ್ಮ ಕೃಪಾಪೋಷಿತ ಪ್ರದೇಶಗಳನ್ನು ನಿರ್ಮಿಸಿಕೊಳ್ಳಲು ಮಿಲಿಟರಿ ಮಧ್ಯಪ್ರವೇಶ ನಡೆಸುವ ಹಕ್ಕನ್ನು ತಾವೇ ಘೋಷಿಸಿಕೊಂಡಿವೆ. ಇರಾಕನ್ನು ಅತಿಕ್ರಮಿಸಿ ವಶಪಡಿಸಿಕೊಳ್ಳುವ ಮೊದಲು ಅದರ ಉತ್ತರ ಭಾಗದಲ್ಲಿ ಕುರ್ದಿಶ್ ಪ್ರದೇಶದಲ್ಲಿ ತಮ್ಮ ಕೃಪಾಪೋಷಿತ ಪ್ರದೇಶವನ್ನು ನಿರ್ಮಿಸಿಕೊಂಡದ್ದು ಈ ಸಾಮ್ರಾಜ್ಯಶಾಹಿ ತತ್ವದ ಮೇಲೆಯೇ.

ತಮಾಷೆಯೆಂದರೆ ಉತ್ತರ ಐರ್ಲೆಂಡ್ ತನ್ನಿಂದ ಪ್ರತ್ಯೇಕವಾಗಬಾರದೆಂದು ಐರಿಷ್ ರಿಪಬ್ಲಿಕನ್ ಆರ್ಮಿ( ಐರ್ಲೆಂಡಿನ ಗಣತಂತ್ರ ಸೇನೆ)ಯ ವಿರುದ್ಧ ಬಹಳ ವರ್ಷಗಳಿಂದ ಯುದ್ಧ ನಡೆಸುತ್ತಿರುವ ಬ್ರಿಟನ್




ದೇಶದ ರಾಯಭಾರಿ ಪ್ರತ್ಯೇಕಗೊಂಡ ದೇಶಕ್ಕೆ ಭೇಟಿಯಿತ್ತು ಬೆಂಬಲ ಸೂಚಿಸಿದ ಮೊದಲಿಗ ಎನಿಸಿಕೊಂಡಿದ್ದಾನೆ! ತಮ್ಮ ದೇಶದಲ್ಲಿ ತಪ್ಪೆನಿಸಿದ್ದು ಅದು ಹೇಗೆ ಬೇರೆ ದೇಶಗಳಲ್ಲಿ ಸರಿಯಾಗುತ್ತದೋ! ನಿಜ, ಎಲ್ಲ ಯುರೋಪಿಯನ್ ದೇಶಗಳಲ್ಲೂ ಈ ಬಗ್ಗೆ ಏಕಮತವಿಲ್ಲ. ಕನಿಷ್ಟ ಆರು ದೇಶಗಳು - ಗ್ರೀಸ್, ಸ್ಪೇನ್, ಸೈಪ್ರಸ್, ಸ್ಲೊವಾಕಿಯ, ಬುಲ್ಗಾರಿಯ ಮತ್ತು ರೊಮೇನಿಯ ಕೊಸೊವೊದ ಸ್ವಾತಂತ್ರ್ಯ ಘೋಷಣೆಯನ್ನು ವಿರೋಧಿಸಿವೆ.

ಸರ್ಬಿಯ ಮತ್ತು ರಷ್ಯಾವಂತೂ ಈ ಪ್ರಯತ್ನವನ್ನು ಬಲವಾಗಿ ವಿರೋಧಿಸಿವೆ, ಇದನ್ನು ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಒಯ್ಯುವುದಾಗಿ ಹೇಳಿವೆ. ಚೀನಾ ಕೂಡ ಈ ಬಗ್ಗೆ ಗಂಭೀರ ಆತಂಕ ವ್ಯಕ್ತಪಡಿಸಿದೆ, ಇದು ಅಂತರಾಷ್ಟ್ರೀಯ ಸಂಬಂಧಗಳನ್ನು ತಟ್ಟುವ ಮತ್ತು ಭದ್ರತಾ ಮಂಡಳಿಯ ಅಧಿಕಾರಕ್ಕೆ ಸವಾಲು ಹಾಕುವ ಪ್ರಶ್ನೆ ಎಂದಿದೆ.

**ಭಾರತ ಯಾಕೆ ಬಚ್ಚಿಟ್ಟುಕೊಂಡಿತು?**

ಭಾರತವೂ ಸೇರಿದಂತೆ ಏಶ್ಯಾದ ಹಲವು ದೇಶಗಳೂ ಪ್ರತ್ಯೇಕತಾವಾದಿ ಬೇಡಿಕೆಗಳನ್ನು ಎದುರಿಸುತ್ತಿವೆ. ಇಂಡೋನೇಷ್ಯಾ, ಶ್ರೀಲಂಕಾದಂತಹ ದೇಶಗಳು ಈ ಸ್ವಾತಂತ್ರ್ಯ ಘೋಷಣೆಯ ಮತ್ತು ಅದಕ್ಕೆ ಮಾನ್ಯತೆ ನೀಡುವ ಪಾಶ್ಚಿಮಾತ್ಯ ದೇಶಗಳ ಕ್ರಮವನ್ನು ವಿರೋಧಿಸಿವೆ. ಭಾರತವೂ ಸರ್ಬಿಯಾವನ್ನು ತುಂಡರಿಸುವುದನ್ನು ಸ್ಪಷ್ಟವಾಗಿ ವಿರೋಧಿಸಬೇಕಾಗಿತ್ತು. ಇದರ ಹಿಂದೆ ಗಂಭಿರ ಕಾನೂನು ವಿಷಯಗಳು ಇವೆ, ಅವನ್ನು ಅಧ್ಯಯನ ಮಾಡಬೇಕಾಗಿದೆ ಎಂದು ಭಾರತ ಸರಕಾರದ ವಕ್ತಾರರು ಹೇಳಿದ್ದಾರೆ. ಎಲ್ಲಾ ದೇಶಗಳ ಸಾರ್ವಭೌಮತೆಯನ್ನು ಮತ್ತು ಪ್ರಾದೇಶಿಕ ಸಮಗ್ರತೆಯನ್ನು ಸಂಪೂರ್ಣವಾಗಿ ಗೌರವಿಸಬೇಕು ಎಂದು ಅವರು ಹೇಳಿದ್ದಾರೆ. ಇದು ಸರ್ಬಿಯಾಕ್ಕೆ ಕೂಡಾ ಅನ್ವಯವಾಗುವುದಿಲ್ಲವೇ, ಹಾಗಿರುವಾಗ ಈ 'ಗಂಭೀರ ಕಾನೂನು ವಿಷಯಗಳ' ಹಿಂದೆ ಬಚ್ಚಿಟ್ಟುಕೊಳ್ಳುವ ಅಗತ್ಯವಾದರೂ ಏನು ಎಂಬ ಪ್ರಶ್ನೆ ಏಳುತ್ತದೆ. ಈ ರೀತಿ ಬಹಿರಂಗವಾಗಿಯೇ ಬಲಪ್ರಯೋಗ ನಡೆಸಿ ಪ್ರಾದೇಶಿಕ ಗಡಿಗಳನ್ನು ಪುನರ‍್ರೂಪಿಸುವುದನ್ನು ನೇರವಾಗಿ ವಿರೋಧಿಸಬೇಕಾಗಿದ್ದ ಯುಪಿಎ ಸರಕಾರ ಹಾಗೆ ಮಾಡದಿರುವುದು ಅದೆರ ಒಲವು ಯಾವ ಕಡೆಗಿದೆ ಎಂಬುದನ್ನು ತೋರಿಸುತ್ತದೆ. ಯಾವುದೇ ಅಂತರ್‍ರಾಷ್ಟ್ರೀಯ ವಿಷಯದಲ್ಲಿ ತಾನು ಅಮೆರಿಕಾದ ನಿಲುವಿಗೆ ಸರಿಹೊಂದದ ನಿಲುವು ಹೊಂದಿರುವಂತೆ ಕಾಣಿಸಿಕೊಳ್ಳಬಾರದು ಎಂಬ ಅದರ ಆತಂಕವನ್ನು ಇದು ಮತ್ತೊಮ್ಮೆ ತೋರಿಸಿದೆ.ಇದು ಅಲ್ಪಸಂಖ್ಯಾತ ಜನವಿಭಾಗಗಳಿರುವ ದೇಶಗಳ ಸಾರ್ವಭೌಮತೆ ಮತ್ತು ಮೂಲಭೂತ ಅಂತರ್‍ರಾಷ್ಟ್ರೀಯ ಕಾನೂನಿಗೆ ಒಂದು ಸವಾಲಾಗಿರುವ ಪ್ರಶ್ನೆ. ಇದರಲ್ಲಾದರೂ ಯುಪಿಎ ಸರಕಾರ ಸ್ಪಷ್ಟ ನಿಲುವು ತಳೆಯಬೇಕಾಗಿತ್ತು.

**ಹೀನತೆಯ ಕೃತ್ಯ**

ಇದು ಸಾಮ್ರಾಜ್ಯಶಾಹಿ ವಿವೇಚನಾ ಹೀನತೆಯ ಹೊಚ್ಚಹೊಸ ಕೃತ್ಯ ಎಂಬುದಂತೂ ನಿಜ. ಈ ರೀತಿ ಬಾಲ್ಕನ್ ಪ್ರದೇಶದಲ್ಲಿ ಒಂದು ನಾಟೋ ಕೃಪಾಪೋಷಿತ ದೇಶದ ರಚನೆ ಈ ಪ್ರದೇಶದಲ್ಲಿ ಮತ್ತು ಆಮೂಲಕ ವಿಶ್ವದಲ್ಲಿ ಶಾಂತಿ ಮತ್ತು ಸ್ಥಿರತೆಗೆ ಒಳ್ಳೆಯ ಲಕ್ಷಣವೇನೂ ಅಲ್ಲ.

# ..ನಾಲಿಗೆಯಲ್ಲಿ ಮತ್ತೆ ನೀರೂರಿತು

ಪುಟ 16 ರಿಂದ

ವಾದುದಾಗಿತ್ತು. ಮೂಲ ಗೊಗೋಲ್ ಬರೆದ ಪಠ್ಯವನ್ನು ಕನ್ನಡಕ್ಕೆ ಅನುವಾದಿಸಿ ನಿರ್ದೇಶಿಸಿದವರು ಶ್ರೀ ನಾಗೇಂದ್ರ ಶಾ. ಕೆಲಸದ ಆಳೊಬ್ಬನು ಡಬ್ಬಲ್ ಊಟ ಮತ್ತು ಸಂಬಳದ ಆಸೆಗಾಗಿ ಇಬ್ಬರು ಯಜಮಾನರಲ್ಲಿ ಏಕಕಾಲಕ್ಕೆ ದುಡಿಯಲು ನಿಂತು ಪಜೀತಿಗೆ ಬೀಳುವುದೇ ಇದರ ವಸ್ತು. ಕಂಪನಿ ನಾಟಕಗಳು ಮತ್ತು ಬೆಳ್ಳಿ ಪರದೆಗಳು ದ್ವಂದ್ವಾರ್ಥವುಳ್ಳ ಅಶ್ಲೀಲ ಸಂಭಾಷಣೆ ಮತ್ತು ವಿಕೃತತೆ ಗಬ್ಬೆಬ್ಬಿರುವ ವಾತಾವರಣದಲ್ಲಿ "ಶಿವಶಂಭೊಶಂಕರ" ನಾಟಕವು ನಿಜವಾದ ಆರೋಗ್ಯ ಪೂರ್ಣವಾದ ಹಾಸ್ಯಕ್ಕೆ ಮಾದರಿಯೆಂಬಂತೆ ಮೂಡಿಬಂದಿದೆ. ಮುಖ್ಯ ಪಾತ್ರಧಾರಿಯ ನಟನೆಯಂತೂ ಪ್ರೇಕ್ಷಕರ ಮನವನ್ನು ಸೂರೆಗೊಂಡಿತು. ಪ್ರತಿಯೊಬ್ಬ ಕಲಾವಿದರ ತೊಡಗುವಿಕೆ ಇತ್ತಲ್ಲ, ಅದು ಎರಡು ಮುಕ್ಕಾಲು ಗಂಟೆಯ ಅವಧಿಯನ್ನು ಪ್ರೇಕ್ಷಕರಿಗೆ ಅರಿವಿಗೆ ಬರದಂತೆ ಕರೆದುಕೊಂಡು ಹೋಯಿತು.

ಸ್ಥಳೀಯ ಕಲಾವಿದರು ನೀಡಿದ "ತಾಜಮಹಲ್ ಟೆಂಡರ್" ನಾಟಕವು ಕಲಾವಿದರ ಪ್ರಥಮ ಪ್ರಯೋಗವಾದರೂ ಪರವಾ ಇಲ್ಲ, ಪರಿಶ್ರಮ ಸಾರ್ಥಕ ಎನ್ನಿಸಿತು. ಮೂಲ ಅಜಯ್ ಶುಕ್ಲಾ ಬರೆದ ಇದನ್ನು ಕನ್ನಡಕ್ಕೆ ಅನುವಾದಿಸಿದವರು ಇಟಗಿ ಈರಣ್ಣ. ಭಾರತವನ್ನು ಕಳೆದ ಅರವತ್ತು ವರ್ಷಗಳಿಂದ ಅಲುಗಾಡಿಸಿರುವ ಭ್ರಷ್ಟಾಚಾರವನ್ನೇ ವಸ್ತುವಾಗಿಸಿಕೊಂಡಿರುವ ನಾಟಕ ಹರಿದ ವ್ಯಂಗ್ಯ. ಮೊನಚುಗಳಲ್ಲೇ ವಿರಮಿಸಿದೆ. ವರ್ತಮಾನದ ಗಳಿಗೆಯಲ್ಲಿ ನಾಟಕದ ವಸ್ತು ಔಟ್ ಡೇಟೆಡೇ (ಹಳೆಯದೇ) ಏಕೆಂದರೆ ಭ್ರಷ್ಟಾಚಾರ ಇಂದು ಜೀವನ ವಿಧಾನವೆಂದೇ 'ಬಿಂಬಿತವಾಗಿದ್ದು ಅದರ ಹೊಸ ಅವತಾರಗಳು ತಲೆಯೆತ್ತಿವೆ. ಆದಾಗ್ಯೂ ಬಿದಿರುಗಳುವಿನಿಂದ ಎರಡು ಅಂತಸ್ತು ಕಟ್ಟಿ ಅದರ ಮೇಲೆ ನಡೆದಾಡಿ ಸಂಭಾಷಣೆ ಪೂರೈಸುವ ಸಾಹಸಿ ರಂಗಸಜ್ಜಿಕೆ ಹೊಸ ಕಲಾವಿದರ ಉತ್ಸಾಹವನ್ನು ಎತ್ತಿ ತೋರಿಸುತ್ತಿತ್ತು. ನಾಟಕಕ್ಕೆ ಬಳಸಿಕೊಂಡ ಕಡಕೋಳ ಮಡಿವಾಳಪ್ಪನವರ ತತ್ತ್ವಪದಗಳು ಮತ್ತು ಇತರ ಭಾವಗೀತೆಗಳು ಸಮರ್ಥ ಹಾಡುಗಾರರ ಕೊರತೆಯಿಂದಾಗಿ ಕಳೆ ಕಟ್ಟಲಿಲ್ಲ. ಸಂಗೀತ ಇಡೀ ನಾಟಕದ ಕೊರತೆಯಾಗಿತ್ತು. ಹೊಸ ಹಸಿ ಕಲಾವಿದರಿಂದ ಅಭಿನಯ ಹೊರಡಿಸು ವುದರಲ್ಲಿ ವ್ಯಸ್ತರಾದ ನಿರ್ದೇಶಕರು, ರಂಗತಜ್ಞರು ಸಂಗೀತದ ಕಡೆ ಗಮನವೇ ಹರಿಸಿದಂತೆ ಕಾಣಲಿಲ್ಲ. ಜಾನಪದ ಕತೆ ಆಧಾರಿತ "ಕಥೆಗಳ ಕಣಜ" ಮತ್ತು 'ಗೋಡೆ' ಎಂಬ ಎರಡೂ ಮಕ್ಕಳ ನಾಟಕಗಳು ಕಿರುಪ್ರದರ್ಶನವಾಗಿದ್ದವು. ಕಥೆಗಳ ಕಣಜವನ್ನು ಶ್ರೀ ಇವಿಲಿಯನ್ ಫುಲೆನ್ಸ್ ನಿರ್ದೇಶಿಸಿದರೆ, "ಗೋಡೆ" ನಾಟಕವನ್ನು ಶ್ರೀಮತಿ ವೀಣಾ ಶರ್ಮಾ ನಿರ್ದೇಶಿಸಿದ್ದರು. ರಂಗಾಯಣ ರಂಗಕಿಶೋರ ಧಾರವಾಡ ತಂಡದ ಕಲಾವಿದರು ಅಭಿನಯಿಸಿದರು.




ಅಮಾನುಲ್ಲಾ ಖಾನ್

**ಶ್ರೀಮಂತರು ಮತ್ತು ಉಳ್ಳವರ ಮಟ್ಟಿಗಂತೂ ಭಾರತದ ಪರಿಸ್ಥಿತಿ ಎಂದಿಗೂ ಇಷ್ಟು ಉತ್ತಮವಾಗಿರಲಿಲ್ಲ. ಕಲ್ಪನೆಗೂ ನಿಲುಕದ ಗಾತ್ರದಲ್ಲಿ ಕೆಲವೇ ಮಂದಿಯ ಕೈಯಲ್ಲಿ ಸಂಪತ್ತು ಕ್ರೋಢೀಕೃತವಾಗುತ್ತಿದೆ.**


# ಒಂದರೊಳಗೆರಡು ದೇಶಗಳು

ಬಹಳ ಹಿಂದೆ ಪಂಡಿತ್ ನೆಹರೂರವರು 'ಬಂಡವಾಳಶಾಹಿ ವ್ಯವಸ್ಥೆಯು ನಿರ್ಬಂಧವಿರದಿದ್ದರೆ ಶ್ರೀಮಂತರನ್ನು ಇನ್ನಷ್ಟು ಶ್ರೀಮಂತರನ್ನಾಗಿಸಿ ಬಡವರನ್ನು ಇನ್ನಷ್ಟು ಬಡವರನ್ನಾಗಿಸುತ್ತದೆ' ಎಂದು ಹೇಳಿದ್ದರು. ನೆಹರೂರವರ ಈ ತಿಳುವಳಿಕೆಗೆ ಅರ್ಥಶಾಸ್ತ್ರಜ್ಞರ ಪರಿಣತಿಯೇನೂ ಬೇಕಿಲ್ಲ. ಬರಿಯ ಸಾಮಾನ್ಯ ಜ್ಞಾನ ಸಾಕು. ನೆಹರೂರವರ ಪರಂಪರೆಯಲ್ಲೇ ಮುಂದುವರೆಯುತ್ತಿದ್ದೇವೆಂದು ಹೇಳಿಕೊಳ್ಳುವ ಮಂದಿ ನೆಹರೂರವರ ಈ ತಿಳುವಳಿಕೆಯನ್ನು ಗಾಳಿಗೆ ತೂರಿ ಮಾರುಕಟ್ಟೆ ಕೇಂದ್ರಿತವಾದ ನೀತಿಗಳನ್ನು ಬಲವಾಗಿ ಅಪ್ಪಿದ್ದಾರೆ. ಮಾರುಕಟ್ಟೆಗೆ ಲಾಭಗಳಿಸಲು ಸಾಧ್ಯವಾಗುವಂತೆ ಅನಿರ್ಬಂಧಿತ ವ್ಯವಸ್ಥೆಯ ನಿರ್ಮಾಣವೇ ಪ್ರಭುತ್ವದ ಪರಮಗುರಿಯೆಂಬ ಸಿದ್ಧಾಂತ 1991ರಿಂದ ಅನುಷ್ಠಾನವಾಗುತ್ತಿರುವ ನವ ಉದಾರೀಕರಣ ನೀತಿಯದು. ಈ ನೀತಿಗಳ ಪ್ರಥಮ ಸ್ಫೂರ್ತಿ ಶ್ರೀಮತಿ ಮಾರ್ಗರೆಟ್ ಥ್ಯಾಚರ್ ಹೇಳುವಂತೆ ಸಂಪತ್ತಿನ ನಿರ್ಮಾಣಕ್ಕೆ ಅನುಕೂಲಕರವಾದ ವ್ಯವಸ್ಥೆ ಕಲ್ಪಿಸುವುದಷ್ಟೆ ಸರ್ಕಾರದ ಕೆಲಸ ಆ ಸಂಪತ್ತಿನ ವಿತರಣೆ ಸರ್ಕಾರದ ಹೊಣೆಯಲ್ಲ. ಈ ಸಿದ್ಧಾಂತದ ಫಲಿತಾಂಶವನ್ನು ನಾವು ದೇಶದಲ್ಲಿ ದಿನೇ ದಿನೇ ಬೆಳೆಯುತ್ತಿರುವ ಅಗಾಧ ತಾರತಮ್ಯದಲ್ಲಿ ಕಾಣಬಹುದು. ಭಾರತ ಇಂದು ಒಂದರೊಳಗಿನ ಎರಡು ದೇಶ.

**ಟ್ರಿಲಿಯನ್ ಡಾಲರ್ ಕ್ಲಬ್‌ಗೆ ಭಾರತ**

ಕಳೆದೈದು ವರ್ಷಗಳಲ್ಲಿ ದೇಶದ ಜಿಡಿಪಿಯು ಸರಾಸರಿ ಶೇ.7ರ ದರದಲ್ಲಿ ಬೆಳೆದಿದೆಯೆಂಬುದು ಸತ್ಯ ಮತ್ತು ಕಳೆದೆರಡು ವರ್ಷಗಳಲ್ಲಿ ಅದು ಶೇ.9ರ ಬೆಳವಣಿಗೆ ದಾಖಲಿಸಿದೆ. 2007-08 ರಲ್ಲಿ ದೇಶದ ಒಟ್ಟು ಜಿಡಿಪಿ 42,83,040 ಕೋಟಿ ರೂ.ಗಳನ್ನು ತಲುಪಿದ್ದು ಭಾರತ ಇಂದು 'ಟ್ರಿಲಿಯನ್ ಡಾಲರ್ ಕ್ಲಬ್' ವರ್ಗಕ್ಕೆ ಸೇರಲಿದೆ. ಈ ಬಗ್ಗೆ ನಮ್ಮನ್ನಾಳುವ ಮಂದಿ ಹರ್ಷಿತರಾಗಿದ್ದಾರೆ ಮತ್ತು ನವ ಉದಾರೀಕರಣ ನೀತಿಗಳಿಂದಾಗಿ ಭಾರತ ಆರ್ಥಿಕ ಮಹಾನ್ ಶಕ್ತಿಯಾಗಿ ರೂಪುಗೊಳ್ಳುತ್ತಿದೆಯೆಂದು ಹೆಮ್ಮೆಯಿಂದ ಬೀಗುತ್ತಿದ್ದಾರೆ. ಈ ಏಕಮುಖಿ ಬೆಳವಣಿಗೆಯಿಂದ ಮಿಲಿಯಾಂತರ ಜನತೆಯ ಬವಣೆಯ ಬದುಕಿನಲ್ಲಿ ಯಾವುದೇ ಸುಧಾರಣೆಯಾಗಿಲ್ಲ ಎನ್ನುವುದನ್ನು ಈ ಮಂದಿ ಅನುಕೂಲಕರವಾಗಿ ಮರೆತಿದ್ದಾರೆ.

ರಾಷ್ಟ್ರೀಯ ಮಾದರಿ ಸರ್ವೇಕ್ಷಣೆಯ 62ನೇ ಸುತ್ತಿನ ಸರ್ವೇಕ್ಷಣೆಯು ಜನರಿ 31, 2008ರಂದು ತನ್ನ ವರದಿ ಸಲ್ಲಿಸಿದೆ. ಈ ವರದಿಯು ಹೊರತಂದಿರುವ ಅಂಶಗಳು ಈ ದೇಶವನ್ನಾಳುವ ಮಂದಿಯ ಕಣ್ತೆರೆಸಬೇಕು. 2005-06 ನೇ ವರ್ಷಕ್ಕೆ ಮನೆಯೊಂದಕ್ಕೆ ಗ್ರಾಹಕ ಖರ್ಚಿನ ಸರ್ವೇಕ್ಷಣೆಯು ಹಲವಾರು ಮುಖ್ಯ ವಿಚಾರಗಳನ್ನು ಬೆಳಕಿಗೆ ತಂದಿದೆ. ಈ ವರದಿಯಂತೆ ಗ್ರಾಮಾಂತರ ಪ್ರದೇಶದ ಶೇ.19 ಕುಟುಂಬಗಳು ದಿನವೊಂದಕ್ಕೆ ರೂ.ಹನ್ನೆರಡಕ್ಕಿಂತ ಕಡಿಮೆ ಖರ್ಚು ಮಾಡುತ್ತವೆ. (2005-06ರಲ್ಲಿ ಪ್ರಚಲಿತವಿದ್ದ ಬೆಲೆಗಳ ಆಧಾರದಂತೆ) ನಗರ ಪ್ರದೇಶಗಳಲ್ಲಿ ಶೇ.22 ಕುಟುಂಬಗಳ ತಲಾ ಮಾಸಿಕ ಖರ್ಚು ರೂ.580 ಅಂದರೆ ದಿನವೊಂದಕ್ಕೆ ತಲಾ ರೂ.19 ಮಾತ್ರ. ಅರ್ಜುನ್‌ಸೇನ್ ಗುಪ್ತ ಸಮಿತಿ ವರದಿ ಮಾಡಿರುವಂತೆ ಈ ದೇಶದ ಬಹುಸಂಖ್ಯೆಯ ಜನತೆ ಅತ್ಯಂತ ನಿಕೃಷ್ಟ ರೀತಿಯಲ್ಲಿ ಬದುಕುತ್ತಿದ್ದಾರೆ ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ. ಹಣದುಬ್ಬರದ ಇಂದಿನ ದಿನಗಳಲ್ಲಿ ದಿನೇ ದಿನೇ ಆಹಾರ ಧಾನ್ಯಗಳ ಬೆಲೆ ಗಗನಕ್ಕೇರುತ್ತಿರುವಾಗ ದಿನವೊಂದಕ್ಕೆ ರೂ.12 ಅಥವಾ ರೂ.19 ಖರ್ಚು ಮಾಡುವ ಸ್ಥಿತಿಯಲ್ಲಿರುವ ಕುಟುಂಬಗಳ ಬದುಕಿನ ಸ್ಥಿತಿ ಹೇಗಿರಬಹುದು?



**ಅಪೌಷ್ಠಿಕತೆ**

ಈ ಜಗತ್ತಿನಲ್ಲೇ ಅತ್ಯಂತ ಹೆಚ್ಚು ಅಪೌಷ್ಠಿಕತೆಯಿಂದ ನರಳುವ ಮಕ್ಕಳ ಸಂಖ್ಯೆಯನ್ನು ಭಾರತ ಹೊಂದಿರುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ. ಶೇ.50ಕ್ಕಿಂತ ಹೆಚ್ಚಿನ ಕುಟುಂಬಗಳು ಕಚ್ಚಾ ಅಥವಾ ಅರೆ ಪಕ್ಕ ಮನೆಗಳಲ್ಲಿ ಬದುಕುತ್ತಿದ್ದಾರೆ. ಪ್ರಕಾಶಿಸುತ್ತಿರುವ ಭಾರತದಲ್ಲಿ ಶೇ.42 ಗ್ರಾಮಾಂತರ ಕುಟುಂಬಗಳಿಗೆ ವಿದ್ಯುಚ್ಛಕ್ತಿ ಲಭ್ಯವಿಲ್ಲ. ಅವು ಕತ್ತಲೆಯನ್ನು ಹೊಡೆದೋಡಿಸಲು ಇಂದಿಗೂ ಸೀಮೆಎಣ್ಣೆಯನ್ನೇ ಅವಲಂಬಿಸಿವೆ.

ಗ್ರಾಮಾಂತರ ಪ್ರದೇಶದಲ್ಲಿನ ಸ್ಥಿತಿಗತಿಗಳನ್ನು ಇನ್ನೊಂದು ಅಂಶದಿಂದಲೂ ಗುರುತಿಸಬಹುದು. ಒಟ್ಟು ಜಿಡಿಪಿಯಲ್ಲಿ ಕೃಷಿಯ ಕೊಡುಗೆಯು ಶೇ.24 ರಿಂದ ಶೇ.19ಕ್ಕೆ ಇಳಿದಿದೆ. 2002-03 ರಿಂದ ಕೃಷಿಯ ಬೆಳವಣಿಗೆಯ ದರವು ಶೇ.2 ಕ್ಕಿಂತ ಕಡಿಮೆ ಇದೆ. ಕೃಷಿಯು ಶೇ.60ಕ್ಕಿಂತ ಹೆಚ್ಚಿನ ಜನಸಂಖ್ಯೆಗೆ ಉದ್ಯೋಗ ಒದಗಿಸಿರುವ ಹಿನ್ನೆಲೆಯಲ್ಲಿ ಬಡತನ ಏರುತ್ತಿರುವುದು ಮತ್ತು ಬದುಕಿನ ಮಟ್ಟದಲ್ಲುಂಟಾಗಿರುವ ಸವಕಳಿ ಮತ್ತು ರೈತರ ಆತ್ಮಹತ್ಯೆಯ ಪ್ರಮಾಣವನ್ನು ಗ್ರಹಿಸುವುದು ಅಸಾಧ್ಯವೇನಲ್ಲ.

**ಇನ್ನೆಲ್ಲೂ ಇಲ್ಲ**

ಶ್ರೀಮಂತರು ಮತ್ತು ಉಳ್ಳವರ ಮಟ್ಟಿಗಂತೂ ಭಾರತದ ಪರಿಸ್ಥಿತಿ, ಎಂದಿಗೂ ಇಷ್ಟು ಉತ್ತಮವಾಗಿರಲಿಲ್ಲ. ಕಲ್ಪನೆಗೂ ನಿಲುಕದ ಗಾತ್ರದಲ್ಲಿ ಕೆಲವೇ ಮಂದಿಯ ಕೈಯಲ್ಲಿ ಸಂಪತ್ತು ಕ್ರೋಢೀಕೃತವಾಗುತ್ತಿದೆ. 1999ರಲ್ಲಿ ಭಾರತದ 100 ಅತಿ ಶ್ರೀಮಂತರ ಮೌಲ್ಯ 84 ಸಾವಿರ ಕೋಟಿಗಳಾಗಿತ್ತು. 2007ರ ವೇಳೆಗೆ 100 ಕೋಟಿಗೂ ಹೆಚ್ಚಿನ ಮೌಲ್ಯದ ಆಸ್ತಿ ಹೊಂದಿದವರ ಸಂಖ್ಯೆ 533ಕ್ಕೇರಿದ್ದರೆ ಅವರ ಒಟ್ಟು ಆಸ್ತಿಯ ಮೌಲ್ಯ 12,32,000 ಕೋಟಿಗಳು. ಚೀನಾ ಅತ್ಯಂತ ತೀವ್ರವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿದ್ದರೂ ಬಿಲಿಯನೈರ್‌ಗಳ ಸಂಖ್ಯೆ ಮತ್ತು ಅವರಲ್ಲಿ ಕೇಂದ್ರೀಕೃತವಾಗಿರುವ ಸಂಪತ್ತಿನ ಗಾತ್ರದಲ್ಲಿ ಮಾತ್ರ ಅದು ಭಾರತದ ಸಮೀಪಕ್ಕೂ ಬರಲಾರದು ಭಾರತದ ನಾಲ್ಕು ಕೋಟ್ಯಾಧಿಪತಿಗಳಾದ ಲಕ್ಷ್ಮಿ ಮಿಟ್ಟಲ್, ಅಂಬಾನಿ ಸಹೋದರರು ಮತ್ತು ಡಿಎಲ್‌ಎಫ್‌ನ ಕೆ.ಪಿ.ಸಿಂಗ್‌ರ ಸಂಪತ್ತಿನ ಮೌಲ್ಯ 40 ಅತಿ ಶ್ರೀಮಂತ ಚೀನೀಯರಿಗಿಂತ ಜಾಸ್ತಿಯೆಂದು ಅಂದಾಜು ಮಾಡಲಾಗಿದೆ (ಬಿಲಿಯನೈರ್ಸ್ ಕಬ್ಲ್-ಬ್ಯುಸಿನೆಸ್ ಸ್ಟಾಂಡರ್ಡ್) 1997ರಲ್ಲಿ ಭಾರತದಲ್ಲಿದ್ದ ಡಾಲರ್ ಬಿಲಿಯನೈರುಗಳ ಸಂಖ್ಯೆ ಕೇವಲ ಮೂರು 2006ರಲ್ಲಿ ಇದು 23ಕ್ಕೇರಿದರೆ 2007ರಲ್ಲಿ ಆ ಸಂಖ್ಯೆ 48ಕ್ಕೇರಿದೆ. ಇತ್ತೀಚಿನ ದಿನಗಳಲ್ಲಿ ಇಂತಹ ಅಗಾಧವಾದ ಸಂಪತ್ತಿನ ಕೇಂದ್ರೀಕೃತವಾದ ಉದಾಹರಣೆ ಜಗತ್ತಿನ ಇನ್ನಾವ ದೇಶದಲ್ಲೂ ಇಲ್ಲ. ಸ್ಪಷ್ಟವಾಗಿ ಆರ್ಥಿಕ ಬೆಳವಣಿಗೆಯ ಫಲವನ್ನು ಕೆಲವೇ ಶ್ರೀಮಂತರು ತಮ್ಮದನ್ನಾಗಿಸಿಕೊಂಡು ದೇಶದ ಬಹುಸಂಖ್ಯೆಯ ಜನತೆಯನ್ನು ನಿರ್ಗತಿಕರನ್ನಾಗಿಸಿ ಸಂಕಷ್ಟಕ್ಕೊಡ್ಡಿದ್ದಾರೆ.

**ಸಂಪತ್ತಿನ ಕೇಂದ್ರೀಕರಣ**

ಸಾರ್ವಜನಿಕ ವಲಯದ ಆಲೋಚನಾರಹಿತ ಖಾಸಗೀಕರಣ ಮತ್ತು ನೌಕರರ ಹಿತರಕ್ಷಣೆ ಗಾಳಿಗೊಡ್ಡಿ ದೊಡ್ಡ ಉದ್ಯಮಿಗಳಿಗೆ ನೀಡುತ್ತಿರುವ ವಿನಾಯ್ತಿಗಳೂ ಶ್ರೀಮಂತರಿಗೆ ಇನ್ನಿಲ್ಲದ ಲಾಭ ನೀಡಿವೆ. ಕಾರ್ಪೋರೇಟ್ ವಲಯದ ಲಾಭ ಇನ್ನಿಲ್ಲದಂತೆ ಹೆಚ್ಚಾಗಿದ್ದರೆ ನೌಕರರ ಕೂಲಿ ಮತ್ತು ಸಂಬಳ ಉತ್ಪಾದನಾ ವೆಚ್ಚದ ಭಾಗವಾಗಿ ಇಳಿಮುಖವಾಗಿದೆ. ಭಾರತ ಮಾದರಿ ಸರ್ವೇಕ್ಷಣೆಯ 62ನೇ ಸುತ್ತಿನ ವರದಿಯಂತೆ 2005-06 ರಲ್ಲಿ ಗ್ರಾಮೀಣ ಪ್ರದೇಶದ ಅರೆಕಾಲಿಕ ನೌಕರರ ಕೂಲಿ ದಿನವೊಂದಕ್ಕೆ ಪುರುಷರಿಗೆ ರೂ.59 ಮತ್ತು ಮಹಿಳೆಯರಿಗೆ ರೂ.38, ನಗರ ಪ್ರದೇಶದಲ್ಲಿ ಪುರುಷರಿಗೆ ರೂ.81 ಮತ್ತು ಮಹಿಳೆಯರಿಗೆ ರೂ.45 ಅರ್ಜುನ್ ಸೇನ್‌ಗುಪ್ತ ಸಮಿತಿಯ ವರದಿಯಂತೆ ದೇಶದ ಶ್ರಮಿಕರ ಶೇ.90 ರಷ್ಟಿರುವ ಅಸಂಘಟಿತ ವಲಯದ ನೌಕರರ ವೇತನವಂತೂ ಇನ್ನಷ್ಟು ಕಡಿಮೆಯಿದೆ. ದೇಶದ ಬಹುತೇಕ ರಾಜ್ಯಗಳಲ್ಲಿ ಈ ನೌಕರರಿಗೆ ದೊರೆಯುವ ದಿನಗೂಲಿ ಕಾನೂನಿನ್ವಯ ದೊರೆಯಬೇಕಿರುವ ಕನಿಷ್ಠ ವೇತನಕ್ಕಿಂತ ಕಡಿಮೆಯಿದೆ. ಆದರೆ ಕಾರ್ಪೋರೇಟ್ ವಲಯದ ವ್ಯವಸ್ಥಾಪಕ ಮಟ್ಟದ ಉನ್ನತ ಶ್ರೇಣಿಯ ಅಧಿಕಾರಿಗಳ ಸಂಬಳದಲ್ಲಿ ತೀವ್ರ ಹೆಚ್ಚಳವಾಗಿದೆ. 2007ರಲ್ಲಿ ಒಂದು ಕೋಟಿ ರೂ.ಗಳಿಗೂ ಅಧಿಕ ವೇತನಗಳಿಸುವ ಅಧಿಕಾರಿಗಳ ಸಂಖ್ಯೆ 576. 30.46 ಕೋಟಿ ರೂ. ವೇತನಗಳಿಸುವ ಮುಖೇಶ್ ಅಂಬಾನಿ ಅವರೆಲ್ಲೆಲ್ಲಾ ಅಗ್ರಗಣ್ಯ. ಈ ರೀತಿ ಅತಿ ಹೆಚ್ಚು ಸಂಬಳ ಗಳಿಸುವವರಲ್ಲಿ ಹೆಚ್ಚಿನವರು ಈ ಕಂಪನಿಗಳನ್ನು ಹುಟ್ಟು ಹಾಕಿದ ಕುಟುಂಬ ವರ್ಗದವರೇ ಎಂಬುದು ವಿಸ್ಮಯವೇನಲ್ಲ. ಹೀಗೆ ಅತ್ಯಧಿಕ ಸಂಪತ್ತಿನ ಕೇಂದ್ರೀಕರಣ ಒಂದೆಡೆಯಾದರೆ ಇನ್ನೊಂದೆಡೆ ಅತೀವ ಬಡತನ ಮತ್ತು ಹೀನಾಯ ಬದುಕು ಇದು ಭಾರತದ ಅಭಿವೃದ್ಧಿಯ ಕಥೆ. ಕುದಿಯುತ್ತಿರುವ ಅತೃಪ್ತಿ, ಅಸಮಾನತೆಯನ್ನು ಹುಟ್ಟುಹಾಕಿ, ಅದೆನ್ನಿನ್ನಷ್ಟು ಅಗಾಧಗೊಳಿಸುತ್ತಿರುವ ಆರ್ಥಿಕ ನೀತಿಗಳ ವಿರುದ್ಧ ಬಲಿಯುತ್ತಿರುವ ಅಸಹನೆ ಇವುಗಳ ನಮ್ಮನ್ನಾಳುವ ಮಂದಿಯನ್ನು ಸ್ವಲ್ಪಮಟ್ಟಿಗೆ ಅಲುಗಿಸಿದಂತಿದು. ಪ್ರಧಾನ ಮಂತ್ರಿ ಮತ್ತು ಹಣಕಾಸು ಮಂತ್ರಿ ಇಬ್ಬರೂ ಈಗ ಸರ್ವಮುಖಿ ಬೆಳವಣಿಗೆಗಳ ಕುರಿತು ಮಾತನಾಡುತ್ತಿದ್ದಾರೆ. ಬಡವರ ಮತ್ತು ಇಲ್ಲದವರ ಪರವಾಗಿ ಸರ್ಕಾರ ಮಧ್ಯಪ್ರವೇಶ ಮಾಡದೆ ಅಭಿವೃದ್ಧಿ ಸರ್ವಮುಖಿ ಹೇಗಾದೀತೆಂಬುದನ್ನವರು ಹೇಳುತ್ತಿಲ್ಲ. ಪ್ರೊ: ಪಾಲ್ ಕ್ರುಗ್‌ಮೆನ್ ಹೇಳುವಂತೆ ದೇಶದ ಅತಿ ಹೆಚ್ಚಿನ ವೇತನಗಳಿಸುವವರ ಸಂಬಳ ಮತ್ತು ಅತಿ ಕಡಿಮೆ ವೇತನಗಳಿಸುವವರ ಸಂಬಳದ ಅನುಪಾತ 1000ಕ್ಕಿಂತ ಹೆಚ್ಚಿದ್ದರೆ ಅಮೇರಿಕೆಯ ಪ್ರಜಾಪ್ರಭುತ್ವದ ಉಳಿಯಲಾರದು. ಭಾರತದಲ್ಲಿ ಈ ಅನುಪಾತ ಹಲವಾರು ಸಾವಿರಕ್ಕಿಂತ ಹೆಚ್ಚಾಗಿರುವ ಭಾರತದ ಪ್ರಜಾಪ್ರಭುತ್ವಕ್ಕೆ ಇದರಿಂದ ಅಪಾಯವಿದೆ ಇದನ್ನು ಶ್ರೀ ಮನಮೋಹನ್‌ಸಿಂಗ್ ಮತ್ತು ಚಿದಂಬರಂ ಅರಿಯುವರೇ?

---

ಟಿ.ವಿ ಮಾಧ್ಯಮ ಭೂತಕ್ಕೆ ಸಿಕ್ಕು ನಮ್ಮ ಅಜ್ಜಿಯರ ಕಥೆಗಳು ಹೇಗೆ ಕಳೆದುಹೋಗಿವೆ. ಅವುಗಳನ್ನು ಕದ್ದವರು ಯಾರು ಮತ್ತು ಹೇಗೆ ಕದಿಯಲಾಯಿತು ಇತ್ಯಾದಿ ಸಂಗತಿಗಳನ್ನು ಸಾಂಕೇತಿಕವಾಗಿ ತೋರಿಸಲಾಯಿತು. ಜಪಾನ್ ರಂಗಭೂಮಿಯ ಮಾದರಿಯಲ್ಲಿ ಬೊಂಬೆಗಳ ಮುಖವಾಡಗಳನ್ನು, ಮಾನವಪಾತ್ರಗಳನ್ನು ಬಳಸಿಕೊಂಡು ಹೊಸ ತಂತ್ರದ ಮೂಲಕ ಕಥೆ ಕಟ್ಟಲಾಗಿತ್ತು. ಯುವ ಕಲಾವಿದರು ಸಾಕಷ್ಟು ತಯಾರಿಯೊಂದಿಗೆ ದುಡಿದಿದ್ದರು. ಬೊಂಬೆಗಳೊಂದಿಗೆ ಹೆಜ್ಜೆ ಕುಣಿತವು ಸಮೀಕರಿಸಿ ಚಿತ್ತಪೂರ್ಣವಾಗಿ ಹೆಣೆಯಲಾಗಿತ್ತು.

ಇದೇ ಕಲಾವಿದರು ಪ್ರಸ್ತುತಪಡಿಸಿದ "ಗೋಡೆ" ನಾಟಕ ಒಂದು ಅದ್ಭುತ ಪ್ರಯೋಗ. ಇದೊಂದು ಅರ್ಥಪೂರ್ಣ ರೂಪಕವಾಗಿ ಮೂಡಿಬಂದಿತು. ಭಾರತದಾದ್ಯಂತ ಕೋಮುವಾದ, ಮತೀಯವಾದಗಳು ಜನಾಂಗೀಯ ಬೇಧವನ್ನು ಹುಟ್ಟುಹಾಕುತ್ತಿರುವ ಸಂದರ್ಭದಲ್ಲಿ ಮನುಷ್ಯರ ನಡುವೆ ಗೋಡೆಗಳನ್ನು ಎಬ್ಬಿಸಬೇಡಿ ಎಂದು ಹೇಳುವ ವಸ್ತು ನಿಜಕ್ಕೂ ಮನೋಜ್ಞವಾಗಿತ್ತು. ವಸ್ತು ಗಂಭೀರವೇ. ಆದರೆ ಐಡಿಯಾ ಮಾತ್ರ ತುಂಬಾ ಸರಳ. ನೀಲಿ ಮತ್ತು ಕೆಂಪು ಜನರ ನಡುವೆ ಓಡಾಡಲು ಒಂದೇ ಒಂದು ಪುಟ್ಟ ಸೇತುವೆ ಇತ್ತು. ಒಂದಾನೊಂದು ಕಾಲದಲ್ಲಿ ಅವರೆಲ್ಲ ಪರಸ್ಪರ ಸಂಬಾಳಿಸಿಕೊಂಡು ನಡೆದಾಡುತ್ತಿದ್ದರು. ಇದ್ದಕ್ಕಿದ್ದಂತೆ ಎರಡೂ ಜನಾಂಗದ ನಡುವೆ ಸೇತುವೆ ದಾಟಲು ನಾ ಮೊದಲು, ತಾ ಮೊದಲು ಪೈಪೋಟಿ ಪ್ರಾರಂಭವಾಯ್ತು. ಪೈಪೋಟಿ ಕದನವಾಯ್ತು. ಪರಿಣಾಮವಾಗಿ ಗೋಡೆ ಕಟ್ಟಲಾಯಿತು. ಆದರೆ ಎರಡೂ ಕಡೆಯ ಮಕ್ಕಳಿಗೆ ಇದರಿಂದ ಪರಸ್ಪರ ಆಟ ಆಡಲು ತೊಂದರೆ ಆಯಿತು. ದೊಡ್ಡವರ ಕಣ್ಣು ತಪ್ಪಿಸಿ ಮಕ್ಕಳು ಗೋಡೆ ಒಡೆದರು. ಗೋಡೆಯೇ ಬೇಡವೆಂದು ಕಾವಲುಗಾರನಿಗೆ ಮನವರಿಕೆ ಮಾಡಿಕೊಟ್ಟರು. ಇದಿಷ್ಟು ನಾಟಕದ ಸಾರ. ಈ ನಾಟಕದ ವೈಶಿಷ್ಟ್ಯವೆಂದರೆ ಇಡಿ ನಾಟಕದುದ್ದಕ್ಕೂ ಪ್ರೇಕ್ಷಕರೊಂದಿಗೆ ಪಾತ್ರಧಾರಿಗಳು ನೇರ ಸಂಭಾಷಣೆಗೆ ಇಳಿದದ್ದು. ಪ್ರೇಕ್ಷಕರನ್ನು ಪಾತ್ರಧಾರಿಗಳಾಗಿ ಪರಿಗಣಿಸಿದ್ದು. ಕೊನೆಯ ದೃಶ್ಯದಲ್ಲಂತೂ ಇದಿರು ಸಾಲಿನಲ್ಲಿ ಕುಳಿತಿರುವ ಮಕ್ಕಳನ್ನು ವೇದಿಕೆಗೆ ಕರೆದು ಅವರಿಂದಲೇ ಗೋಡೆಯನ್ನು ಒದ್ದು ಕೆಡಹಲು ಹಚ್ಚಿದ್ದು ತುಂಬಾ ಪರಿಣಾಮಕಾರಿಯಾಗಿತ್ತು. ಹಿಮ್ಮೇಳನದಲ್ಲಿ ಧ್ವನಿಮುದ್ರಿಕೆಗಳನ್ನು ಬಳಸಿಕೊಂಡದ್ದು ಇತ್ತು. ಒಟ್ಟಾರೆ ಎರಡೂ ಮಕ್ಕಳ ನಾಟಕಗಳು ತಾಂತ್ರಿಕ ನೈಪುಣ್ಯ ಮತ್ತು ಸರಳ ಸಾಂಕೇತಿಕ ವಸ್ತುವಿನಿಂದಾಗಿ ಗಮನಸೆಳೆದವು. ಒಟ್ಟಾರೆ ನಾಟಕೋತ್ಸವವು ಗುಲ್ಬರ್ಗಾದ ಕಲಾರಸಿಕರಿಗೆ ಐದು ದಿವಸ ಚೇತೋಹಾರಿ ಅನುಭವ ನೀಡಿತು. ಕೊನೆಯ ದಿವಸದ ಎಳ್ಳ ಅಮಾವಾಸೆಯ ಈ ಭಾಗದ ಟಿಪಿಕಲ್ ಊಟದ ಸಜ್ಜೆ ಕಡಬು ಬಜ್ಜಿಪಲ್ಲೆ, ಹಿಂಡಿಪಲ್ಯಾ, ಭರ್ತಾ, ಮೇಲಿಷ್ಟು ಕುಸುಬಿ ಎಣ್ಣೆ, ಅಂಬಲಿ, ಹುಳಬಾನದಂಥ ಸ್ವಾದಿಷ್ಟ ಭೋಜನವೂ ಚರ್ಮದ ನಾಲಿಗೆಯಲ್ಲಿ ನೀರೂರಿಸಿದಂತೆ, ಕಲಾಜಿವ್ಹೆಗೂ ಈ ನಾಟಕಗಳು ನೀರೂರಿಸಿದವು.

ಗುಲ್ಬರ್ಗಾದಲ್ಲಿ ಇತ್ತೀಚೆಗೆ ನಡೆದ ನಾಟಕೋತ್ಸವ, ರಂಗಶಿಬಿರ ಸದಭಿರುಚಿಯನ್ನು ಪ್ರೇರೇಪಿಸುವ ಉತ್ತಮ ಯತ್ನವಾಗಿತ್ತು.

# ಸ್ವಾದಗೇಡಿ ನಾಲಿಗೆಯಲ್ಲಿ ಮತ್ತೆ ನೀರೂರಿತು

ಡಾ. ಮೀನಾಕ್ಷಿ ಬಾಳಿ

ಟಿ.ವಿ., ಸಿನೇಮಾ, ಇಂಟರ್‌ನೆಟ್ ಇತ್ಯಾದಿ ಹೈಟೆಕ್ ಮಾಧ್ಯಮಗಳ ಹಾವಳಿಯಲ್ಲಿ ನಮ್ಮ ನಾಲಿಗೆಗಳು ಸ್ವಾದ ಕಳೆದುಕೊಂಡು ರೋಗಿಷ್ಟವಾಗಿವೆ. ಜನರಿಗೆ ಇಷ್ಟವಾದುದನ್ನೇ ಕೊಡುತ್ತಿದ್ದೇವೆ ಎಂದು ಸುಳ್ಳು ಹೇಳುತ್ತಿರುವ ಇವು ಜನತೆಯ ಅಭಿರುಚಿಯ ಬಗೆಗೆ ತಲೆ ಕೆಡಿಸಿಕೊಂಡಿಯೇ ಇಲ್ಲ. ಆದರೆ ಜನತೆಯ ಮನಸ್ಸು, ಬುದ್ಧಿ, ಮತ್ತು ಜೇಬುಗಳನ್ನು ಹೇಗೆ ಕೆಡಿಸಬಹುದು ಎಂಬುದರಲ್ಲಿ ಮಲ್ಟಿ ಚಾನಲ್‌ಗಳಂತೂ ಪೈಪೋಟಿಯನ್ನೇ ನಡೆಸಿವೆ. ಎಲ್ಲ ಕಲಾ ಮಾಧ್ಯಮಗಳನ್ನು ನೇರವಾಗಿ ನಿಯಂತ್ರಿಸುತ್ತಿರುವ ಸಾಮ್ರಾಜ್ಯಶಾಹಿ ವ್ಯಾಪಾರಿಲೋಕದ ಮಾರುಕಟ್ಟೆಯ ತಂತ್ರಗಳು ಅರಿಯದವೇನಲ್ಲ. ತನ್ನ ಸರಕುಗಳಿಗೆ ಮಾರುಕಟ್ಟೆಯನ್ನು ಕಲ್ಪಿಸಿಕೊಳ್ಳಲೆಂದೇ ಅಭಿವೃದ್ಧಿಶೀಲ ರಾಷ್ಟ್ರಗಳ ಸಾಂಸ್ಕೃತಿಕ ಲೋಕವನ್ನು ಆಪೋಶನಗೈಯಲು ಇದು ಹೊರಟಿದೆ. ಆದರೆ ಪ್ರತಿಯೊಂದು ಜನಸಮೂಹಕ್ಕೂ ತನ್ನದೇ ಸಾಂಸ್ಕೃತಿಕ ರೋಗ ನಿರೋಧಕ ಶಕ್ತಿ ಇದ್ದೇ ಇರುತ್ತದೆ ಎಂಬ ಸತ್ಯವನ್ನು ಸಾಮ್ರಾಜ್ಯಶಾಹಿ ವ್ಯವಸ್ಥೆ ಮರೆಯಬಾರದು.

## ಹಿಂಸೆ, ಕ್ರೌರ್ಯ, ಏಕತಾನತೆಗಿಂತ ಭಿನ್ನ

ಮಲ್ಟಿ ಚಾನಲ್‌ಗಳ ಹಿಂಸೆ, ಕ್ರೌರ್ಯ, ಅಶ್ಲೀಲತೆ, ಮೌಢ್ಯ, ಏಕತಾನತೆಗಳಿಂದ ಬೇಸತ್ತು ಬಸವಳಿದಿರುವ ಜನತೆಗೆ ದೇಶೀ ಕಲಾಪ್ರಕಾರಗಳು ಮತ್ತೆ ನವೋನವೋನ್ಮೇಷಶಾಲಿಯಾಗಿ ಸೆಳೆಯುತ್ತಿವೆ. ಬೆತ್ತಲೆ ಬೊಂಬೆಗಳು ಹೇಸಿಗೆ ಹುಟ್ಟಿಸಿ, ಅಬ್ಬರದ ವಿಕೃತ ಸಂಗೀತ ರೇಜಿಗೆ ಎನಿಸಿ, ಮಲ್ಟಿನ್ಯಾಷನಲ್ ಕಂಪನಿಗಳ ಆ್ಯಡ್ ಐಟಂಗಳು ಕಿರಿಕಿರಿಯನ್ನುಂಟು ಮಾಡುತ್ತಿರುವ ಹೊತ್ತಲ್ಲಿ ನಮ್ಮದೇ ರಂಗಭೂಮಿಯ ಹೃದ್ಯ ನಾಟಕಗಳು ಎಂಥ ರಿಲೀಫ್ ನೀಡಬಲ್ಲವು ಎಂಬುದಕ್ಕೆ ಸಾಕ್ಷಿಯಾಗಿತ್ತು ಗುಲ್ಬರ್ಗಾದಲ್ಲಿ ಜರುಗಿದ ನಾಟಕೋತ್ಸವ. ಗುಲ್ಬರ್ಗಾದ ವಿಶ್ವವಿದ್ಯಾಲಯ ಮತ್ತು ಧಾರವಾಡದ ರಂಗಾಯಣ ಸಂಸ್ಥೆಯ ಸಹಯೋಗದಿಂದ ಗುಲ್ಬರ್ಗಾದ ಸಮುದಾಯ ಮತ್ತು ರಂಗಸಮಾಜಗಳ ನೇತೃತ್ವದಲ್ಲಿ ಒಂದು ತಿಂಗಳವರೆಗೆ ನಡೆದ ಯುವರಂಗ ಸಂಸ್ಕೃತಿ ತರಬೇತಿ ಶಿಬಿರ ಮತ್ತು ಐದು ದಿನಗಳ ನಾಟಕೋತ್ಸವವು ಗುಲ್ಬರ್ಗಾದ ಕಲಾರಸಿಕರಿಗೆ ರಸದೌತಣವನ್ನೇ ಉಣಬಡಿಸಿತು.



'ಗೋಡೆ' ನಾಟಕದ ದೃಶ್ಯ

## ಸಮೃದ್ಧ ಪರಂಪರೆ

ಗುಲ್ಬರ್ಗಾ ವಿಶ್ವವಿದ್ಯಾಲಯವು ಉಚ್ಚಮಟ್ಟದ ಶೈಕ್ಷಣಿಕ ಚಿಂತನೆಯ ಭಾಗವಾಗಿಯೇ ಧಾರವಾಡದ ರಂಗಾಯಣ ಘಟಕದೊಂದಿಗೆ ಸೇರಿಕೊಂಡು ಯುವಕರಿಗಾಗಿ ನಡೆಸಿದ ರಂಗಶಿಬಿರವು ಈ ಭಾಗದ ಉದಯೋನ್ಮುಖ ಕಲಾವಿದರಿಗಾಗಿ ನಾಟಕಕ್ಕೆ ಹೆಬ್ಬಾಗಿಲನ್ನೇ ತೆರೆದಂತಾಗಿದೆ. ಶೈಕ್ಷಣಿಕವಾಗಿ ಎಂತೋ ಅಂತೆಯೇ ಸಾಂಸ್ಕೃತಿಕವಾಗಿಯೂ ಅವಕಾಶ ವಂಚಿತರಾಗಿರುವ ಹೈದ್ರಾಬಾದ್ ಕರ್ನಾಟಕ ಭಾಗದ ಜನತೆ ಕಳೆದ ಅರವತ್ತು ವರ್ಷಗಳಿಂದಲೂ ಹಲವು ತಲ್ಲಣಗಳನ್ನು ಅನುಭವಿಸುತ್ತಿದೆ. ಸಮೃದ್ಧ ಸಾಹಿತ್ಯಕ, ಸಾಂಸ್ಕೃತಿಕ ಪರಂಪರೆಯನ್ನು ತನ್ನೊಡಲೊಳಗೆ ಇಂಬಿಟ್ಟುಕೊಂಡರೂ ಇಲ್ಲಿನವರು ಅಕಾರಣ ಕೀಳರಿಮೆಯನ್ನು ಅನುಭವಿಸುತ್ತಿದ್ದಾರೆ. ಶಾಹಿ ಅಂದಾಜಿನ ತಮ್ಮ ನಿರ್ಭೀಢ ನಿಲುವಿನಿಂದಾಗಿಯೇ ಕೆಲವೊಮ್ಮೆ ಮೂಲೆಗೆ ತಳ್ಳಲ್ಪಟ್ಟಿದ್ದಾರೆ. ಹೀಗಾಗಿ ಈ ಭಾಗದ ಗ್ರಾಮೀಣ ಪ್ರತಿಭೆಗಳನ್ನು ಗುರುತಿಸಿ, ನೇರ್ಪುಗೊಳಿಸುವ ಮೂಲಕ ಅವರ ಅಪಾರ ಶಕ್ತಿಸಾಧ್ಯತೆಯನ್ನು ಮುಂಚೂಣಿಗೆ ತರುವ ಕೈಂಕರ್ಯವನ್ನು ಯಾರು ಮಾಡಬೇಕು? ಇದೊಂದು ಯಕ್ಷಪ್ರಶ್ನೆಯೇ ಸರಿ. ಇದರ ಹಿಂದೆ ಹತ್ತಾರು ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು



ಸಾಂಸ್ಕೃತಿಕ ರಾಜಕಾರಣದ ಸುಕ್ಕುಗಳಿವೆ. ಅವುಗಳ ವಿವೇಚನೆ ಇಲ್ಲಿ ಅಪ್ರಸ್ತುತ ಮತ್ತು ಅಪ್ರಾಸಂಗಿಕ. ಆದರೆ ಇಂಥ ಬಿಕ್ಕಟ್ಟುಗಳ ಮಧ್ಯೆಯೂ ಸಿ.ಬಸವಲಿಂಗಯ್ಯನವರಂಥ ಜನಪರ ಚಿಂತಕ ನಿರ್ದೇಶಕರಿಂದಾಗಿಯೇ ಈ ಸಲ ತಿಂಗಳಪರ್ಯಂತ ನಡೆಸಿದ ರಂಗ ತರಬೇತಿ ಶಿಬಿರದಲ್ಲಿ ಅಫಜಲಪೂರ, ಸೇಡಂ, ಜೇವರ್ಗಿ, ಹಗರಿಬೊಮ್ಮನಹಳ್ಳಿ, ಕುಷ್ಟಗಿ, ಯಾದಗೀರ, ಸಿಂಧನೂರ, ಹೊಸಪೇಟ, ಚಿತ್ತಾಪುರ ಮುಂತಾದ ತಾಲ್ಲೂಕುಗಳ ಒಳ ಅಂಚಿನ ಹಳ್ಳಿಗಳಿಂದ ಬಂದ ಯುವಕರು ಪಾಲ್ಗೊಂಡಿದ್ದರು. ಸರಿಯಾಗಿ ಮಾತಾಡಲು, ಶುದ್ಧವಾಗಿ ಉಚ್ಚರಿಸಲು, ಕನಿಷ್ಠ ಮಟ್ಟ ಓದಲು ಬರದಂಥ ಥೇಟ್ ಗಮ್ಮಾರರನ್ನು ಪುಟ್ಟ ಅವಧಿಯಲ್ಲಿ ಪಳಗಿಸಿ, ನಾದಿ ಮಿದ್ದು ಹದಗೊಳಿಸಿ "ತಾಜಮಹಲ್ ಟೆಂಡರ್"ನಂಥ ಪ್ರಭುದ್ಧ ನಾಟಕ ಮಾಡಿಸಿದ್ದು ನಿಜಕ್ಕೂ ಶ್ಲಾಘನೀಯ.

## ಸೃಜನಲೋಕ

ರಂಗಭೂಮಿ ಎಂಬುದು ಶುದ್ಧ ಸೃಜನಲೋಕ. ಅಂತೆಯೇ ಅದು ಸಂಕೀರ್ಣ ಕಲಾ ಮಾಧ್ಯಮವು ಹೌದು. ಒಂದು ಕಾಲದಲ್ಲಿ ಶಿಷ್ಟಪದ ಲೋಕಕ್ಕೆ ಸೀಮಿತವಾಗಿದ್ದ ಅಭಿಜಾತ ರಂಗಭೂಮಿಯನ್ನು ಜನಪರ ಬೀದಿಗೆ ಎಳೆದು ತಂದದ್ದರ ಹಿಂದೆ ದೊಡ್ಡ ಚಳುವಳಿಯೇ ಇದೆ. ಸಮುದಾಯ ಜನನಾಟ್ಯಮಂಚ್, ಇಪ್ಟಾ ಇಂಥ ಕಲಾಸಂಸ್ಥೆಗಳ ಸಾಧನೆ ಇವತ್ತಿಗೂ ಭಾರತೀಯ ರಂಗಭೂಮಿ ಚಳುವಳಿಯಲ್ಲಿ ಒಂದು ಮೈಲಿಗಲ್ಲು ಎಂಬುದರಲ್ಲಿ ಎರಡು ಮಾತಿಲ್ಲ.



ಸಿ.ಬಸವಲಿಂಗಯ್ಯ, ಪಿ.ಗಂಗಾಧರಸ್ವಾಮಿ, ಶಂಕರಯ್ಯ ಘಂಟಿ ಮುಂತಾದ ರಂಗಪ್ರತಿಭೆಗಳು ಇಂಥ ಜನಮುಖಿ ಚಳುವಳಿಯ ಭಾಗವಾಗಿಯೇ ಬಂದವರು. ಆದ್ದರಿಂದಲೇ ಇವರು ಪ್ರಸ್ತುತ ಶಿಬಿರವನ್ನು ಒಂದು ಸವಾಲಾಗಿಯೇ ಇದಿರುಗೊಂಡು ಒಂದು ಕಡೆ ರಂಗಭೂಮಿ ಇನ್ನೊಂದೆಡೆ ಗ್ರಾಮೀಣ ಶಕ್ತಿ ಸಾಧ್ಯತೆ ಎರಡನ್ನು ಸಾಧ್ಯವಾಗಿಸಿದರು.

## ಭರವಸೆ

ಶಿಬಿರದಲ್ಲಿ ಕಲಿತ ನಾಟಕದೊಂದಿಗೆ ಇತರ ಎರಡು ತಂಡಗಳಿಂದ ತಲಾ ಎರಡು ನಾಟಕಗಳನ್ನು ಪ್ರದರ್ಶಿಸುವ ನಾಟಕೋತ್ಸವ ಏರ್ಪಡಿಸಿದ್ದು ಗುಲಬರ್ಗಾ ಕಲಾಸಕ್ತರಿಗಂತೂ ಎಳ್ಳಮಾಸೆ ಹಬ್ಬದೊಂದಿಗೆ ಬೋನಸ್ ಸಿಕ್ಕಂತೆ ಆಗಿತ್ತು. 4.01.08 ರಿಂದ 8.01.08 ರವರೆಗೆ ಪ್ರತಿದಿನ ಸಾಯಂಕಾಲ 6.30ಕ್ಕೆ ಪ್ರದರ್ಶನ ನಾಟಕಗಳಿಗೆ ಕಿಕ್ಕಿರಿದು ನೆರೆದಿದ್ದ ಪ್ರೇಕ್ಷಕವರ್ಗವು ಸೃಜನಶೀಲ ಕಲಾ ಪ್ರಕಾರಗಳು ಯಾವತ್ತೂ ಕಾಲದ ಹೊಡೆತವನ್ನು ಮೀರಿ ನಿಲ್ಲಬಲ್ಲವು ಎಂಬುದನ್ನು ತೋರಿಸಿಕೊಟ್ಟಿತು. ಮಾಮೂಲಿ ಇಂಥ ಪ್ರದರ್ಶನಗಳಿಗೆ ಬರುವ ಹಿರಿಯ ಪ್ರೇಕ್ಷಕರಿಗಿಂತ ಹದಿಹರೆಯದ ಯುವದಂಡು ಈ ಸಲ ಹೆಚ್ಚಿನ ಸಂಖ್ಯೆಯಲ್ಲಿ ಪ್ರೇಕ್ಷಕರಾಗಿದ್ದು ಮತ್ತು ಅವರು ತುಂಬು ಕುತೂಹಲಭರಿತರಾಗಿ ನಾಟಕ ವೀಕ್ಷಿಸಿದ್ದು ರಂಗಕರ್ಮಿಗಳಲ್ಲಿ ಭರವಸೆಯನ್ನು ಮೂಡಿಸಿತು.

"ರಂಗ ಭಾರತಿ" ರಂಗಯಾತ್ರೆ ಹೂವಿನ ಹಡಗಲಿ ರೇಪರ್ಟರಿಯು ಸಿದ್ಧಪಡಿಸಿದ ಚಂದ್ರಶೇಖರ ಕಂಬಾರರಚಿತ "ಮಹಾಮಾಯಿ" ನಾಟಕವು ಶ್ರೀಮಂತ ಸಮೃದ್ಧ ಪಠ್ಯ ಮತ್ತು ಬಸವಲಿಂಗಯ್ಯನವರಂಥ ಸಮರ್ಥ ನಿರ್ದೇಶಕರಿಂದಾಗಿಯೇ ಜನಮನವನ್ನು ಸೂರೆಗೊಂಡಿತು. ಜಾನಪದ ಕಥೆ, ಗಾದೆ, ಮಾತಿನ ವೈಖರಿ ಇವೆಲ್ಲವೂ ಪಠ್ಯದಂಗವಾಗಿ ದುಡಿಸಿಕೊಂಡಿದ್ದರೆ, ಜಾನಪದ ಮಟ್ಟುಗಳು, ಪ್ರಸಾಧನ, ರಂಗಸಜ್ಜಿಗೆ ಇವೆಲ್ಲ ನಿರ್ದೇಶಕರ ರಂಗ ಪರಿಕಲ್ಪನೆ ಭಾಗವಾಗಿ ದುಡಿದಿದ್ದವು. ವಿಶ್ವದಾದ್ಯಂತ ಮನುಷ್ಯರಿಗೆ ಅಂದಿನಿಂದ ಇಂದಿನವರೆಗೆ ಅಪಾರವಾಗಿ ಕಾಡಿದ ಸಂಗತಿಗಳೆಂದರೆ ಎರಡೇ ಎರಡು. ಅವು ಒಂದು ಸಾವು. ಇನ್ನೊಂದು ಪ್ರೇಮ. ಜಗತ್ತಿನ ಅನ್ವೇಷಣೆಗಳು ಈ ಎರಡು ಸಂಗತಿಗಳ ಸುತ್ತಲೂ ಗಿರಿಕಿ ಹೊಡೆಯುತ್ತಿರುವಾಗಲೂ ಇವು ಮಾತ್ರ ಅಗಮ್ಯವಾಗಿ, ನಿಂತಾಂತವಾಗಿ ನಿಂತು ಅಣಕಿಸುತ್ತಿವೆ ಎಂಬುದನ್ನು ಮಹಾಮಾಯಿ ನಾಟಕ ತೋರಿಸುತ್ತದೆ. ಸಾವಿನ ದೇವತೆಯಾದ ಶೆಟವಿ (ಶೆಟಗೆವ್ವ) ಮತ್ತು ಆಕೆಯ ಮಾನಸಪುತ್ರನಾದ ವೈದ್ಯಶಿವ ಇವರಿಬ್ಬರ ನಡುವೆ ನಡೆಯುವ ಸಂಘರ್ಷವೇ ನಾಟಕದ ವಸ್ತು. ವೃತ್ತಿಯಿಂದ ವೈದ್ಯವಾದ "ಶಿವ" ತಾಯಿಯ ಆಶೀರ್ವಾದ ಬಲದಿಂದ ಎಂಥ ರೋಗಿಯನ್ನಾದರೂ ಬದುಕಿಸಬಲ್ಲ. ಅವಳ ಅಪ್ಪಣೆ ಇಲ್ಲವಾದರೆ ವೈದ್ಯ ಶಪಿಸಿ ಮದ್ದು ಕೆಲಸ ಮಾಡಲಾರದು. ಶಿವನು ತನ್ನ ಪ್ರೇಯಸಿಯನ್ನು ಉಳಿಸಲಾಗದೆ ಒದ್ದಾಡುತ್ತಾನೆ. ಮೊದಲ ಬಾರಿಗೆ ವೈದ್ಯ ಶಿವನಿಗೆ ತಾಯಿ ತನಗಿತ್ತ ವರವೆಂಬ ಶಾಪದ ಅರಿವಾಗುತ್ತದೆ. ಪ್ರೇಮದ ಸನ್ನಿದಿಯಲ್ಲಿ ದೈವತ್ವವನ್ನು ದಿಕ್ಕರಿಸುವ ವೈದ್ಯಶಿವ ತಾನು ಮನುಷ್ಯ ಮಾತ್ರನಾಗಿ ಉಳಿಯಲು ಹಂಬಲಿಸುತ್ತಾನೆ. ಮಹಾಮಾಯಿ ರಣಚಂಡಿ ತಾಯಿಯ ಕೋಪ, ಶಾಪಗಳನ್ನೆಲ್ಲ ಮೆಟ್ಟಿ ನಿಲ್ಲುವ ಶಿವ ಕೊನೆಗೂ ತನ್ನ ಪ್ರೇಮೋತ್ಕಟತೆಯ ಬಲದಿಂದ ಸಾವನ್ನು ಗೆಲ್ಲುತ್ತಾನೆ. ಪ್ರೇಮದ ಸನ್ನಿಧಿಯಲ್ಲಿ ತನ್ನಲ್ಲಿರುವ ದೈವೀಶಕ್ತಿಯನ್ನು ಬಲಿಕೊಡಲು ಸಿದ್ಧನಾಗುವ ಶಿವ ರಾಜಕುಮಾರಿಯನ್ನು ಕುರಿತು "ಕನಸುಗಳನ್ನು ನಂಬಬೇಕು ಮತ್ತು ಅವುಗಳಿಗೆ ಹುಚ್ಚುತನ ಬೆರೆತಿರಬೇಕು" ಎಂದೇ ಉದ್ಗರಿಸುತ್ತಾನೆ.



ಹಾಗೆ ನೋಡಿದರೆ ನಾಟಕದ ವಸ್ತು ಗಂಭೀರವಾದದ್ದೆ. ಸಂಭಾಷಣೆಯೂ ಅಷ್ಟೇ ತರ್ಕದ ಬೆನ್ನುಹತ್ತಿ ತತ್ವಶಾಸ್ತ್ರದ ಪರಿಧಿಗೆ ನಿಲ್ಲುವಂಥದ್ದು. ಯಥಾ ಪ್ರಕಾರ ಕಂಬಾರರ ರೂಪಕಾತ್ಮಕ ಸಂಭಾಷಣಾ ಶೈಲಿ ಇಲ್ಲಿಯೂ ವಿಜೃಂಭಿಸುತ್ತದೆ. ನಿರ್ದೇಶಕ ಬಸವಲಿಂಗಯ್ಯನವರು ಅಷ್ಟೇ ಸಮರ್ಥವಾಗಿ ಅಭಿನಯ ಕೌಶಲ್ಯ ಮತ್ತು ರಂಗಸಜ್ಜಿಕೆಗಳನ್ನು ದುಡಿಸಿಕೊಳ್ಳುವ ಮೂಲಕ ವಿಜೃಂಭಿಸುತ್ತಾರೆ. ಬಯಲಾಟ, ಯಕ್ಷಗಾನ, ಹಂತಿಪದ, ಭಜನಾಧಾಟಿ ಹೀಗೆ ವೈವಿಧ್ಯಪೂರ್ಣ ಮಟ್ಟುಗಳನ್ನು ಬಳಸಿಕೊಂಡದ್ದರ ಫಲವಾಗಿಯೂ ನಾಟಕ ಪರಿಣಾಮಕಾರಿ ಎನಿಸಿದೆ. ವಸ್ತ್ರವಿನ್ಯಾಸ, ಪ್ರಸಾಧನಗಳು ವೃತ್ತಿ ರಂಗಭೂಮಿಗಿಂತಲೂ ಭರ್ಜರಿಯಾಗಿಯೇ ಮೇಳೈಸಿಕೊಂಡಿವೆ. ನುರಿತ ಕಲಾವಿದರು ತಮ್ಮ ನಟನಾಸಾಮರ್ಥ್ಯದಿಂದಲೂ ನಾಟಕಕ್ಕೆ ಕಳೆ ಏರಿಸಿದ್ದಾರೆ. ಸಂಗೀತ ಸಂಯೋಜನೆ ಇವೆಲ್ಲ ಸೈ ಎನಿಸಿಕೊಂಡವಾದರೂ ಕಂಠಸಿರಿಯ ಕೊರತೆಯೊಂದು ಎದ್ದುಕಾಣಿಸುತ್ತಿತ್ತು. ನಾಟಕಕ್ಕೆ ಜೀವಾಳವಾದ "ಹಾಡುಗಾರಿಕೆ; ಅದು ಮುಮ್ಮೇಳವೇ ಇರಬಹುದು. ಹಿಮ್ಮೇಳನವೇ ಇರಬಹುದು ಒಂದಷ್ಟು ದುರ್ಬಲವೇ ಆಗಿತ್ತು. ಇದೇ ತಂಡದವರು ಮರುದಿನ ಪ್ರದರ್ಶಿಸಿದ "ಶಿವಶಂಭೋ ಶಂಕರ" ನಾಟಕ ಹಾಸ್ಯಪ್ರಧಾನ

ಪುಟ 14ಕ್ಕೆ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12. 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH